

ಸಂಚಯ


ಸಾಂಸ್ಕೃತಿಕ ಪತ್ರಿಕೆ

೭೦

ಗ್ಯಾಲರಿ



ಎಂ.ಎಸ್. ನಂಜುಂಡರಾವ್‌ರವರ ಕಲಾಕೃತಿ



ಈಗ ನಾವೆಲ್ಲ ಕಾಗದ–ಪೆನ್ನು ಬದಿಗಿಟ್ಟು ಬರೆಯಬೇಕು. ಈ ಬೇಸಿಗೆಯಲ್ಲಿ, ಒಂದು ಪುಟ್ಟ ತಾಯಿ ಬೇರಿಗೆ ನೀರುಣಿಸುವುದು, ಕವಿತೆ ಬರೆಯುವುದಕ್ಕಿಂತ ಯಾಕೆ ಮುಖ್ಯವಲ್ಲ ?.

–ಆನಂದರಝುಂಜರವಾಡ

ಸಂಚಯ

ಸಾಂಸ್ಕೃತಿಕ ಪತ್ರಿಕೆ
ತ್ರೈಮಾಸಿಕ

ಸಂಪುಟ : ೧೨
ಸಂಚಿಕೆ : ೩(೬೦)
ಮೇ ೨೦೦೩

ಸಂಪಾದಕ :
ಡಿ.ವಿ.ಪ್ರಹ್ಲಾದ್

ಚಂದಾ ವಿವರ

ಬಿಡಿ ಪ್ರತಿ : ರೂ ೨೫/-
ವಾರ್ಷಿಕ ಚಂದಾ : ರೂ ೧೦೦/-
ಎರಡು ವರ್ಷ : ರೂ ೨೦೦/-
ಐದುವರ್ಷ : ರೂ ೫೦೦/-

ಮುಖ ಪುಟ
ರವಿಕಾಶಿ , ರಂಗನಾಥ್ ಅವರ ಛಾಯಾಚಿತ್ರ ಪ್ರಯೋಗ
ಮತ್ತು ಸೃಜನ್ ಅವರ ರೇಖಾ ಚಿತ್ರಗಳು

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯ ರಸ್ತೆ,
೬ ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ,
ಬೆಂಗಳೂರು ೫೬೦ ೦೮೫
ಫೋನ್ ನಂ. ೦೮೦-೬೭೯೧೯೨೫

ಪ್ರತಿಕ್ರಿಯೆ

2002 ರ ಸಾಹಿತ್ಯ ಸ್ಪರ್ಧೆಯ ಬಹುಮಾನಿತ ಬರಹಗಳ ಆಗರವಾಗಿದ್ದ ಪತ್ರಿಕೆ ಖುಷಿ ಕೊಟ್ಟಿತು. ಕಥೆ ಕವಿತೆಗಳೊಂದಿಗೆ ಲೇಖನಗಳು ಒದಗಿಸಿಕೊಟ್ಟ ಸಂಚಯದ ಶ್ರಮ ಶ್ಲಾಘನೀಯ. ಎಲ್ಲಕ್ಕೂ ಹೆಚ್ಚಾಗಿ HSR ಅವರ ಅನುವಾದಿತ ಲೇಖನ ಉಪಯುಕ್ತವಾಗಿತ್ತು. ನಿಜಕ್ಕೂ ಇಂತಹ ಹಿರಿಯ ಚೇತನಗಳು ತೆರೆ ಮರೆಯಲ್ಲಿ ಕೂರದೆ ನಮ್ಮಂತಹ ಕಿರಿಯರಿಗಾಗಿ ಇಂತಹ ಪ್ರಯತ್ನಗಳನ್ನು ಅಗತ್ಯವಾಗಿ ಮಾಡಬೇಕು. ಕಳೆದ ಬಾರಿಯಿಂದ ಗಮನಿಸಿದರೆ ರೇಖಾ ಚಿತ್ರಗಳ ಸದ್ಬಳಕೆ ಆದರೆ ಹಿಂಬದಿಯ ಪುಟಗಳನ್ನು ಬಳಸಿಕೊಂಡಿಲ್ಲ ಏಕೆ ?

– ಯು.ಎನ್. ಬಾಲಕೃಷ್ಣ ಶಹಪುರ, ಗುಲ್ಬರ್ಗಾ ಜಿಲ್ಲೆ

ಸಂಚಯದ ಸಂಚಿಕೆ ತಲುಪಿತು. ಈಗ ನಿಯಮಿತವಾಗಿ ಬರುತ್ತಿರುವುದರಿಂದ ಆತ್ಮೀಯವೆನಿಸುತ್ತದೆ. ಈ ಸಂಚಿಕೆಯ ಹೊಸಬರ ವಿಮರ್ಶೆಯ ಬರಹಗಳು ಮತ್ತು ಪುಸ್ತಕ ರಿವ್ಯೂ ತುಂಬಾ ಚೆನ್ನಾಗಿದೆ. ಸಾಹಿತ್ಯದಲ್ಲಿ ಯಾವಾಗಲೂ ಯುವಕರು ಹೊಸಬರ ಬರವಣಿಗೆಯೇ ಜೀವಂತವಾಗಿರುವುದು. ಹಿರಿಯ ಲೇಖಕರ ಬರಹಗಳಲ್ಲಿ ಶಿಸ್ತು ಅಚ್ಚುಕಟ್ಟುಇರುತ್ತದೆ. ಜೀವಂತಿಕೆ ಮತ್ತು ಅದಕ್ಕಾಗಿ ತುಡಿತವೇ ಇರುವುದಿಲ್ಲ ನಿಮ್ಮ ಪತ್ರಿಕೆಯಲ್ಲಿ ಹೊಸಬರ ವಿಮರ್ಶೆ ಚಿಂತನೆಗಳನ್ನು ಹೆಚ್ಚಾಗಿ ಪ್ರಕಟಿಸಿ This will be your singular service.

–ಕೆ. ಸತ್ಯನಾರಾಯಣ, ಚೆನ್ನೈ

ಸಂಚಯದ ಕೆಲಸದ ಜೊತೆಗೇ ನೀವೂ ಬರೆಯಬೇಕು. ಬರೆಯದೆ ನೀವೆಲ್ಲ ಹಾಳಾಗಿ ಹೋಗುತ್ತಿದ್ದೀರಿ. ಇದು ತಮಾಷೆಯ ಮಾತಲ್ಲ. ಸಾಧ್ಯವಾದಷ್ಟು ಬರೆಯಲು ಪ್ರಯತ್ನಿಸಿ.

– ಸಂದೀಪ ನಾಯಕ್, ಅಂಕೋಲಾ, ಉ.ಕ.

ಪತ್ರಿಕೆಯ ವಿನ್ಯಾಸ ಆಪ್ತವಾಗಿದೆ. ಪದ್ಯಗಳು ಲೇಖನಗಳು ಉತ್ತಮವಾಗಿದೆ. ಆದರೆ ನನಗೆ ಈ ಕಾಲದ ಸಾಹಿತ್ಯಪತ್ರಿಕೆಗಳು ಇನ್ನೂ ಭಿನ್ನವಾಗಿ ಸಮರ್ಥವಾಗಿ ರಾಜಕೀಯ ದೃಷ್ಟಿಕೋನವಿಟ್ಟುಕೊಂಡು, ನಮ್ಮ ಸಾಹಿತ್ಯ ಪರಂಪರೆಯೊಂದಿಗೆ ಸೂಕ್ಷ್ಮವಾಗಿ ತಾತ್ವಿಕ ಜಗಳವಾಡುತ್ತಾ ಬರಬೇಕೆನಿಸುತ್ತಿದೆ. ಹೀಗೆ ಹೇಳುವುದು ಎಷ್ಟು ಸುಲಭ ಮಾಡುವುದು ಬಲು ಕಷ್ಟ.

– ವಿಕ್ರಮ ವಿಸಾಜಿ, ಸೊಂಡೂರು

ಪ್ರತಿ ವರ್ಷವು ಬಹುಮಾನಗಿಟ್ಟಿಸುವ ಅವಕಾಶ ಬಂದು ಬಾಗಿಲು ತಟ್ಟುತ್ತದೆ. ಬರಹ ರೆಕ್ಕೆ ಬಿಚ್ಚುತ್ತದೆ. ಅನಂತ ಆಕಾಶದಲ್ಲಿ ಕಣ್ಣಿಗೆ ಕೆಲವು ನಕ್ಷತ್ರಗಳು ಹೊಳೆಯುತ್ತವೆ, ಬಹುಮಾನಿತ ಬರಹ ಹೊತ್ತ ಸಂಚಯ ಖುಷಿ ಕೊಟ್ಟಿತು. ಓದುವಿಕೆಗೆ ತೆರೆದುಕೊಳ್ಳದೆ ಜಡ್ಡುಗಟ್ಟಿದ್ದ ನಾನು ಎಷ್ಟೋ ವರ್ಷಗಳ ನಂತರ ಹೊಸತೊಂದಕ್ಕೆ ಆತುಕೊಂಡೆ. ಥ್ಯಾಂಕ್ಸ್.

– ವಾಸುದೇವ ನಾಡಿಗ್, ರಾಯ್‌ಪುರ, ಛತ್ತೀಸ್‌ಗಢ

ಈ ಸಂಚಿಯದಲ್ಲಿ ...


ಹೊಳೆದದ್ದೆ ತಾರೆ,
ಉಳಿದದ್ದು ಆಕಾಶ !

ಪ್ರಿಯ ಓದುಗರೆ,

ಕೊನೆಗೂ ಯುದ್ಧ ದೂರದಲ್ಲಿ ಎಲ್ಲೋ ನಡೆಯದೆ, ನಮ್ಮ ಮನೆಗಳ ಟೀವಿ ಪರದೆಗಳ ಮೇಲೆ ಕೊನೆಗೊಂಡಿದೆ. ಯುದ್ಧವನ್ನು ವಿರೋಧಿಸಿದವರ ಮತ್ತು ಸಮರ್ಥಿಸಿದವರ ಎರಡೂ ತರ್ಕಗಳನ್ನ ಮೀರಿ ಅಮಾನುಷ ರಕ್ತ ಪಾತ ಸಾವು ನೋವು ಮಾನವೀಯತೆಗೆ ಸವಾಲು ಎಸೆಯುತ್ತಲೇ ಇವೆ.



"ಆರಂಭಿಕ ಹಂತದಲ್ಲಿ ಯುದ್ಧಗಳ ಉದ್ದಿಶ್ಯ ಭೂಮಿಯ ವಿಸ್ತರಣೆಯಾಗಿತ್ತು. ಪಂಪನ ಆದಿಪುರಾಣದಲ್ಲಿ ಜಗತ್ತನ್ನೇ ಜಯಿಸಿದ ಚಕ್ರವರ್ತಿ ಭರತನನ್ನ ಬಾಹುಬಲಿ ಸೋಲಿಸಿ, ಮೇಲಕ್ಕೆ ಎತ್ತಿ ಹಿಡಿದು ಕೆಲವು ಕ್ಷಣ ಅವನಿಗೆ ನಿಲ್ಲಲು ನೆಲವಿಲ್ಲದ ಹಾಗೆ ಮಾಡಿರುತ್ತಾನೆ. ಅನಂತರ ಮಧ್ಯ ಕಾಲದಲ್ಲಿ ಕುಮಾರವ್ಯಾಸನ ಕಾಲಕ್ಕೆ ಯುದ್ಧದಲ್ಲಿ ಸುಪ್ರತೀಕ ಗಜದಿಂದ ಭಗದತ್ತನು ಬೀಳುವಾಗ ಅವನನ್ನ ಬಂಗಾರದ ಮೂಟೆಗೆ ಹೋಲಿಸುತ್ತಾನೆ. ಆ ಕಾಲಕ್ಕೆ ಬಂಗಾರ ಗಳಿಕೆ ಮುಖ್ಯ ಉದ್ದೇಶ್ಯವಾಯ್ತು. ಈಗಿನ ಯುದ್ಧ ಅದೊಂದು ಕಾರ್ಪೋರೇಟ್ ಮೇಲಾಟಗಳ ಯುದ್ಧ." ಹೀಗೆ ಕಿ.ರಂ. ನಾಗರಾಜ ಅವರು ಯುದ್ಧಗಳನ್ನು ಕುರಿತು ಕಾವ್ಯದ ಒಳನೋಟಗಳ ಮೂಲಕ ವಿವರಿಸುತ್ತಿದ್ದಾಗ ನಾವುಗಳು ಆಶ್ಚರ್ಯದಿಂದ ಕೇಳುತ್ತಿದ್ದೆವು. ಪ್ರತಿಸಲದ ಮಾತಿನಲ್ಲಿ ಅದು ಎಲ್ಲೇ ಆಗಿರಲಿ ಸೆನೆಟ್ ಹಾಲಿನ ಕಿಕ್ಕಿರಿದ ಸಭಾಂಗಣವಿರಬಹುದು ಅಥವಾ ಗಾಂಧಿಬಜಾರಿನ ಅಂಚಿನ ಫುಟ್‌ಪಾತಿನಲ್ಲಿರಬಹುದು. ಕಿ.ರಂ. ಮಾತಿಗೆ ನಿಂತರೆ, ಅಲ್ಲಮ, ಪಂಪ, ಅಡಿಗ, ಬೇಂದ್ರೆ, ಕುಮಾರವ್ಯಾಸರು ಜೀವತಳೆದು ಎದುರು ನಿಲ್ಲುತ್ತಾರೆ. ಅವರು ಭೂತಕಾಲದಿಂದ ವರ್ತಮಾನದಲ್ಲಿ ಪ್ರತಿಸಲವು ಹೊಸತಾಗಿ ಜೀವಂತಗೊಳ್ಳುತ್ತಾರೆ.



ನಮ್ಮಗಳ ಅನೇಕ ಮೇಷ್ಟುಗಳ ಮೇಷ್ಟು ಕೆ.ವಿ.ನಾರಾಯಣ ಅವರ ವಿದ್ವತ್ತು ಮತ್ತು ವಿಚಾರಗಳಿಗೆ ಜಿ.ಎಸ್.ಎಸ್ ಪ್ರಶಸ್ತಿ ದೊರಕಿದೆ. ಕಿ.ರಂ. ಗೆ ಎಲ್. ಬಸವರಾಜು ಪ್ರತಿಷ್ಠಾನದ ಗೌರವ ಲಭಿಸಿದೆ. ಈ ಇಬ್ಬರು ಮೇಷ್ಟುಗಳು ನಮ್ಮಗಳ ಸಂಭ್ರಮಕ್ಕೆ ಕಾರಣದ್ದಾರೆ. ಅವರಿಬ್ಬರ ಆರೋಗ್ಯ, ಕಾವ್ಯ ಪ್ರೀತಿ ಎರಡೂ ಗಟ್ಟಿಯಾಗಿರಲಿ ನಿರಂತರವಾಗಿರಲಿ.

ಈ ಸಂಚಿಕೆ ಅರವತ್ತನೆಯದು. ಹೊಸ ಆಲೋಚನೆ ಹೊಸ ಪ್ರಯೋಗಗಳು ನಮ್ಮ ಕನಸುಗಣ್ಣಿಗಿದೆ. ವಿಸ್ತರಿಸುತ್ತಿರುವ ಓದುಗ ಬಳಗ ಅವರ ಪ್ರೀತಿ ಜೊತೆಗಿದ್ದೇ ಇದೆ. ನಿಮ್ಮ

–ಸಂಪಾದಕ

ಬರವಣಿಗೆಯ ಮಾಯಾಂಗನೆಯ ಬೆನ್ನು ಹತ್ತಿ

-ಖುಷ್ವಂತ್ ಸಿಂಗ್

ಅನು : ಜಿ.ಬಿ.ಹರೀಶ್



ಇದು ಅಂಕಣಕಾರ ಸರ್ದಾರ್ ಖುಷ್ವಂತ್ ಸಿಂಗ್ ಅವರ ಆತ್ಮ ಕಥೆಯಿಂದ (Truth, Love and Little Malice) ಆಯ್ದ ತುಣುಕುಗಳು. ಬರಹಗಾರನ ಆಂತರಿಕ ಒತ್ತಡಗಳು ಮತ್ತು ಭಾರತದ ವರ್ತಮಾನದ ಲೇಖಕರ ಬಗ್ಗೆ ಒಳನೋಟಗಳಿರುವ ಬರಹ. ಖುಷ್ವಂತ್ ಸಿಂಗ್ ಹುಟ್ಟಿದ್ದು 1915ರಲ್ಲಿ. ಪಂಜಾಬಿನ (ಈಗ ಪಾಕಿಸ್ಥಾನ) ಹದಲಿಯಲ್ಲಿ. ಲಾಹೋರಿನ ಸರ್ಕಾರಿ ಕಾಲೇಜು, ಲಂಡನ್ನಿನ ಕಿಂಗ್ಸ್ ಕಾಲೇಜ್ ಮತ್ತು ಇನ್ನರ್ ಟೆಂಪಲ್‌ನಲ್ಲಿ ಶಿಕ್ಷಣ ಮುಗಿಸಿದ ಖುಷ್ವಂತ್ ವಕೀಲರಾಗಿ ವೃತ್ತಿ ಜೀವನ ಆರಂಭಿಸಿದವರು. ಲಾಹೋರಿನ ಹೈಕೋರ್ಟಿನಲ್ಲಿ ಕೆಲವು ವರ್ಷ ವಕೀಲಿ ನಡೆಸಿದ ನಂತರ ಭಾರತ ವಿಭಜನೆಯ ಬೆಂಕಿಯಿಂದ ಪಾರಾಗಿ ಭಾರತಕ್ಕೆ ಬಂದು, ವಿದೇಶಾಂಗ ಖಾತೆಯಲ್ಲಿ ಕೆಲಸಕ್ಕೆ ಸೇರಿದರು (1947). ರಾಜತಾಂತ್ರಿಕ ಹುದ್ದೆಗಳನ್ನು ಅನುಭವಿಸಿ, ಕೆನಡಾ ಮತ್ತು ಲಂಡನ್ನಿನಲ್ಲಿ ಕೆಲಸ ಮಾಡಿದ್ದು ಸಾಲದೆ ಯುನೆಸ್ಕೊ ಸದಸ್ಯರಾಗಿ ಪ್ಯಾರಿಸಿನಲ್ಲು ಕೆಲ ಕಾಲ ಇದ್ದರು. 1951ರಲ್ಲಿ ಖುಷ್ವಂತರ ಜೀವನದ ಮತ್ತೊಂದು ಮಗ್ಗುಲು ಆರಂಭವಾಯ್ತು. ಆಕಾಶವಾಣಿಯ ಮೂಲಕ ಪತ್ರಿಕೋದ್ಯಮಕ್ಕೆ ಬಂದ ಅವರು ಯೋಜನಾ ಪತ್ರಿಕೆಯ ಮೊದಲ ಸಂಪಾದಕರಾಗಿದ್ದರು. ನಂತರ 'ಇಲ್ಲಸ್ಟ್ರೇಟಡ್ ವೀಕ್ಲಿ ಆಫ್ ಇಂಡಿಯಾ', 'ನ್ಯಾಷನಲ್ ಹೆರಾಲ್ಡ್' ಮತ್ತು 'ಹಿಂದುಸ್ಥಾನ್ ಟೈಮ್ಸ್' ಪತ್ರಿಕೆಗಳ ಸಂಪಾದತತ್ವ ವಹಿಸಿ ಆ ಪತ್ರಿಕೆಗಳಿಗೆ ಹೊಸಹೊಳಪು ನೀಡಿದರು. ಅವುಗಳ ಪ್ರಸಾರ ಸಂಖ್ಯೆ ಹೆಚ್ಚುವಂತೆ ನೋಡಿಕೊಂಡರು. ಭಾರತದ ಅತಿ ಜನಪ್ರಿಯ ಲೇಖಕರಲ್ಲೊಬ್ಬರಾದ ಖುಷ್ವಂತ್ ಕತೆ, ಕಾದಂಬರಿ, ಇತಿಹಾಸ ರಾಜಕೀಯವನ್ನು ಕುರಿತು ಉತ್ತಮ ಕೃತಿಗಳನ್ನು ಹೆತ್ತಿದ್ದಾರೆ. ಬರಹಗಾರನ ಲೇಖನಿಯಿಂದ ಸುಖಪ್ರಸವವಾಗುವುದಿಲ್ಲ ಎಂದು ಅನುಭವಪೂರ್ವಕ ಮಾತನಾಡುವ ಅವರೊಂದಿಗೆ ಅವರದೇ ಮಾತುಗಳಲ್ಲಿ ಒಂದಿಷ್ಟು ಸಂಭಾಷಣೆ, ಮೌನ ಸಂವಾದ.



Khushwant

ಬರವಣಿಗೆಗೆ ತಾಲೀಮು : ಬರವಣಿಗೆಯೆಂದರೆ ನನ್ನ ಪಾಲಿಗೆ ಯಮಯಾತನೆ. ಬರೆಯುವುದು ಖುಷಿಯ ಕೆಲಸವೆಂದು ಹೇಳುವವರನ್ನು ಕಂಡರೆ ನನಗೆ ಅಸೂಯೆ. ನಾನೇನಾದರೂ ಸ್ಫೂರ್ತಿಗಾಗಿ ಕಾದು ಕುಳಿತಿದ್ದರೆ ನಯಾ ಪೈಸದಷ್ಟು ಕೂಡಾ ಬರೆಯಲಾಗುತ್ತಿರಲಿಲ್ಲ. ಅದಕ್ಕಾಗಿ ನಾನು ನನ್ನ ಮೇಲೆ ಶಿಸ್ತನ್ನು ಹೇರಿಕೊಳ್ಳಬೇಕಾಯಿತು. (ಸಿಖ್ಖರ ಇತಿಹಾಸ) ಬರೆಯುವ ದಿನಗಳಲ್ಲಿ ನಾನು ಮುಂಜಾನೆ ನಾಲ್ಕರಿಂದ ಐದರ ನಡುವೆ ಏಳುವ ಅಭ್ಯಾಸ ಮಾಡಿಕೊಂಡೆ. ಒಂದು ಮಗ್ ತುಂಬಾ ಕಷಾಯ (ಇದು ಚೈನೀ ವೈದ್ಯದಲ್ಲಿ ಉಪಯುಕ್ತ ಎಂದು 'ದಿ ಯೂನಿವರ್ಸಿಟಿ ಇಂಗ್ಲೀಷ್ ಡಿಕ್ಷನರಿ' ತಿಳಿಸುತ್ತದೆ) ಮಾಡಿಕೊಂಡು ನೋಟ್ಸ್ ಮಾಡಲು ಕುಳಿತುಬಿಡುತ್ತಿದ್ದೆ. ಸಂಗ್ರಹಿಸಿದ್ದ ವಿಷಯವನ್ನೆಲ್ಲಾ ಸರಿಯಾಗಿ ಜೋಡಿಸತೊಡಗುತ್ತಿದ್ದೆ. ನನ್ನ ತಂದೆ ನನಗೋಸ್ಕರ ಟೀಕ್ ಮರದಲ್ಲಿ ಸೊಗಸಾದ ಮೇಜು ಮಾಡಿಸಿಕೊಟ್ಟಿದ್ದರು. ಅದರ ಮೇಲೆ ಪರ್ಶಿಯನ್ ಛಾದರ್ ಮತ್ತು ಒಂದು ಅಗ್ಗಿಷ್ಟಿಕೆಯಿತ್ತು.... ನನ್ನ ಮೇಜಿನ ಮೇಲಿರುವ ಬಿಳಿ ಹಾಳೆಗಳನ್ನು ತುಂಬಿಸಿ ಮುಗಿಸುವ ತನಕ ಕುಳಿತ ಚೇರಿನಿಂದ ಮಿಸುಕಾಡುವುದಿಲ್ಲ ಎಂದು ಶಪಥ ಮಾಡಿ ಕೂರುತ್ತಿದ್ದೆ. ಬಹುತೇಕ ಸಮಯ ನಾನು ಬರೆದದ್ದು ಓದಲಾರದಷ್ಟು ಕೆಟ್ಟದಾಗಿರುತ್ತಿತ್ತು. ನಾನು ಅದನ್ನು ಟೈಪ್ ಮಾಡಿಸಿ ಮತ್ತೆ ಬರೆಯುತ್ತಿದ್ದೆ. ಎಷ್ಟೋ ಸಲ ಪ್ರತಿಯೊಂದು ಸಾಲನ್ನು ಐದಾರು ಸಲ ತಿದ್ದಿ ಬರೆದ ನಂತರವೇ ಅದು ಸರಾಗವಾಗಿ ಓದುವ ಸ್ಥಿತಿಗೆ ಬರುತ್ತಿತ್ತು. ಇಷ್ಟಾದ ಮೇಲೆ ಕಾಫಿ ಕುಡಿಯಲು ಏಳುತ್ತಿದ್ದೆ. ಬೆಳಗಿನ ಕಾಫಿ ನಮ್ಮ ಮನೆಯಲ್ಲಿ ಒಂದು ನಿತ್ಯ ವಿಧಿಯಾಗಿತ್ತು. ಈ ಕಾರ್ಯಕ್ರಮ ನನ್ನ ಅಮ್ಮನ ಅಧ್ಯಕ್ಷತೆಯಲ್ಲಿ ನಡೆಯುತ್ತಿತ್ತು. ಆಕೆ ಎಲ್ಲರಿಗೂ ನೊರೆನೊರೆ ಕಾಫಿ ನೀಡುತ್ತಿದ್ದಳು. ಎಷ್ಟೋ ಮಿತ್ರರು ಕಾಫಿಯ ಸಮಯಕ್ಕೆ ಬಂದೊದಗುತ್ತಿದ್ದರು (ಪುಟ 213).

'ದಿ ಇಲ್ಲಸ್ಟ್ರೇಟಡ್ ವೀಕ್ಲಿ ಆಫ್ ಇಂಡಿಯಾ' ಸಂಪಾದಕನಾಗಿ ಸರದಾರ : (ಮುಂಬೈಗೆ ಬಂದ) ಮಾರನೇ ದಿನ 'ದಿ ಟೈಮ್ಸ್ ಆಫ್ ಇಂಡಿಯಾ' ಕಛೇರಿಗೆ ಹೊರಟೆ. ಅಲ್ಲಿನ ಗಾರ್ಡ್‌ಗಳು ಮತ್ತು ಲಿಫ್ಟ್ ಹುಡುಗನಿಗೆ ನನ್ನ ಪರಿಚಯ ಹೇಳಿದೆ. ನನ್ನನ್ನು ಮೂರನೇ ಮಹಡಿಯಲ್ಲಿದ್ದ ನನ್ನ ಕೋಣೆಗೆ ಕರೆದೊಯ್ಯಲಾಯಿತು. ಕಛೇರಿ ಆರಂಭಗೊಳ್ಳಲು ಇನ್ನೂ ಅರ್ಧ ಗಂಟೆಯಿತ್ತು. ಸಹಾಯಕ ಸಂಪಾದಕ ಸುಬ್ರತೋ ಬ್ಯಾನರ್ಜಿಗೆ ನಾನು ಪತ್ರಿಕೆಯ ಹಳೆಯ ಸಂಚಿಕೆಗಳನ್ನು ನೋಡಿದ ನಂತರ ಒಬ್ಬೊಬ್ಬರನ್ನಾಗಿ ಪತ್ರಿಕೆಯ ಸಿಬ್ಬಂದಿಯನ್ನು ನೋಡುವುದಾಗಿ ಸೂಚಿಸಿದೆ. ಪತ್ರಿಕೆಯ ಹಿಂದಿನ ಹನ್ನೆರಡು ಸಂಚಿಕೆಗಳು ನನ್ನ ಟೇಬಲ್‌ಗೆ ಬಂದಿತು. ಪ್ರತಿಸ್ಪರ್ಧಿ ಇಲ್ಲದ್ದರಿಂದ ದಿ ವೀಕ್ಲಿ ಸರ್ಕ್ಯುಲೇಷನ್ 80,000ವಿತ್ತು. ಚಿತ್ರಕಾರರು, ಕವಿಗಳು, ಸಣ್ಣ ಕತೆಗಾರರು ಮತ್ತು ನೃತ್ಯ ಕಲಾವಿದರು ಪತ್ರಿಕೆಯಲ್ಲಿ ಕಾಣಿಸಿಕೊಳ್ಳಲು ಹಾತೊರೆಯುತ್ತಿದ್ದರು. ಹಿಂದಿನ ಸಂಚಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ –ಅದರಲ್ಲಿ ಓದಲು ಯೋಗ್ಯವಾದದ್ದು ಅತ್ಯಲ್ಪ ಮತ್ತು ವಿಷಯದಲ್ಲಿ ಏಕತಾನತೆ ಇರುವುದನ್ನು ಅರಿವಿಗೆ ಬಂತು. ಎಷ್ಟೇ ಬದಲಾವಣೆಗೊಂಡಿದ್ದರೂ ಕೂಡ ಪತ್ರಿಕೆ ಡಾಕ್ಟರ್ ಶಾಪ್, ಸಲೂನ್, ದಂತ ವೈದ್ಯರ ಕೊಠಡಿಯ ವೈಟಿಂಗ್ ರೂಮುಗಳಲ್ಲಿ ಸಾಮಾನ್ಯವಾಗಿ ಇಣುಕುತ್ತಿತ್ತು. ಅದನ್ನು ಇನ್ನಷ್ಟು ಉಜ್ವಲಗೊಳಿಸುತ್ತೇನೋ ಇಲ್ಲವೋ ಆದರೆ ಇನ್ನೂ ಮಂಕಂತೂ ಮಾಡುವುದಿಲ್ಲವೆಂದುಕೊಂಡೆ. ನನ್ನ ಮುಂದೆ ಮೂರು ಪ್ರಮುಖ ಗುರಿಯಿತ್ತು : ಮಾಹಿತಿ, ಮನರಂಜನೆ ಮತ್ತು ಇರಿಟೇಷನ್(ಕಿರಿಕಿರಿ) ಉಂಟುಮಾಡುವುದು. ಈ ಪತ್ರಿಕೆಯನ್ನು ತಮ್ಮದೇ ದೇಶದ ಬಗ್ಗೆ ಭಾರತೀಯರಿಗೆ ತಿಳಿಸಲು ಬಳಸಿಕೊಳ್ಳುತ್ತೇನೆ, ವಿವಾದಾಸ್ಪದ ವಿಷಯಗಳನ್ನು ಪ್ರಕಟಪಡಿಸಿ, ಅವರ ಮಾನಸಿಕ ಸೋಂಬೇರಿತನವನ್ನು ಅಲುಗಾಡಿಸಿ ಅವರನ್ನು ಕೆರಳುವಂತೆ ಮಾಡಲು ಪ್ರಯತ್ನಿಸುತ್ತೇನೆ.

ನಾನು ಒಂದು ರೀತಿಯಲ್ಲಿ ಸ್ವಲ್ಪ ಹಾಸ್ಯಪ್ರವೃತ್ತಿಯವನಾದ್ದರಿಂದ ಅವರಿಗೆ ಮನರಂಜನೆ ಒದಗಿಸುತ್ತೇನೆ ಅಂದುಕೊಂಡೆ. ಈ ಸೂತ್ರವನ್ನಿಟ್ಟುಕೊಂಡು ಹೊರಟ ನಾನು ವಿಫಲನಾಗಲಾರೆ ಎಂದು ಕೊಂಡೆ (ಪುಟ 232–233).

ಭಾರತದ ವಿವಿಧ ಸಮೂಹಗಳ ಬಗ್ಗೆ ಪ್ರಕಟಿಸಿದ ಸರಣಿಯಿಂದಲೇ ನಮಗೆ ಬ್ರೇಕ್ ಸಿಕ್ಕಿತು. ಚಿತ್ಪಾವನ, ಅಯ್ಯಂಗಾರ್, ಐಯ್ಯರ್, ಲಿಂಗಾಯತ, ಒಕ್ಕಲಿಗ, ಮೆಮೋನ್, ಬೊಹಾರ್, ಮಾಹೇಶ್ವರಿ, ಕಾಯಸ್ಥ, ಜಾಟ್, ಅಗರ್ವಾಲ್– ನಾನು ಕೇಳಿದ್ದ ಭಾರತದ ಪ್ರತಿಯೊಂದು ಸಮುದಾಯದ ಮೂಲ, ಅದರ ಪದ್ಧತಿಗಳು, ಈ ಸಮೂಹವು ಅದರ ಶ್ರೇಷ್ಠ ವ್ಯಕ್ತಿಗಳ ಮೂಲಕ ಮಾಡಿರುವ ಸಾಧನೆಗಳೆಲ್ಲಾ ಬಂದವು. ಆಯಾ ಸಂಚಿಕೆಯನ್ನು ಆಯಾ ಸಮುದಾಯವರೇ ರೂಪಿಸಿದ್ದರು. ನಮ್ಮ ಮಾರಾಟ ಮೇಲಕ್ಕೆ ಚಿಮ್ಮಿತು. ಬೆನ್ನೆಟ್ ಕೊಲ್ಮನ್ ಪ್ರಕಟಣೆಗಳ ಪಟ್ಟಿಯಲ್ಲಿ ಪಾತಾಳದಲ್ಲಿದ್ದ ನಾವು ಒಂದೊಂದೆ ಕಂಪೆನಿಯನ್ನು ಹಿಮ್ಮೆಟ್ಟಿಸುತ್ತಾ ದೊಡ್ಡ ಮುನ್ನಡೆಯ ಅಂತರ ಗಿಟ್ಟಿಸಿಕೊಂಡೆವು. ನಾನು ಪ್ರತಿಯೊಂದು ಗೆಲುವನ್ನು ಬುಟ್ಟಿಗಟ್ಟಲೆ ಸಿಹಿತಿಂಡಿ ತರಿಸಿ ಕಛೇರಿಯಲ್ಲಿದ್ದವರಿಗೆ ಹಂಚಿ ಸಂಭ್ರಮಿಸುವ ಮಟ್ಟಿಗೆ ದುಷ್ಟನಾಗಿಬಿಟ್ಟೆ. ಯಾವ ಬೋರ್ಡ್ ರೂಮಿನಲ್ಲಿ ಆಗೊಮ್ಮೆ ಈಗೊಮ್ಮೆ ಸಂಪಾದಕರಿಗೆ ನಿರ್ದೇಶಕರನ್ನು ಕಾಣಲು ಬುಲಾವು ಬರುತ್ತಿತ್ತೋ ಅಲ್ಲಿ ಈಗ ನಮ್ಮ ಪತ್ರಿಕೆಯ ಸರ್ಕ್ಯುಲೇಷನನ್ನು ಸೂಚಿಸುವ ಚಾರ್ಟುಗಳು ಕಂಗೊಳಿಸುತ್ತಿದ್ದವು. (ಪುಟ 247–248)

ಬರವಣಿಗೆಯ ಪ್ರಪಂಚದ ಬಗ್ಗೆ ಖುಷ್ವಂತ್ ಭಾವನೆಗಳು : ಸಾರ್ವಜನಿಕ ಸಂಪರ್ಕ, ಬೋಧನೆ, ಅಂತಿಮವಾಗಿ ಪತ್ರಿಕೋದ್ಯಮ ಮತ್ತು ಬರವಣಿಗೆಗೆ ನಾನೇಕೆ ಬಂದೆನೆಂಬ ಸಂದರ್ಭದ ಬಗ್ಗೆ ಸ್ವಲ್ಪ ಹೇಳೀದ್ದಾಗಿದೆ. ಈಗ ನನ್ನ ಪರಿಚಯದ ಬರಹಗಾರರು, ನನ್ನ ಮೇಲೆ ಪ್ರಭಾವ ಬೀರಿದಂತಹವರು, ಬರಹಗಾರನಾಗುವುದೆಂದರೇನು, ಬರವಣಿಗೆ ಮೋಜಿಗಾಗಿಯೇ, ಇಷ್ಟಕ್ಕೂ ಬರೆದೂ ಒಬ್ಬ ಚೆನ್ನಾಗಿ ಬದುಕಬಹುದೇ ಎಂಬ ವಿಷಯದ ಬಗ್ಗೆ ಸ್ವಲ್ಪ ಬರೆಯುವೆ.

ಶಾಲಾ ಕಾಲೇಜುಗಳಲ್ಲಿ ಓದಿನಲ್ಲಿ ಹಿಂದಿದ್ದರೂ ಎಳೆಯ ವಯಸ್ಸಿಂದಲೇ ನಾನು ಲೇಖಕನಾಗುವ ಬಯಕೆಯ ಗೂಡನ್ನು ಕಟ್ಟಿಕೊಂಡಿದ್ದೆ. ಪ್ರಾಥಮಿಕ ಶಾಲೆಯಲ್ಲಿರುವಾಗಲೇ ನಾನೊಮ್ಮೆ ಒಂದು ಕಾದಂಬರಿ ಬರೆಯಲೆಂದು ನೋಟ್ ಬುಕ್ಕನ್ನು ಸಂಪಾದಿಸಿಕೊಂಡಿದ್ದೆ. ಅದರ ಮೊದಲ ಪುಟದಲ್ಲಿ 'ಶೈಲ್ಲ' ಲೇಖಕ – ಖುಷ್ವಂತ್ ಸಿಂಗ್ ಎಂದು ತಲೆಬರಹ ಬರೆದಿಟ್ಟೆ. ಆ ವಯಸ್ಸಿಗೆ 'ಶೈಲ' ಎಂದು ಬರೆಯುವುದಕ್ಕಿಂತ ಶೈಲ್ಲ ಎಂದು ಬರೆಯುವುದೇ ಅಲ್ಟ್ರಾ ಮಾಡ್ರನ್ ಎಂದು ತೋರಿತ್ತು. ತಮ್ಮ ಪೋನಿಟೈಲ್ ಜುಟ್ಟಿಗೆ ಕೆಂಪು ರಿಬ್ಬನ್ ಕಟ್ಟಿಕೊಂಡು ಶಾರ್ಟ್ಸ್ ಧರಿಸಿರುವ , ಹುಡುಗರೊಡನೆ ಚೆಂದವಾಗಿ ಮಾತನಾಡುವ ಅಥ್ಲೆಟಿಕ್ ಹುಡುಗಿಯರ ಮೇಲೆ ನನಗಾಗ ಮೋಹ. ನಾನು ಹೋದಲ್ಲೆಲ್ಲಾ ಎಷ್ಟೋ ದಿನಗಳ ತನಕ ಈ ನೋಟ್ ಬುಕ್ಕನ್ನು ಹೊತ್ತುಕೊಂಡು ಹೋಗುತ್ತಿದ್ದೆ. ನನ್ನ ಹಿರೋಯಿನ್ ಮೇಲೆ ನಾಲ್ಕಾರು ಸಾಲು ಬರೆದೆನೆಂದು ತೋರುತ್ತದೆ. ಶೈಲ್ಲಾ ವನ್ನು ನಾನೆಂದೂ ಬರೆದು ಮುಗಿಸಲಿಲ್ಲ.

ಕಾಲೇಜಿನ ಐದು ವರ್ಷಗಳಲ್ಲಿ ಹಾಗೂ ಇಂಗ್ಲೆಂಡ್‌ನಲ್ಲಿ ಕಾನೂನು ಕಲಿಯುತ್ತಿದ್ದಾಗ ಬರವಣಿಗೆಯಲ್ಲಿ ಕೈ ಕುದುರಿಸುವ ನನ್ನ ಪ್ರಯತ್ನ ಹೆಚ್ಚು ಗಟ್ಟಿಗೊಂಡಿತು. ನನಗೆ ಕಾನೂನು ಗ್ರಂಥ ಓದಲು ಬೇಸರ ಬರುತ್ತಿತ್ತು. ಆದರೆ ಕಾದಂಬರಿ, ಕವಿತೆಗಳನ್ನು ಸಂತೋಷವಾಗಿ ಓದುತ್ತಿದ್ದೆ. ನಾನು ಅದೃಷ್ಟವಶಾತ್ ಒಳ್ಳೆಯ ನೆನಪಿನಶಕ್ತಿ ಹೊಂದಿದವನಾದ್ದರಿಂದ ಭಾರತದಲ್ಲಿದ್ದಾಗ ಕಲಿತಿದ್ದ ಕವಿತೆಗಳ ಕಣಜಕ್ಕೆ ಇನ್ನಷ್ಟನ್ನು ತುಂಬಿಕೊಂಡೆ. ಹೇಗೋ ಏನೋ ಕವಿತೆಯು ಕವಿಯಲ್ಲಿರುವುದನ್ನು ಹೊರಕ್ಕೆ ದಬ್ಬಿಕೊಂಡು ಬರುತ್ತವೆ.

ಆದರೆ ಗದ್ಯ ಬರವಣಿಗೆಗೆ ವಿಶಾಲವಾದ ಓದಿನ ವ್ಯಾಪ್ತಿ ಮತ್ತು ಅಗಾಧವಾದ ಶಬ್ದ ಸಂಪತ್ತಿರಬೇಕು ಎನಿಸಿಬಿಟ್ಟಿತು. ನಾನು ನನ್ನ ಸಮೀಪ ಡಿಕ್ಷನರಿ ಇಟ್ಟುಕೊಂಡು ನನಗೆ ಅರ್ಥವಾಗದ ಪ್ರತಿಯೊಂದು ಪದವನ್ನೂ ಗುರುತು ಹಾಕುತ್ತಿದ್ದೆ. ಸೆಂಟ್ ಸ್ಟೀಫನ್ಸ್ ಕಾಲೇಜಿನಲ್ಲಿದ್ದಾಗ ಪರಿಚಯವಾಗಿದ್ದ ಬೈಬಲ್‌ಗೆ ಮೊರೆಹೋದೆ. ಹೊಸ ಒಡಂಬಡಿಕೆ ಸ್ವಲ್ಪ ಶುಷ್ಕವೆನಿಸುತ್ತಿತ್ತು. ಹಳೇ ಒಡಂಬಡಿಕೆ ಹೆಚ್ಚು ಕಾವ್ಯಮಯವೆಂಬುದನ್ನು ಕಂಡುಕೊಂಡೆ. ಸಾಲೊಮನ್ ಗೀತೆಗಳು, ಪ್ರಾರ್ಥನೆಗಳು, ಸೂಕ್ತಿ ಮತ್ತು ಬುಕ್ ಆಫ್ ಜೋಬ್ಸ್ ಇವುಗಳನ್ನು ಮತ್ತೆ ಮತ್ತೆ ಓದಿ ಸಾಲುಗಳನ್ನು ನೆನಪಿನಲ್ಲಿರಿಸಿಕೊಂಡೆ. ಅದರಲ್ಲಿ ಕೆಲವು ಇಂದಿಗೂ ನನ್ನೊಡನಿವೆ (ಈ ಮಾತನ್ನು ಬರೆದಾಗ ಖುಷ್ವಂತರಿಗೆ 80 ವರ್ಷ (1995).

ನಾನು ಬೇಕಾದಷ್ಟು ನಾನ್‌ಸೆನ್ಸ್ ವರ್ಸ್‌ಗಳನ್ನು , ಲಿಮರಿಕ್‌ಗಳನ್ನು ನರ್ಸರಿ ಪದ್ಯಗಳನ್ನು ಲಿವಿಸ್ ಕೆರೋಲ್ ಮತ್ತು ಗಿಲ್ಬರ್ಟ ಹಾಗೂ ಸುಲ್ಲಿವನ್ ಅವರ ಅಪೆರಾವನ್ನು ಓದಿಕೊಂಡೆ. ಪಂಜಾಬಿ ಒರಟನಾದ ನಾನು ನನ್ನನ್ನು ಮಧ್ಯಮ ವರ್ಗದ ಆಂಗ್ಲ ಸುಶಿಕ್ಷಿತನನ್ನಾಗಿಸಿಕೊಳ್ಳಲು ಪ್ರಯತ್ನ ಪಟ್ಟೆ. ನಾನು ದಿ ಟೈಮ್ಸ್‌ನ ಪದಬಂಧವನ್ನು ಬಿಡಿಸಲು ಆರಂಭಿಸಿ, ಈ ಚಟಕ್ಕೆ ಬಲಿಯಾಗಿ ನನ್ನ ಜೀವನದ ಅತ್ಯಮೂಲ್ಯ ಗಂಟೆಗಳನ್ನು ಹಾಳು ಮಾಡಿಕೊಂಡೆ. ನಾನು ಓದಿದ ಹಲವಾರು ಕಾದಂಬರಿಕಾರರಲ್ಲಿ ನನ್ನ ಮೇಲೆ ತೀವ್ರವಾಗಿ ಪ್ರಭಾವ ಬೀರಿದವರು- ಅಲ್ಡಸ್ ಹಕ್ಸಲಿ ಮತ್ತು ಸಾಮರ್ಸೆಟ್ ಮಾಮ್. ಹಕ್ಸಲಿಯು ಪದಗುಚ್ಛಗಳಿಗೆ ನೀಡುವ ತಿರುವು ಮತ್ತು ಅವನ ಅಸೂಯೆಯಿಂದ ಕೂಡಿದ ಜಾಣ್ಮೆಯೊಂದಿಗೆ ಮಾಮ್‌ನ ಶಕ್ತಿಯನ್ನು ನನ್ನಲ್ಲಿ ಬೆಳೆಸಿಕೊಳ್ಳಲು ಬಯಸಿದೆ. ಆದರೆ ಪ್ರಾಮಾಣಿಕವಾಗಿ ಹೇಳುತ್ತೇನೆ, ಬರೆಯಲು ನನಗೆ ಸ್ಫೂರ್ತಿ ನೀಡಿದ್ದು ಎರಡನೇ ದರ್ಜೆಯ ಬರಹಗಾರರು, ಅದರಲ್ಲೂ ಇಂಗ್ಲೆಂಡ್ ಮತ್ತು ಅಮೇರಿಕಾದಲ್ಲಿ ಪುಸ್ತಕ ಪ್ರಕಟಿಸಿಕೊಳ್ಳುತ್ತಿದ್ದ ಭಾರತೀಯರೇ ಹೊರತು ಮಹಾನ್ ಲೇಖಕರಲ್ಲ. ನಾನು ಮುಲ್ಕ್‌ರಾಜ್ ಆನಂದ್, ರಾಜಾರಾವ್, ಆರ್. ಕೆ. ನಾರಾಯಣ್ ಅವರನ್ನು ಓದಿದ್ದೆ. ನಾನು ಅವರಷ್ಟೆ ಚೆನ್ನಾಗಿ ಬರೆಯಬಲ್ಲೆ ಎನಿಸಿತು. ಅವರು ವಿದೇಶದಲ್ಲಿ ಪುಸ್ತಕ ಪ್ರಕಟಿಸಬಹುದಾದರೆ ನಾನೂ ಕೂಡ ಪ್ರಕಟಿಸಿಕೊಳ್ಳಬಲ್ಲನೆಂದುಕೊಂಡೆ. ನನ್ನ ಬಗ್ಗೆ ನನಗಿದ್ದ ಗ್ರಹಿಕೆ ತೀರ ತಪ್ಪಾಗಿರಲಿಲ್ಲ.

ಇಂಗ್ಲೆಂಡಿಗೆ ಎರಡನೇ ಬಾರಿ ವರ್ಗವಾದಾಗ ಬರವಣಿಗೆಯನ್ನು ವೃತ್ತಿಯನ್ನಾಗಿ ತೆಗೆದುಕೊಳ್ಳುವ ಬಗ್ಗೆ ನಾನು ಗಂಭೀರವಾಗಿ ಯೋಚಿಸಿದೆ. ಉತ್ಸಾಹಿ ಬರಹಗಾರರಂತೆ ನಾನೂ ಸಹ ಸಾಹಿತ್ಯಕ್ಷೇತ್ರದ ಪ್ರಸಿದ್ಧ ಸ್ತ್ರೀ ಪುರುಷರ ಗೆಳೆತನ ಬೆಳೆಸಲು ಮತ್ತು ಅವರ ಪುಸ್ತಕಗಳ ಮೇಲೆ ಅವರ ಸಹಿ ಹಾಕಿಸಿಕೊಳ್ಳಲು ಪ್ರಯತ್ನಿಸಿದೆ......... ಲೇಖಕರಿಂದಾಗಿ ಯಾರೂ ಲೇಖಕರಾಗುವುದಿಲ್ಲವೆಂಬುದು ತಿಳಿಯಲು ವರ್ಷಗಳು ಬೇಕಾದವು. ಅಲ್ಲಿಯ ತನಕ ಈ ಮುಗ್ಧ ಆರಾಧನೆ ಮುಂದುವರೆದಿತ್ತು. ಏಕಾಂಗಿ ಕಸುಬಾದ ಬರವಣಿಗೆಯಲ್ಲಿ ನಮಗೆ ನಾವೇ ಸಹಾಯಕರು ಅಷ್ಟೆ. ಬರಹದ ಪ್ರಪಂಚದಲ್ಲಿ ಗುರು-ಚೇಲಾ ಈ ಸಂಬಂಧವಿರುವುದಿಲ್ಲ. ಒಬ್ಬ ಲೇಖಕ ತನಗೇ ತಾನೇ ಗುರು, ತಾನೇ ಶಿಷ್ಯ ಮತ್ತು ತನ್ನ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಸರ್ವೋಚ್ಚ ನ್ಯಾಯಾಧೀಶ (ಪುಟ 384-385).

ಸಮಕಾಲೀನ ಬರಹಗಾರರಲ್ಲಿ ನನ್ನ ಪ್ರಕಾರ ವಿ.ಎಸ್. ನೈಪಾಲ್ ಅತಿ ಶ್ರೇಷ್ಠ ಬರಹಗಾರ. ನಾನು ಓದಿದ ಅವರ ಮೊದಲ ಕಾದಂಬರಿ, ಎ ಹೌಸ್ ಫಾರ್ ಮಿಸ್ಟರ್ ಬಿಸ್ವಾಸ್. ಕೆರಿಬಿಯಕ್ಕೆ ನಾನೆಂದೂ ಹೋಗಿಲ್ಲವಾದರೂ ಅಲ್ಲಿ ನೆಲೆಸಿರುವ ಭಾರತೀಯ ಮೂಲದ ಸಮೂಹದ ಅಥೆಂಟಿಕ್ ಚಿತ್ರಣವಿರುವುದು ಎಂದು ಹೇಳಬಲ್ಲೆ. ಅದರ ಎಲ್ಲಾ ಪಾತ್ರಗಳಲ್ಲೂ ಜೀವಂತಿಕೆಯಿದೆ. ಪಾತ್ರ ಸಂಭಾಷಣೆ ಬಹಳ ಹಾಸ್ಯಮಯವಾಗಿದೆ. ಇಂಗ್ಲೀಷ್ ಸಾಹಿತ್ಯ ಲೋಕದಲ್ಲಿ ನೈಪಾಲರನ್ನು ನವತಾರೆ ಎಂದು ಕೊಂಡಾಡಿದ

ಸ್ವಲ್ಪ ಕಾಲದಲ್ಲೇ ಅವರು ತಮ್ಮ ಪೂರ್ವಜರ ನಾಡನ್ನು ನೋಡಲು ಬಂದರು. ಅವರೊಂದಿಗೆ ಅಸಂತೋಷದಿಂದಿರುವಂತೆ ತೋರುತ್ತಿದ್ದ ಅವರ ಆಂಗ್ಲ ಹೆಂಡತಿಯಿದ್ದಳು. ದೆಹಲಿಗೆ ಬರುವಷ್ಟರಲ್ಲಿ ತಾವು ನೋಡಿದ ದೃಶ್ಯಗಳಿಂದ ಅವರಿಗೆ ಭ್ರಮನಿರಸನವಾಗಿತ್ತು. ತಮ್ಮನ್ನು ಭಾರತದ ಪುತ್ರನೆಂದು ಗುರುತಿಸಬೇಕೆಂದು ನೈಪಾಲ್ ನಿರೀಕ್ಷಿಸಿದ್ದರು. ಮತ್ತು ತಾವು ಎಷ್ಟು ಹೊಗಳಿಕೆಗೆ ಪಾತ್ರನಾದವನೆಂದು ತಮ್ಮ ಪತ್ನಿಯೆದುರು ಪ್ರದರ್ಶಿಸಲು ಪ್ರಾಯಶಃ ಅವರು ಬಯಸಿದ್ದರು. ಆ ಕಾಲಕ್ಕೆ ಎಲ್ಲೂ ಸಲ್ಲದ ಅಲ್ಪ ಸಂಖ್ಯಾತರಷ್ಟೇ ನೈಪಾಲ್ ಬರಹಗಳನ್ನು ಓದಿದ್ದರು(ಪುಟ 392–393).

ಆ ವರ್ಷ ನೈಪಾಲ್‌ಗೆ ಸಾಹಿತ್ಯಕ್ಕಿರುವ ನೊಬೆಲ್ ಪ್ರಶಸ್ತಿ ದೊರೆಯುತ್ತದೆಂದು ಭಾವಿಸಿದ್ದ ನ್ಯೂಯಾರ್ಕ ಟೈಮ್ಸ್‌ನ ಸಾಹಿತ್ಯ ವಿಭಾಗದ ಸಂಪಾದಕ ಎರಡು ಬಾರಿ ನೈಪಾಲ್ ಬಗ್ಗೆ ಲೇಖನ ಸಿದ್ಧಪಡಿಸಲು ನನಗೆ ಫೋನ್ ಮಾಡಿದ. ನಾನು ನನ್ನ ಟಿಪ್ಪಣಿಗಳನ್ನು ಧೂಳು ಕೊಡವಿಟ್ಟುಕೊಂಡೆ. ನೈಪಾಲ್ ಬಯಸಿದ್ದ ಅವರಿಗೆ ಬರಲೇ ಬೇಕಿದ್ದ ಪ್ರಶಸ್ತಿ ಬರಲಿಲ್ಲ. ಆಗ ಇಂಗ್ಲೀಷ್‌ನಲ್ಲಿ ಬರೆಯುತ್ತಿರುವ ಸವರ್ಣೀಯರಿಗೆ ಅದನ್ನು ಎಂದಿಗೂ ಕೊಡುವುದಿಲ್ಲವೆನಿಸುತ್ತಿತ್ತು. ಬ್ರಿಟಿಷ್ ಸರ್ಕಾರ ತಿದ್ದುಪಡಿ ತಂದು ನೈಪಾಲ್‌ಗೆ ನೈಟ್‌ಹುಡ್ ನೀಡಿತಾದರೂ, ನೊಬೆಲ್ ಪ್ರಶಸ್ತಿ ಪಡೆಯುವುದೇ ಬೇರೆ. ನೈಪಾಲ್ ಎಂದೂ ತಮ್ಮ ಹೆಸರಿನಲ್ಲಿ ಸರ್ ಹಾಕಿಕೊಳ್ಳುವುದಿಲ್ಲ. ವಿಚಿತ್ರವೆಂದರೆ, ತಮಗೆ ನೊಬೆಲ್ ಪ್ರಶಸ್ತಿ ಬರುವುದಿಲ್ಲವೆಂದು ಅರಿವಾದ ನಂತರ ಅವರ ಬರವಣಿಗೆಯ ಗುಣಮಟ್ಟ ಇಳಿಯತೊಡಗಿತು (ಪುಟ 394).

ಬರಹ ಲೋಕದಲ್ಲಿ ಗಾಂಭೀರ್ಯ ವಿನಯಶೀಲತೆ ತೀರಾ ಕಡಿಮೆ. ಅನೇಕರು ಯೂರೋಪಿಯನ್ನರ ಸಹಜಸ್ವಭಾವದವರಲ್ಲವಾದ್ದರಿಂದ ಅವರು ಆತ್ಮಸ್ತುತಿಯನ್ನು ಅಶ್ಲೀಲತೆಯ ಒಂದು ರೂಪ ಎಂದು ಕೊಳ್ಳುವುದಿಲ್ಲ. ಪ್ರಾದೇಶಿಕ ಭಾಷೆಗಳ ಬರಹಗಾರರು ತಮ್ಮ ಸಾಧನೆಯ ಬಗ್ಗೆ ದೊಡ್ಡದಾಗಿ ಕೊಚ್ಚಿಕೊಳ್ಳಬಲ್ಲರು. ಉರ್ದು ಭಾಷೆಯ ಮಹಾಕವಿ ಗಾಲೀಬ್, ಉಳಿದಂತೆ ಪತ್ತು –ಹನ್ನೆರಡು ಜನ ಕವಿತೆ ಬರೆಯುತ್ತಿದ್ದಾಗ ತನ್ನ ಶೈಲಿ ಮತ್ತು ಅಲೋಚನೆಗಳು ಉಳಿದವರಿಗಿಂತ ವಿಶಿಷ್ಟ ಎಂದು ಹೆಮ್ಮೆ ಪಟ್ಟಿದ್ದ. ಆಧುನಿಕ ಲೇಖಕರು ತಮ್ಮ ಜನ್ಮದಿನದ ಸಮಾರಂಭ ಏರ್ಪಡಿಸಿಕೊಳ್ಳುತ್ತಾರೆ. ತಮ್ಮನ್ನು ಹೊಗಳಲು ಸ್ನೇಹಿತರನ್ನು ಹಿಡಿದು ತರುತ್ತಾರೆ. ಅಭಿನಂದನಾ ಗ್ರಂಥಗಳನ್ನು ಅಚ್ಚು ಮಾಡಿಸಿ ಹಂಚುತ್ತಾರೆ.

ಇಂಗ್ಲೀಷ್‌ನಲ್ಲಿ ಬರೆಯುವ ಕೆಲವು ಭಾರತೀಯರೂ ಸಹ ಸ್ವಪ್ರಶಂಸೆಯನ್ನು ಮೀರಿದವರಲ್ಲ. ಹೆಚ್ಚು ಮಂದಿ ಅದರಲ್ಲೂ ಎಲ್ಲಾ ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಪುಸ್ತಕ ಓದುವುದಿಲ್ಲವಾದ್ದರಿಂದ, ಅಲ್ಲದೇ ಸಾರ್ವಜನಿಕರ ಸ್ಮರಣ ಶಕ್ತಿ ಕಮ್ಮಿಯಿರುವುದರಿಂದ ತಮ್ಮ ನಗಾರಿ ತಾವೇ ಬಾರಿಸಿಕೊಳ್ಳುವುದರಲ್ಲಿ ಲಾಭವಿದೆ. ತಮ್ಮ ಕೃತಿಗಳನ್ನು ಓದದವರ ತೀರ್ಮಾನಗಳಿಂದ ಎರಡನೇ ದರ್ಜೆ ಬರಹಗಾರರು ಸಾಹಿತ್ಯ ಪ್ರಶಸ್ತಿಗಳನ್ನು ಪಡೆಯುತ್ತಾರೆ. ಅವರಿಗೆ ರಾಜತಾಂತ್ರಿಕ ಹುದ್ದೆಗಳು ಬಂದೊದಗುತ್ತವೆ ಮತ್ತು ಅವರು ಸಂಸತ್ತಿನ ಮೇಲ್ಮನೆಗೆ ನಾಮಕರಣವೂ ಹೊಂದುತ್ತಾರೆ. ಎರಡನೇ ದರ್ಜೆಯವರನ್ನು ನಾಮಕರಣ ಮಾಡಿದ್ದನ್ನು ವಿರೋಧಿಸಿದವರು ಹೊಟ್ಟೆಕಿಚ್ಚಿನ ಮಂದಿ ಎಂದು ದೂರತಳ್ಳಲ್ಪಡುತ್ತಾರೆ. ಪ್ರಶಸ್ತಿಗಳಿಗಾಗಿ ಕ್ಯಾನ್‌ವಾಸ್ ಮಾಡುವುದು ಸಾಮಾನ್ಯ ಸಂಗತಿಯಾಗಿದೆ. ಅದಕ್ಕಿಂತಲೂ ಅದ್ಭುತವೆಂದರೆ ,ಅನೇಕ ಭಾರತೀಯ ಲೇಖಕರು ನೋಬೆಲ್ ಪ್ರಶಸ್ತಿ (ಸಾಹಿತ್ಯಕ್ಕಿರುವ)ಯ ಅಂತಿಮ ಪಟ್ಟಿಯಲ್ಲಿ ತಾವಿರುವುದಾಗಿ ಆಗಾಗ ಬೀಗುವುದು (ಪುಟ 397).

ಯುವ ಪ್ರತಿಭೆಗೆ ಅಂಜನ : ಹಲವಾರು ಪತ್ರಿಕೆಗಳ ಸಂಪಾದಕನಾಗಿ ಭಾರತದಲ್ಲಿ ಪೆಂಗ್ವಿನ್–ವಿಕಿಂಗ್‌ನ ಗೌರವ ಸಂಪಾದಕನಾಗಿ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ನನ್ನ ಕೈಯಲ್ಲಿ ಆದದ್ದನ್ನು

ಮಾಡಿದ್ದೇನೆ. ತಮ್ಮಲ್ಲಿ ಸತ್ವವಿದ್ದವರು ಅದನ್ನು ಬಳಸಿಕೊಂಡರು. ಅವರಲ್ಲಿ ಒಬ್ಬರು ಕಲ್ಕತ್ತಾದ ದಿ ಟೆಲಿಗ್ರಾಫ್ ಸಂಪಾದಕ ಮತ್ತು ಅಂದು ಪಾರ್ಲಿಮೆಂಟ್ ಸದಸ್ಯರಾಗಿದ್ದುಕೊಂಡು ರಾಜಕೀಯ, ಸಾಮಾಜಿಕ ವಿಷಯಗಳ ಮೇಲೆ ಅನೇಕ ಪುಸ್ತಕಗಳನ್ನು ಬರೆದಿದ್ದ ಎಂ.ಜೆ. ಅಕ್ಬರ್. ಮತ್ತೊಬ್ಬರು ಬಚಿಕರ್ಕಿಯ. ಅವರನ್ನು ಬಾಂಬೆ ಡ್ಯೆಯಿಂಗ್‌ನ ವಾಡಿಯಾಗಳ ಮೇಲೆ ಪುಸ್ತಕ ಬರೆಯುವಾಗ ಸಹ ಲೇಖಕರನ್ನಾಗಿ ಆರಿಸಿಕೊಂಡಿದ್ದೆ. (ವಾಡಿಯಾಗಳಿಗೆ ಪುಸ್ತಕ ಇಷ್ಟವಾಗಲಿಲ್ಲ, ಅದು ಪ್ರಕಟಗೊಳ್ಳಲಿಲ್ಲ). ನಾನು ಆಕೆಯ ಹೆಸರನ್ನು ಹೋಟೆಲ್‌ಗಳ ಅಧಿಪತಿ ಎಂ.ಎಸ್. ಒಬೆರಾಯ್ ಜೀವನಚರಿತ್ರೆ ಬರೆಯಲು ಸೂಚಿಸಿದೆ. ಅದನ್ನು ಪೆಂಗ್ವಿನ್-ವಿಕಿಂಗ್ ಪ್ರಕಟಿಸಿದರು. ಪತ್ರಿಕೆಗಳು ರೇಡಿಯೋ ಮತ್ತು ಟಿ. ವಿಗೆ ಪುಸ್ತಕ ವಿಮರ್ಶಕನಾಗಿದ್ದರಿಂದ ಅಮಿತವ್ ಘೋಷ್, ಉಪಮನ್ಯು ಚಟರ್ಜಿ, ಗೀತಾ ಹರಿಹರನ್, ಶಮ ಫುತೇಹಲಿ, ಆಲನ್ ಸೀಲಿ, ರಕುನ್ ಅದ್ವಾನಿ, ರಮೇಶ್ ಮೆನನ್, ಮುಕುಲ್‌ಕೇಶವನ್ ಮತ್ತು ಮಿಗಿಲಾಗಿ ವಿಕ್ರಮ್ ಸೇತ್‌ರಂತಹ ಉದಯೋನ್ಮುಖಿ ಲೇಖಕರನ್ನು ಉತ್ತೇಜಿಸುವುದು ಸಾಧ್ಯವಾಯಿತು. ಕಡೆಗೂ ತನ್ನ ದೇಶಕ್ಕೆ ಅತ್ಯುನ್ನತ ಗೌರವ ತಂದುಕೊಡಬಲ್ಲ ಲೇಖಕನೊಬ್ಬನನ್ನು ಭಾರತ ನೀಡಿತೆಂದು 'ದಿ ಗೋಲ್ಡನ್ ಗೇಟ್'ನ ವಿಮರ್ಶೆಯಲ್ಲಿ ಬರೆದೆ (ಪುಟ 398–399).

ಲೇಖಕನಾಗಲು ಏನು ಬೇಕು? ಎಲ್ಲಕ್ಕೂ ಮೊದಲು ಲೇಖಕನಾಗಬೇಕೆಂಬ ಅದಮ್ಯ ಹಂಬಲ. ಚಾಲಕ ಶಕ್ತಿ ಹಣವಲ್ಲ. (ಹೋಟೆಲ್, ಪಾನ್ ಅಂಗಡಿ, ಗ್ಯಾಸ್ ಸ್ಟೇಷನ್ ನಡೆಸುವುದರಲ್ಲಿ ಅಥವಾ ವಕೀಲಿ ಮತ್ತು ಔಷಧಿ ವ್ಯಾಪಾರದಲ್ಲೇ ಅದಕ್ಕಿಂತ ಹೆಚ್ಚಿನ ಹಣವಿದೆ). ಕೀರ್ತಿ ಪ್ರತಿಷ್ಠೆಯೂ ಅಲ್ಲ. ರಾಜಕೀಯ ಅಥವಾ ಚಿತ್ರರಂಗದಲ್ಲಿ ಅದು ಸುಲಭವಾಗಿ ದೊರೆಯುತ್ತದೆ. ತಮ್ಮೊಳಗಿನ ಯಾವುದೋ ತುಡಿತ ಬಲವಾಗಿರುವುದರಿಂದ ಬರೆಯುತ್ತಿರುವುದು ಬಿಟ್ಟರೆ ನಿಜಕ್ಕೂ ಬಹುತೇಕ ಲೇಖಕರಿಗೆ ತಾವೇಕೆ ಬರವಣಿಗೆಗೆ ಬಂದೆವೆಂದು ಅರಿವಿರುವುದಿಲ್ಲ. ಬರಹಗಾರನಾಗಬೇಕೆಂಬ ಬಯಕೆಯನ್ನು ನಿಜಕ್ಕೂ ಹಾಗಾಗಲೂ ಪರಿವರ್ತಿಸಬೇಕಾದರೆ ಹೆಣಗಬೇಕೆಂದು ತಿಳಿದೊಡನೆ ಹೆಚ್ಚಿನವರ ಹಂಬಲ ಉಡುಗುತ್ತದೆ. ಆದರೂ ಈ ಬಯಕೆ ಮತ್ತೆ ಮತ್ತೆ ಹೆಡೆಯೆತ್ತುತ್ತದೆ. ಕೆಲವರು ಸೋಲನ್ನೊಪ್ಪಿಕೊಳ್ಳುವ ಮುನ್ನ ಕಿರುಲೇಖನ ಬರೆಯುವ ಮೂಲಕ, ಅಪೂರ್ಣ ಸಣ್ಣಕಥೆ ಅಥವಾ ಕಾದಂಬರಿ ಬರೆದು ಒಂದು ದಾರಿ ಕಂಡುಕೊಳ್ಳುತ್ತಾರೆ. ನಂತರ ತಾವು ಲೇಖಕರಾಗಲು ಬೇಕಾದ್ದು ತಮ್ಮಲ್ಲಿಲ್ಲವೆಂದು ಒಪ್ಪಿಕೊಳ್ಳುತ್ತಾರೆ. ಬಹುತೇಕ ಸೂಕ್ಷ್ಮ ವ್ಯಕ್ತಿಗಳಲ್ಲಿ ಕವಿತೆಯ ಸೆಲೆಯಿದ್ದು ಅದು ಹದಿಹರೆಯದಲ್ಲಿ ಭೋರ್ಗರೆಯುತ್ತಾ ಹೊರಕ್ಕೆ ಬರುತ್ತದೆ. ಮುಂದಿನ ವರ್ಷಗಳಲ್ಲಿ ಇದು ಇಳಿಮುಖವಾಗುತ್ತದೆ. ಗದ್ಯ ಬರೆಯುವುದು ಹೆಚ್ಚು ಕಠಿಣ. ಅದಕ್ಕೆ ಕ್ಲಾಸಿಕಲ್ ಮತ್ತು ಆಧುನಿಕ ಸಾಹಿತ್ಯದ ವಿಸ್ತಾರ ಓದು, ದೈತ್ಯ ಶಬ್ದ ಸಂಪತ್ತಿನ ಮತ್ತು ಎಲ್ಲಕ್ಕೂ ಮಿಗಿಲಾಗಿ ಕೈಗೆತ್ತಿಕೊಂಡು ಕೆಲಸವನ್ನು ಮುಗಿಸಲು ಬೇಕಾದ ನಿರಂತರ ತಾಕತ್ತು ಬೇಕಾಗುತ್ತದೆ. ಮನಸ್ಸಿಗೆ ಬಂದಷ್ಟೂ ಕಾಲ ಕೂತುಬಿಡುವ ಗಡುಸುತನ, ಎಷ್ಟೋ ಸಲ ಗಂಟೆಗಟ್ಟಲೆ ಖಾಲಿ ಹಾಳೆಯನ್ನು ನೋಡುತ್ತಾ ಕೂಡಲು ಬೇಕಾದ ಹಠ, ಅದನ್ನು ಅಕ್ಷರಗಳಿಂದ ಕಪ್ಪಾಗಿಸುವ ತನಕ ಏಳುವುದಿಲ್ಲವೆಂಬ ಛಲ ಬೇಕು. ನೀವು ತುಂಬಿಸಿದ ಹಾಳೆಯಲ್ಲಿ ಕಳಪೆ ಮಾಲು ಹೇರಳವಾಗಿರಬಹುದು. ಆದರೆ ಈ ಶಿಸ್ತು ಇದೆಯಲ್ಲ ಅದು ತುಂಬಾ ಬೆಲೆ ಬಾಳುವಂತದ್ದು. ಬೇಗನೇ ಬರಹ ಸುಧಾರಿಸುತ್ತದೆ. ಲೇಖನದಲ್ಲಿರುವ ಸತ್ವ ಹೊರಹೊಮ್ಮುತ್ತದೆ. ಪ್ರತಿನಿತ್ಯ ದಿನಚರಿ ಬರೆಯುವುದು ಉಪಯುಕ್ತ ತಾಲೀಮು ಎಂದು ನನ್ನ ನಂಬಿಕೆ. ಗೆಳೆಯರಿಗೆ ದೀರ್ಘಪತ್ರ ಬರೆಯುವುದೂ ಸಹ ಒಳ್ಳೆಯ ಅಭ್ಯಾಸ . ಪತ್ರಿಕೆಗಳಿಗೆ ನಿಯಮಿತವಾಗಿ ಅಂಕಣ ಬರೆಯುವುದು ಹಾಗೂ ನಿಗದಿತ ಡೆಡ್ ಲೈನ್ನೊಳಗೆ ಬರೆದು ಮುಗಿಸುವುದು

ಉತ್ತಮ ಅಭ್ಯಾಸ. ಕೆಲವೇ ದಿನಗಳ ಮಟ್ಟಿಗಾದರೂ ಬರವಣಿಗೆ ನಿಲ್ಲಿಸಿ ಮತ್ತೆ ರೂಢಿಸಿಕೊಳ್ಳುವುದು ಯಾತನೆಯಿಂದ ಕೂಡಿರುತ್ತದೆ.

ಬರೆದದ್ದರಿಂದ ನನಗೇನು ದೊರೆತಿದೆ ? ನನ್ನ ಅಂಕಣಗಳನ್ನು ಪ್ರಕಟಿಸಿಕೊಳ್ಳುವ ಪತ್ರಿಕೆ ಮತ್ತು ಮ್ಯಾಗಝೀನ್‌ಗಳಿಂದ ಸಾಕಷ್ಟು ಹಣ ಆದರೆ ನನ್ನ ಪುಸ್ತಕಗಳಿಂದ ಬರುವಷ್ಟಲ್ಲ. ಆದರೆ ಇವರೆಡರಿಂದ ಬರುವ ಹಣ ನನ್ನನ್ನು ಆದಾಯ ತೆರಿಗೆ ಕಟ್ಟುವವರ ಅಗ್ರಶ್ರೇಣಿಗೇರಿಸಿದೆ. ನನಗಿರುವ ಸಮಸ್ಯೆ ಆದಾಯದ್ದಲ್ಲ ಆದಾಯ ತೆರಿಗೆಯದು. ಹಣಕ್ಕಿಂತಲೂ ಹೆಚ್ಚಾಗಿ ಜನ ಬರಹವನ್ನು ಓದುತ್ತಾರೆ. ಮತ್ತು ಭಾರತದಲ್ಲಿ ನಾನೆಲ್ಲೇ ಇರಲಿ ಗುರುತಿಸುತ್ತಾರೆಂಬ ನೆಮ್ಮದಿ. ಹಣ ಅಥವಾ ಗುರುತಿಸುವಿಕೆಗಿಂತಲೂ ಬರವಣಿಗೆಯಿಂದ ನನಗೆ ಸಾರ್ಥಕತೆಯ ಭಾವ ದೊರೆತಿದೆ. ವಕೀಲಿಯಿಂದ ಮುತ್ಸದ್ದಿತನದಿಂದ ಇಲ್ಲವೇ ಪಾಠ ಪ್ರವಚನದಿಂದಲ್ಲ ಪ್ರತಿದಿನ ಸಾಕಷ್ಟು ಪ್ರಮಾಣದಲ್ಲಿ ಗೀಚುವುದರಿಂದ ನನಗಿದು ದೊರೆತಿದೆ. ಪೆನ್ನು ನನ್ನ ಕೈಯಿಂದ ಜಾರುವ ತನಕವೂ ಬರೆಯಲು ಬಯಸುತ್ತೇನೆ(ಪುಟ 401–402).

ಇಂದು ಏಕೋ ನೆನಪಾದಿರಿ

ಚಂದ್ರನಂತೆ ತಂಪಾಗಿ
ತಂಗಾಳಿಯಾಗಿ
ಮಂಜುಗಡ್ಡೆಯ ಮಂಜನ್ನು
ಹಿತವಾಗಿ ಹರಡಿದಿರಿ
ಇಂದೇಕೆ ನೆನಪಾದಿರಿ ?

ಉದುರಿದರೆ ನುಲಿಯುವುದೋ ಎಂಬ ಮಾತು
ನಿಮ್ಮ ಕಥೆ ವ್ಯಥೆಗಳನ್ನೆಲ್ಲಾ
ಒಂದೆಡೆ ಕೆತ್ತಿ
ಮುಗುಳ್ನಗೆ ಪ್ರತಿಷ್ಠಾಪಿಸಿದಿರಿ

ಹೆಡೆ ಎತ್ತಿ ಪೂತ್ಕರಿಸಿದರೂ
ಅಲ್ಲಿ ನಗುವಿನ ಕಿರುಬಿಂದು ಹರಡಿ
ತಣ್ಣಗೆ ಕರಗುವಿರಿ
ಅರೆ! ಇಂದೇಕೆ ನೆನಪಾದಿರಿ ?

ಇಂಥ ನಿಮ್ಮಂಥವರು ಎಡೆ ಬಿಡದೆ ಕಾಡಿ
ಚಂದ್ರಲೋಕಕೆ ನನ್ನ ಕರೆಯುವುದಿಲ್ಲವೇ ?

– ಎಂ. ಆರ್. ಭಗವತಿ

ಹೊಸ ಕಣ್ಣುಗಳಲ್ಲಿ ಕಾರಂತರ ಕಾದಂಬರಿಗಳು

ಬೆಂಗಳೂರಿನ ಗೆಳೆಯರ ಬಳಗ ರಂಗಭೂಮಿಯ ತಂಡ ಶಿವರಾಮ ಕಾರಂತರ ಜನ್ಮಶತಾಬ್ದಿಯ ಅಂಗವಾಗಿ ಅವರ ನಾಟಕ ಪ್ರದರ್ಶನ ಮತ್ತು ಅವರ ಕೃತಿಗಳನ್ನ ಕುರಿತ ವಿಚಾರ ಸಂಕಿರಣ ಏರ್ಪಡಿಸಿತ್ತು. ವಿವಿಧ ಕಾಲೇಜಿನ ವಿದ್ಯಾರ್ಥಿಗಳಾದ ಬಿ.ಮೈತ್ರಿ, ಆಶಾ, ಚಿನ್ಮಯಿ, ಮಹೇಶ ಎನ್.ಸಿ., ರಾಧ, ಪ್ರದೀಪ ಶೆಟ್ಟಿ ಇವರುಗಳು ತಾವು ಕಾರಂತರ ಕೃತಿಗಳನ್ನು ಓದಿದ ಬಗೆಯನ್ನು ಹಂಚಿಕೊಂಡರು. ಅವುಗಳಲ್ಲಿ ಆಯ್ದ ಕೆಲವು ಬರಹಗಳು ಇಲ್ಲಿವೆ.

ಮರಳಿ ಮಣ್ಣಿಗೆ

ಆಶಾ. ಶೇಷಾದ್ರಿಪುರಂ, ಸ್ನಾತಕೋತ್ತರ ಕೇಂದ್ರ

ಕಾರಂತರೇ ಹೇಳಿರುವಂತೆ. ಇದು ಮೂರು ತಲೆಮಾರುಗಳ ಕಥೆ. ಬಡತನದ ಬಾಳ್ವೆಯೇ ಕಥೆಯ ವಸ್ತುವಾಗಿದೆ. ಬದುಕಿನ ಇಕ್ಕಟ್ಟುಗಳು ಮತ್ತು ಸ್ವಾತಂತ್ರ್ಯವು ಈ ಕಾದಂಬರಿಯುದ್ದಕ್ಕೂ ಕಂಡುಬರುತ್ತದೆ. ದುಡಿಮೆಯ ನಿಷ್ಠುರ ಅನಿವಾರ್ಯತೆಗಳ ಎಡೆಯಲ್ಲೇ ಎಲ್ಲಾ ಮೌಲ್ಯಗಳೂ ಹುಟ್ಟುವುದೆಂದು ಕಾರಂತರು ನಂಬಿದ್ದರು.

ಮರಳಿ ಮಣ್ಣಿಗೆಯ ಸ್ಥಾಯಿವಸ್ತು ಬವಣೆ ಎಂಥ ಇಕ್ಕಟ್ಟಿನಲ್ಲೂ ಅರಳುವ ಬಾಳಿನ ಹಂಬಲದ ಬಗ್ಗೆ ಆದರ್ಶ, ಸ್ವಾಭಿಮಾನಗಳ ಬಗ್ಗೆ, ಮಾನವರ ಪರಸ್ಪರ ಸಂಬಂಧದ ಬಗ್ಗೆ ಕಾದಂಬರಿಯ ಪ್ರತೀ ವಾಕ್ಯ ಗಮನ ಹರಿಸುತ್ತದೆ ದುಡಿಮೆಗೆ ಕರೆಯುವ ನಿರಂತರವಾದ ಋತುಗಳು. ಜೀವನ ತರುವ ಸುಖ-ದುಃಖ. ವಿಫಲವಾದ ಆಸೆ.. ಇದರಲ್ಲೂ ಮೂಡುವ ಸಾಫಲ್ಯ ಎಲ್ಲವೂ ಇಲ್ಲಿದೆ. ಇದು ಬದುಕಿನ ಬಗ್ಗೆ ಒಂದು ನೋಟವಾಗಿದೆ. ಕಷ್ಟದ ಬೇಸಾಯದ ದುಡಿಮೆಯಿಂದ ದಣಿದ ಐತಾಳರು ಹಳ್ಳಿ ಜೀವನವೆಂದರೆ ಬೇಸರಿಸಿ ಆಲಸಿಯಾಗುವ ಲಚ್ಚ , ಇವೆರಡೂ ಈ ಕಾದಂಬರಿಯ ಅಂಗಗಳು. ಬೇಸಾಯದ ದುಡಿಮೆ ವಿರಾಮವಿಲ್ಲದ್ದು. ಮನಸ್ಸಿನ ಮುಕ್ತ ವಿಲಾಸಕ್ಕೆ ಎಡೆಕೊಡದೇ ಇರುವಂತದ್ದು. ಆದರೆ ಅದು ಋತುಗಳ ಜೊತೆ ನೈಮಿತ್ತಿಕ ಆಚರಣೆಗಳ ಜೊತೆ .ಇಹ ಪರಗಳ ಜೊತೆ. ಮನುಷ್ಯರನ್ನು ಇತರ ಮನುಷ್ಯರ ಜೊತೆ ಬೆಸೆಯಬಲ್ಲ ಶಕ್ತಿಯುಳ್ಳದ್ದು. ಓದು ಸಂಗೀತಗಳಿಗೆ ತೆರವಾದಾಗ ಮಾತ್ರ ರಾಮ ನಾಗವೇಣಿಯರಲ್ಲಿ ಆದಂತೆ ವಿರಾಮದ ಆಸೆ ಮೌಲಿಕವಾಗುತ್ತದೆ. ಆದರೆ ದುಡಿಯುವ ಬಚ್ಚಿಗೆ ಇದು ಮರುಳಾಗಿ ತೋರುತ್ತದೆ.

ರಾಮನ ಕಥೆ ಕಾರಂತರ ಮನಸ್ಸಿನಿಂದ ಬಂದದ್ದಾದರೂ , ಅನುಭವದಲ್ಲಿ , ಪ್ರಯಾಸದಲ್ಲಿ ಬೆಂದು ಹುಟ್ಟಿರುವ ಐತಾಳ. ಸರಸೋತಿ. ಪಾರೋತಿಯರು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತುತ್ತಾರೆ. ಮರಳಿ ಮಣ್ಣಿಗೆ ಕಾಲದ ಕನ್ನಡಿಯಾಗಿದೆ.

ಇದರ ಕಾಲ, ನಾಡಿನ ಸ್ವಾತಂತ್ರ್ಯದ ಜೊತೆಗೆ. ವ್ಯಕ್ತಿ ಸ್ವಾತಂತ್ರ್ಯವನ್ನೂ ಬಯಸುವ, ಪಾಶ್ಚಾತ್ಯ ಪ್ರಭುತ್ವದಷ್ಟೇ ಪ್ರಾದೇಶಿಕ ಪರಂಪರೆಯ ಶೃಂಖಲೆಗಳನ್ನೂ ವಿರೋಧಿಸುವ ಕಾಲ. ಕಾದಂಬರಿಯಲ್ಲಿ ಮರಳುವಿಕೆಯೂ, ಬೆಳೆಯುವಿಕೆಯೂ. ಎರಡೂ ಸಾಧಿತವಾಗುತ್ತವೆ. ಬದಲಾವಣೆಯಲ್ಲಿ ಒಳ್ಳೆಯದೂ ಸಾಧ್ಯ ಎಂಬುವುದನ್ನು ರಾಮನ ಪಾತ್ರ ನುಡಿಯುತ್ತದೆ. ಮೂರು ತಲೆಮಾರಿನ ಕಥೆಯಿಂದಾಗಿ ಕಾರಂತರು

ಕಾದಂಬರಿಗೆ ಹೆಚ್ಚಿನ ಆಳವನ್ನು ವಿಸ್ತಾರವನ್ನೂ ನೀಡಿದ್ದಾರೆ. ಮಣ್ಣು ಕೊಳೆವ, ಅದರಿಂದ ದೂರವಾಗುವ ಪುನಃ ಮರಳುವ ಮೂರು ಹಂತದ ಇತಿಹಾಸ ನಿರೂಪಣೆ ಇಲ್ಲಿದೆ. ಬದಲಾದ ಆರೋತ್ತರಗಳ ಹಿನ್ನಲೆಯಲ್ಲಿ ಈ ಮೂರು ಪೀಳಿಗೆಗಳ ಕಥೆ ಸಾಮಾಜಿಕ ಬದಲಾವಣೆಯ ಮೂರು ಘಟ್ಟಗಳನ್ನು ಸೂಚಿಸುವಂಥದ್ದೂ ಆಗಿದೆ.

ಕಾರಂತರ ಪಾತ್ರರಚನೆಯು ಅದ್ಭುತವಾಗಿದೆ. ಇಲ್ಲಿ ಬರುವ ರಾಮೈತಾಳರದ್ದು ತಲೆಮಾರಿನಿಂದಲೂ ನಿಸರ್ಗದೊಡನೆ ಸಹಯೋಗದ ಬಾಳುವೆ ನಡೆಸುವ ಮಾದರಿ. ನಿಸರ್ಗದ ಸಂಪರ್ಕವನ್ನು ಕಡಿದುಕೊಂಡು ಹೋಗಿ ಬಾಳುವೇ ನಡೆಸುವುದೇ ಲಚ್ಚನ ಮಾದರಿ. ಮತ್ತು ಹೊರಗುಳಿದ ಜೀವನ ಕ್ರಮದಿಂದ ಮರಳಿ ನಿಸರ್ಗಕ್ಕೆ ಹಿಂತಿರುಗುವುದು ರಾಮನ ಮಾದರಿ. ಮೇಲ್ನೋಟಕ್ಕೆ ಮುಖ್ಯವಾಗಿ ಕಾಣುವ ಐತಾಳ, ಲಚ್ಚ, ರಾಮರಂತೆಯೇ ಮಣ್ಣಿಗೆ ಮೈ ಹತ್ತಿಸಿ ಕುಳಿತಿರುವ ಸರಸೋತಿ, ಪಾರೋತಿ, ನಾಗವೇಣೀಯರೂ ಮುಖ್ಯ. ಇಲ್ಲಿ ಕೇಂದ್ರ ಶಕ್ತಿ ಹೆಣ್ಣು. ಜೀವನ ಕ್ರಮೇಣ ಗಂಡಿನದು.

ಇಲ್ಲಿ ಬರುವ ಪ್ರತಿಯೊಂದು ಹೆಣ್ಣಿನ ಚಿತ್ರಣವನ್ನು ಕಾರಂತರು ಹೆಣ್ಣಿನ ಮನಸ್ಸನ್ನು ಹೊತ್ತು ಚಿತ್ರಿಸಿದ್ದಾರೆ. ಹೆಣ್ಣಿನ ಮನಸ್ಸಿನಲ್ಲಿ ನಡೆಯುವ ಭಾವನೆಗಳ ಘರ್ಷಣೆ, ಸಂವೇದನೆ, ಪ್ರೀತಿ, ಮಮತೆ, ಆಸೆ, ನಿರಾಸೆ, ದುಃಖ, ಪ್ರತಿಯೊಂದನ್ನು ತೆರೆದಿಡುವ ಲೇಖಕನೂ ಹೆಣ್ಣೆ ಎಂಬ ಭಾವನೆ ನಮ್ಮ ಮನಸ್ಸಿನಲ್ಲಿ ಸಹಜವಾಗಿ ಮೂಡುತ್ತದೆ. ತನ್ನ ನಿಸ್ವಾರ್ಥ ಪ್ರೇಮದಿಂದ ಬಾಳನ್ನು ಸವೆಸುವ ಪಾರೋತಿ, ಕರುಣೆ, ಸ್ವಾಭಿಮಾನ, ವಿವೇಕ ತುಂಬಿರುವ ಕೆಚ್ಚೆದೆಯ ಸರಸೋತಿ, ಪೇಟೆಯವಳಾದರೂ ಹಳ್ಳಿಯ ಹಳೆಯ ಮೌಲ್ಯಗಳನ್ನು ಮೈಗೂಡಿಸಿಕೊಂಡು, ಗಂಡನ ಎಲ್ಲಾ ಹಿಂಸೆಗಳನ್ನು ಸಹಿಸಿಕೊಂಡು ಕೂಡ ಮಗ ರಾಮನ ಹೊಸ ಜೀವನಕ್ಕೆ ತಳಪಾಯವಾಗಿ ನಿಷ್ಠೆಯ ಪ್ರತೀಕವಾಗಿರುವ ನಾಗವೇಣಿ. ಹೀಗೆ ಕಾದಂಬರಿಯುದ್ದಕ್ಕೂ ಒಬ್ಬರಾದ ಮೇಲೊಬ್ಬರಾಗಿ ಕಾಣಸಿಗುವವರು. ತ್ಯಾಗಮಯಿಯಾದ, ಸೌಜನ್ಯದ ಸೈರಣೆಯ ಮೂರ್ತಿಯರಾಗಿರುವ ಹೆಂಗಸರು. ಇಲ್ಲಿನ ಹೆಂಗಸರು ಸಾಮಾಜಿಕ ವ್ಯವಸ್ಥೆಯ ಎಲ್ಲಾ ಹೊಡೆತಗಳನ್ನು ತೆಗೆದುಕೊಂಡು, ಸ್ಥೈರ್ಯದಿಂದ ಹೊಂದಿಕೊಂಡು ಹೋಗುವುದರಲ್ಲೇ ಬದುಕಿನ ಅರ್ಥವನ್ನೂ ಕಾಣುತ್ತಾರೆ.

ಈ ಕಾದಂಬರಿಯಲ್ಲಿ ನಮಗೆ ಕಾಣಸಿಗುವ ಇನ್ನೊಂದು ಅಂಶ ನಿಸರ್ಗ ಮಾನವ ಸಂಬಂಧ ಬಹುಸನ್ನಿವೇಶಗಳು ದಕ್ಷಿಣ ಕನ್ನಡದ ಕರಾವಳಿಯ ಬದುಕಿಗೆ ಸಂಬಂಧಿಸಿದ್ದು. ಮರಳಿ ಮಣ್ಣಿಗೆ ಒಂದು ರೀತಿಯಲ್ಲಿ ಕಥೆಯಷ್ಟೇ ಆ ಕಡಲಿನ ಕಥೆಯೂ ಕೂಡ. ಕಥೆಯ ಆರಂಭದಿಂದ ಕೊನೆಯವರೆಗೂ, ಪ್ರತಿಯೊಂದೂ ತಿರುವಿನಲ್ಲೂ ಕಡಲು ಮುಖ್ಯ ಪಾತ್ರ ವಹಿಸುತ್ತದೆ. ರಾಮನ ಜೀವನದುದ್ದಕ್ಕೂ ಕಡಲಿನ ಕೂಗು ಅದಮ್ಯವಾದ ಕರೆ. ಈ ಕಾದಂಬರಿಯಲ್ಲಿ ನಮ್ಮ ಗಮನ ಸೆಳೆಯುವುದು ಕಾರಂತರ ಕಲಾವಿದ ಮನಸ್ಸು. ಎಲ್ಲಾ ಕಷ್ಟಗಳನ್ನು ಸಹಿಸಿಯೂ ಕೂಡಾ ಸಂಗೀತದಲ್ಲಿ, ಓದಿನಲ್ಲಿ, ತನ್ನನ್ನು ತಾನೇ ಮರೆಯುವ ನಾಗವೇಣಿ. ಆರ್ಥಿಕ ಬಿಕ್ಕಟ್ಟಿನಲ್ಲಿಯೂ ಚಿತ್ರಕಲೆಯಲ್ಲಿ ಮಾನಸಿಕ ಶಾಂತಿ ಕಾಣುವ ರಾಮನೂ ಕಾರಂತರ ಕಲಾ ಹಾಗೂ ಸಂಗೀತ ಪ್ರೇಮಕ್ಕೆ ಸಂಕೇತ. ಕಥಾನಾಯಕನಾಗಿರುವ ರಾಮನಿಗೆ ಮೊದಲಿನಿಂದಲೂ ಕಡಲಿನ ಬಗ್ಗೆ ಒಂದು ವಿಶೇಷ ಹುಚ್ಚು. ಕಡಲಿನ ಚಿತ್ರ ವಿಚಿತ್ರ ಚಿಪ್ಪುಗಳೇ ಅವನ ಆಟಿಕೆಗಳಾಗಿದ್ದವು. ಗ್ರಾಮದಲ್ಲಿ ಬಯಲಾಟವಾದರೆ ಚಂಡೆಯ ಧ್ವನಿ ಕೇಳಿದರೆ ಅಲ್ಲಿಗೆ ಹೋಗದೆ ಅವನಿಗೆ ನಿದ್ದೆಯೇ ಬರಲಾರದು. ಅವನು ಸಮುದ್ರದ ಜೊತೆ ಮಾತನಾಡುವ, ಸಮುದ್ರಕ್ಕೂ ಅವನಿಗೂ ಪ್ರೀತಿ. ಗೋಡೆಯ ಮೇಲೆಲ್ಲಾ ಬರಿಯ ಸಮುದ್ರದ ಚಿತ್ರವನ್ನೇ ಬರೆಯುತ್ತಾನೆ. ನಾಗವೇಣಿ ತಾಳ ಹಿಡಿದಾಗ ದೊರಕದ

ಶಾಂತಿಯನ್ನು ತಂತಿ ಮೀಟಿ ಪಡೆಯುವಳು. ರಾಮನು ಪಿಟೀಲಿನಲ್ಲಿ ತಾಯಿಯನ್ನು ಮೀರಿಸುವನು. ಕೊನೆಯಲ್ಲಿ ಇಬ್ಬರೂ ಕಡಲ ಮುಂದೆ ಕುಳಿತು ಪಿಟೀಲು ಬಾರಿಸುವುದರಲ್ಲೇ ಸಂತೋಷವನ್ನು ಕಾಣುವರು. ಕಾರಂತರ ಬರಹದಲ್ಲಿ ಕಲೆಯ ಪಾತ್ರ ಕುತೂಹಲಕರವಾಗಿದೆ. ನೋವಾಳು ತನ್ನ ಮನೆಯ ಹಿಂಭಾಗವನ್ನು ಚಿತ್ರಿಸುತ್ತಾ ಅಥವಾ ರಾಮನು ತನ್ನ ಬಾಲ್ಯದ ಸಂಗತಿಯಾದ ಕಡಲನ್ನು ಚಿತ್ರಿಸುತ್ತಾ ಬದುಕಿನಲ್ಲಿ ಕಳೆದುಕೊಂಡದ್ದನ್ನು ಚಿತ್ರಿಸಿ ಪಡೆಯಲು ಪ್ರಯತ್ನಿಸುತ್ತಾರೆ.

ಮರಳಿ ಮಣ್ಣಿಗೆ ಸಾಮಾನ್ಯತೆಯನ್ನೇ ಮೌಲ್ಯವಾಗಿಸಹೊರಟ ಕಾದಂಬರಿ. ಇಲ್ಲಿ ಕಾದಂಬರಿಗೆ ಮುಕ್ತಾಯವಿಲ್ಲ. ರಾಮನಲ್ಲಿ ಹೊಸ ಮೌಲ್ಯಗಳ ಹುಡುಕಾಟವಿದೆ. ಅವನ ಜೀವನದ ಪ್ರಾರಂಭವಾದ ಮೊದಲ ಹಂತಗಳನ್ನಷ್ಟೇ . ಕಾರಂತರೂ ಸೂಚಿಸಿದ್ದಾರೆ. ಇಲ್ಲಿ ಕಥೆ ಈಗಷ್ಟೇ ಆರಂಭಗೊಂಡಿದೆ, ಕೊನೆಗೊಂಡಿಲ್ಲ.

ಮೈ ಮನಗಳ ಸುಳಿಯಲ್ಲಿ – ಒಂದು ವಿವೇಚನೆ

ಎನ್. ಸಿ. ಮಹೇಶ್, ದ್ವಿತೀಯ ಎಂ.ಎ., ಜ್ಞಾನ ಭಾರತಿ

ಕಾಯಕ್ಕೆ ಕಾಯವಾಗಿ, ತನುವಿಂಗೆ ತನುವಾಗಿ
ಮನಕ್ಕೆ ಮನವಾಗಿ, ಜೀವಕ್ಕೆ ಜೀವವಾಗಿ ಇದ್ದುದನಾರು ಬಲ್ಲರೋ
ಅದು ದೂರವೆಂದು, ಅದು ಸಮೀಪವೆಂದು
ಮಹಂತ ಗುಹೇಶ್ವರನೊಳಗೆಂದು ಹೊರಗೆಂದು
ಬರಿಸೂರೆ ಹೋದರೆಲ್ಲರೂ

ಅಲ್ಲಮ ಪ್ರಭುವಿನ ಈ ವಚನ ದೇಹ, ಮನಸ್ಸು, ಜೀವ ಈ ಎಲ್ಲಕ್ಕೆ ಪೂರಾ ಬದ್ಧವಾಗಿದ್ದು ಅನೇಕರು ತಾಳುವ ನಿಲುವುಗಳಿಗೆ ಒಂದು ಪ್ರತಿಕ್ರಿಯೆಯಂತಿದೆ. ಮೇಲೆ ಉದಾಹರಿಸಿದ ವಚನದ ರೀತಿಯಲ್ಲಿ ಯಾರಾದರೂ ತಮ್ಮ ನಿಷ್ಠೆಗೆ ತಾನೆ ಉದಾಹರಣೆ ಅಂತ ಭಾವಿಸಿಕೊಂಡರೆ ಅದು ಕೇವಲ ಸೂರೆ ಹೋಗುವ ಮಾತು ಅನ್ನುತ್ತಾನೆ ಅಲ್ಲಮ. ಸೂಕ್ಷ್ಮವಾಗಿ ಚಿಂತಿಸಿದರೆ ಇದು ನಿಜವೂ ಹೌದು.

ಪ್ರಸ್ತುತ ಶಿವರಾಮಕಾರಂತರ 'ಮೈಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿಯೂ ಕೂಡಾ ಇಂಥವೇ ಸಾಕಷ್ಟು 'ಸೂರೆ' ಹೋಗುವ ಸನ್ನಿವೇಶಗಳಿವೆ. ಕಾರಂತರು ಮುನ್ನುಡಿಯಲ್ಲಿ 'ಕತೆ, ಒಬ್ಬಳು ವಾರಾಂಗನೆಯ ಸುತ್ತ ಸುತುವರಿಯುವಂಥದ್ದು' ಅಂತ ಬರೆದಿದ್ದಾರೆ ಮತ್ತು ಇದಕ್ಕೆ ಪೂರಕವಾಗಿ ಕಾದಂಬರಿಯ ಪ್ರಾರಂಭಕೂಡ ಅರ್ಥಪೂರ್ಣವಾಗಿದೆ. ವಸುಪುರ ಎಂಬ ಊರು ಬಸರೂರು ಆದದ್ದು, ಅನಂತರದಲ್ಲಿ ಇಂಗ್ಲೀಷರು, ಡಚ್ಚರು, ಪೋರ್ಚುಗೀಸರು ಮುಂತಾದವರ ಕಡಲ ವ್ಯಾಪಾರದಿಂದಾಗಿ ಬಸರೂರಿನಲ್ಲಿ, 'ವೇಶ್ಯಾ ವ್ಯವಸಾಯ' ನಿರ್ಮಾಣವಾಗಿ ದೂರವ್ಯಾಪಾರದ ಕಾರಣದಿಂದಾಗಿ ಊರಿನ ನಾವಿಕರು, ವರ್ತಕರು, ತುಂಬ ದೂರಕ್ಕೆ ಹೊರಟುಬಿಟ್ಟಾಗ ಅವರ ಹೆಂಡತಿಯರು ಅನಿವಾರ್ಯವಾಗಿ ಮೈಮಾರಿ ಜೀವಿಸಬೇಕಾದ ಸಂದರ್ಭಗಳು ಎದುರಾಗುತ್ತವೆ. ಹಾಗು ಅವರೆಲ್ಲರೂ ಕೂಡ ಈ 'ವೇಶ್ಯಾವ್ಯವಸಾಯ'ದಲ್ಲಿ ಭಾಗಿಯಾಗುತ್ತಾರೆ. ಕಾರಂತರು ಬಸರೂರಿನಲ್ಲಾದ ಈ ಬದಲಾವಣೆಯನ್ನು ಒಂದು ಸಹಜ ಪ್ರಶ್ನೆಯೊಂದಿಗೆ ಪ್ರಾರಂಭಿಸಿ, ಆಶ್ಚರ್ಯವನ್ನು ವ್ಯಕ್ತಪಡಿಸದೆ ವ್ಯವಸ್ಥೆಯ ಪರವಾಗಿ ನಿಂತಂತೆ ಮಾತಾಡುತ್ತಾರೆ. "ಹೊಟ್ಟೆಯ ಹಸಿವಿನಂತೆ ಮೈಮನಗಳ ಅನ್ಯ ಕಾಮನೆಗಳಿಲ್ಲವೆ? ಅವು ಎಷ್ಟು ಕಾಲ ಮೂಕವಾಗಿರಬಲ್ಲವು? ಇಂಥವರಲ್ಲನೇಕರು ಉಂಡುಡುವ ತೃಪ್ತಿಗಾಗಿಯೇ ರೇವಿಗೆ ಬರುವ, ತಮ್ಮ

ಮಾತನ್ನೂ ಅರಿಯದ, ಕೇವಲ ಕಿಸೆ ತೋರಿಸಿ, ಕಣ್ಣಿಂದ ತಮ್ಮ ಇಂಗಿತ ಸೂಚಿಸಬಲ್ಲ ನಾವಿಕರಿಗೆ ಮಾರುಹೋದರೆ ಆಶ್ಚರ್ಯವಿಲ್ಲ ....."

ಈ ತರ್ಕಬದ್ಧ ಮಾತನ್ನು ಒಪ್ಪಬಹುದು. ಮೈಮನಗಳು ಬಹಳ ಕಾಲ ಮೂಕವಾಗಿರಲಾರದಾಗ ಪ್ರಕಟಗೊಳ್ಳುವ ಅಭೀಪ್ಸೆಗಳಿಗೆ ಕಾರಂತರ ಮಾತು ಪೂರಕವಾಗಿದೆ. ಇದು ನಿಜವೇ ಆದರೂ ಮನುಷ್ಯನ ಮನೋಚಟುವಟಿಕೆಗಳಿಗೆ ಒಂದು ನಿರ್ಬಂಧ ಹೇರಿ ಮಾತಾಡಿದಂತಾಗುತ್ತದೆ. ನಮ್ಮ ಗ್ರಹಿಕೆಗಳೆಲ್ಲ ತಪ್ಪುವುದು ಇಲ್ಲಿಯೆ. ಬದಲಾಗಿ ನಾವು ಮನುಷ್ಯನನ್ನ ಆತನ ಎಲ್ಲ ಆಳದ ಕಾಳಜಿ, ಕನಸು, ದ್ವಂದ್ವಗಳಿಂದ ಅರ್ಥೈಸಿಕೊಳ್ಳಬೇಕು. 'ಮೈಮನಗಳ ಸುಳಿಯಲ್ಲಿ' ಕಾದಂಬರಿಯನ್ನು ನಾವು ಹೀಗೇ ಅನೇಕ ಬಗೆಗಳಲ್ಲಿ ವಿಶ್ಲೇಷಿಸ ಹೊರಟರೆ ನಮಗೆ ಅನೇಕ ಆಯಾಮಗಳು ಕಂಡು ಬರುತ್ತವೆ. ಹೆಣ್ಣು ಮಗಳೊಬ್ಬಳು ತನಗೊದಗಿದ ಅನಿವಾರ್ಯ ಸ್ಥಿತಿಯಿಂದ ವೇಶ್ಯಾವಾಟಿಕೆಗೆ ತನ್ನನ್ನು ಒಪ್ಪಿಸಿಕೊಂಡು ಯಾವುದೇ ಬಿಗುಮಾನ, ದ್ವಂದ್ವಗಳಿಲ್ಲದೆ ಸಂಪೂರ್ಣ ಸಹಕಾರದ ಮನಸ್ಸಿನೊಂದಿಗೆ ತನ್ನ ದೇಹವನ್ನ ಅನ್ಯರಿಗೆ ಒಪ್ಪಿಸುತ್ತಾಳೆಯೆ? ಇದು ಸಾಧ್ಯವಿಲ್ಲ ಅನ್ನುವುದು ಕಾರಂತರಿಗೆ ಮನವರಿಕೆಯಾಗಿಯೇ ಅವರು ಮೈಮನಗಳ ನಡುವಿನ ದ್ವಂದ್ವಗಳನ್ನು ಚಿತ್ರಿಸಲು ತಾವು ಕಂಡ ಅಥವಾ ಕೇಳಿದ ಪಾತ್ರಗಳಲ್ಲಿ ಸುಳಿಗಳಲ್ಲಿ ಸೃಷ್ಟಿಸಿ ಸೃಜನಶೀಲವಾಗಲು ಪ್ರಯತ್ನಿಸಿದ್ದಾರೆ.

ಕಾದಂಬರಿಯ ಕತೆ ಮುಖ್ಯವಾಗಿ ನಾಲ್ಕು ತಲೆಮಾರುಗಳನ್ನು ಒಳಗೊಂಡಿದೆ. ಭವಾನಿ, ಮಂಜುಳೆ, ಶಾರಿ ಹಾಗು ಕೊನೆಯದಾಗಿ ಚಂದ್ರಿ. ಈ ನಾಲ್ವರಲ್ಲಿ ನಮ್ಮ ಮನಸ್ಸನ್ನು ಪೂರಾ ಸೆಳೆದಿಟ್ಟುಕೊಳ್ಳುವುದು ಮಂಜುಳೆಯ ಆತ್ಮವೃತ್ತಾಂತ. ಇದು ಕಾದಂಬರಿಯಲ್ಲಿ ಸವಿಸ್ತಾರವಾಗಿ ಚಿತ್ರಿತವಾಗಿದೆ. ಮಂಜುಳೆಯ ತಾಯಿ ಭವಾನಿ. ಈಕೆ ತನ್ನ ಕುಲಕಸುಬಾದ ವೇಶ್ಯಾವಾಟಿಕೆಯನ್ನು ನಡೆಸಿಕೊಂಡು ಬಂದೂ ತಾಳುವ ನಿಲುವೆಂದರೆ, "ನಾವು ಮೈಯನ್ನು ಮಾರಿಕೊಳ್ಳಬೇಕೇ ಹೊರತು ಮನಸನ್ನಲ್ಲ "ಎಂಬುದು. ತನ್ನ ತಾಯಿಯ ಈ ನಂಬಿಕೆಯ ಮಾತು ಮಂಜುಳೆಯಲ್ಲಿ ಆಶ್ಚರ್ಯ ಹುಟ್ಟಿಸುತ್ತದೆ. ಮಂಜುಳೆಯ ಮಾತು ಹೀಗಿದೆ: ಮಾತೇನೋ ಸುಲಭದ್ದು: ನನ್ನ ಆಚೀಚೆ ಕಾಣುತ್ತಾ ಇದ್ದೀನಲ್ಲಾ ಅದು ಎಷ್ಟು ನಿಜ? ಹೀಗೆ ಪ್ರಶ್ನಿಸಿಕೊಳ್ಳುವ ಹೊತ್ತಿಗಾಗಲೆ ಮಂಜುಳೆಯ ಬದುಕಿನಲ್ಲಿ ಸುಳಿಗಳು ಎದ್ದಿವೆ. ಆದರೂ ಆಕೆ ತಾಳುವ ನಿಲುವೆಂದರೆ 'ಮೈಯ ಮೂಲಕ ಮನಸ್ಸಿನ ಸುಖ ದೊರೆಯುತ್ತಿರಬೇಕಾದರೆ ಅವೆರಡನ್ನು ಕಳಚಿ ಬೇರೆಯಾಗಿಸಿ ಬದುಕಬಲ್ಲೆನೆಂಬ ಧೈರ್ಯ ಬರದೇ ಬರದು.'

ಹೀಗೆ ನಿರ್ಭಿಡೆಯಿಂದ ಬದುಕಲೆತ್ನಿಸುವ ಮಂಜುಳೆಯ ದಿನಚರಿ ಇವತ್ತಿನ ಮಟ್ಟಿಗೆ ಸ್ವಲ್ಪ ಚಕಿತಗೊಳಿಸುತ್ತದೆ. ಯಾಕೆಂದರೆ ನಾವು ಯಾವುದೇ ಸೃಜನಶೀಲ ಕೃತಿಯನ್ನು ಓದಿದರೂ ಅದನ್ನು ನಮ್ಮ ಸಮಕಾಲೀನ ಬದುಕಿನೊಂದಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ತಾಳೆ ಹಾಕಿಕೊಂಡೇ ಓದುತ್ತಿರುತ್ತೇವೆ. ಶ್ರೇಷ್ಠ ಕೃತಿಯಾಗಿದ್ದರೆ ಅದು ಎಲ್ಲ ಕಾಲಕ್ಕೂ ತನ್ನ ಆಶಯಗಳಲ್ಲಿ ಅನ್ವಯವಾಗುತ್ತಿರುತ್ತದೆ. ಕಾರಂತರು ಮೈಮನಗಳ ಸುಳಿಯಲ್ಲಿ ಕಾದಂಬರಿ ಬರೆಯುವ ಕಾಲಕ್ಕೆ ವೇಶ್ಯಾವಾಟಿಕೆಗೆ ಒಂದು ಮಾನವಂತ ಘನತೆ ಇದ್ದಿರಬಹುದಾದರೂ ಅವೆಲ್ಲವುಗಳನ್ನು ಕೇವಲ ಆಯಾ ವಿವರಗಳ ಸಮೇತ ಹಿಡಿದಿಟ್ಟಿರುವುದರಿಂದ ಇವತ್ತಿನ ವೇಶ್ಯಾ ಸ್ವರೂಪದೆದುರಿಗೆ ಆ ಎಲ್ಲವೂ ಬರೀ ಚಾರಿತ್ರಿಕ ಸತ್ಯಗಳಾಗಿ ಕಾಣುತ್ತವೆ. ಕಾರಂತರು ಚರಿತ್ರೆಯ ಪುಸ್ತಕದೊಳಗೆ ತಮ್ಮ ಪಾತ್ರಗಳನ್ನು ಕರೆದುಕೊಂಡು ಹೋಗಿ ಅನೇಕ ಸೀನ್‌ಗಳನ್ನು ಡೈರೆಕ್ಟ್ ಮಾಡಿದ್ದಾರೇನೊ ಅನಿಸುತ್ತದೆ. ಸ್ವರೂಪ ಎಂಥದಿದ್ದರೂ ಅದರ ಆಶಯ ಸಮಕಾಲೀನವಲ್ಲದಿದ್ದರೆ ಆ ಕೃತಿಯ ಜೀವಂತಿಕೆಯನ್ನು ಅದೇ ಗುರುತಿಸಿಕೊಳ್ಳುವುದು ಒಳ್ಳೆಯದು.

ಮಂಜುಳೆ ತಾನು ಕಳೆದ ಒಬ್ಬಬ್ಬರೊಂದಿಗಿನ ಅನುಭವಗಳನ್ನು ದಾಖಲಿಸುವ ಕ್ರಮವೇ ಚಕಿತಗೊಳಿಸುತ್ತದೆ. ಇದೆಲ್ಲ ಸಾಧ್ಯವಾದದ್ದು ಆಕೆ ಚಿಕ್ಕಂದಿನಲ್ಲೇ ಶ್ರದ್ದೆಯಿಂದ ಅಭ್ಯಸಿಸಿದ ಸಂಸ್ಕೃತ ಕಾವ್ಯಗಳಿಂದ ಪ್ರಭಾವಿತವಾದದ್ದು ಹಾಗು ಆಕೆ ಶಾಸ್ತ್ರೀಯ, ಹಿಂದೂಸ್ಥಾನಿ ಸಂಗೀತ ಕಲಿತು ಹೆಚ್ಚು ಸಂಸ್ಕಾರವಂತ ಹೆಣ್ಣುಮಗಳಾಗಿದ್ದದ್ದು ಕಾರಣವಿರಬಹುದು. ಉಳ್ಳೂರರೊಂದಿಗಿನ ಅನುಭವವನ್ನೂ ಮಂಜುಳೆ ದಾಖಲಿಸುವುದು ಹೀಗೆ: 'ವರುಷ ವರುಷಕ್ಕೂ ತುಂಬಿ ಅರಳುವ ನರುಗಂಪಿನ ಮಲ್ಲಿಗೆಯ ಬಳ್ಳಿಯೇ ಸರಿ.' ಇನ್ನು ಲಕ್ಷ್ಮಣ ತೀರ್ಥರೊಂದಿಗಿನ ಅನುಭವವನ್ನು ಕಾವ್ಯತ್ಮಕವಾಗಿ ದಾಖಲಿಸುತ್ತಾಳೆ. 'ನನ್ನ ಕೈಗೆ ಬಂದ ಕೋಮಲವೂ ಅಲ್ಲದ , ಕಠಿಣವೂ ಇಲ್ಲದ ಆ ದೇಹದಲ್ಲಿ ಎಲ್ಲೆಲ್ಲಿ ಧ್ವನಿ ಹೊರಡಿಸುವ ಮೆಟ್ಟಿಲುಗಳು ನಿಂತಿವೆ. ಯಾವಲ್ಲಿ ಮೀಟಿದರೆ ನನ್ನ ಆಸೆಗೆ ತಣಿವಾದೀತು–ಎಂದು ಅರಸಿ ನುಡಿಸಿ, ನಲಿದೆ. ಅದೊಂದು ಮಾನವ ದೇಹವೇ ಅನಿಸಲಿಲ್ಲ. ನನ್ನ ಪಾಲಿಗೆ.' ಹಾಗೆಯೆ ಮಂಜುಳೆಯ ದನಿಯಲ್ಲಿ ಅಸಹನೆ ಕಾಣುವುದು ಕಂಪಾಪೈಗಳು ಹಾಗೂ ನಂಜಪ್ಪ ಆಕೆಯನ್ನು ಭೋಗಿಸಿದ ರೀತಿಯಲ್ಲಿ: 'ನಮ್ಮ ಊರಿನಲ್ಲಿ ಗುಟುರು ಹಾಕಿ: ಅಲೆದಾಡುವ ದೇವಸ್ಥಾನದ ಬಸವನಿಗೂ ಅವರ ಚರ್ಯೆಗೂ ಹೆಚ್ಚಿನ ವ್ಯತ್ಯಾಸ ಕಾಣುವುದಿಲ್ಲ ಇವೆಲ್ಲ ವ್ಯಾಖ್ಯಾನಗಳು ಸರಿ ಅಂತ ಒಪ್ಪಿಕೊಂಡರೂ ಮಂಜುಳೆ ತಾನು ಹಿಂದೆ ತಳೆದ ನಿರ್ಧಾರ ಕ್ರಮೇಣ ಆಕೆಯಲ್ಲೇ ಸುಳಿಗಳೇಳುತ್ತಿರುವುದು ಕಾಣಬರುತ್ತದೆ. ಮೈಯ ಮೂಲಕ ಮನಸ್ಸಿನ ಸುಖ ದೊರೆಯುತ್ತಿರಲು... ಅಂತ ಹೇಳಿದ ಮಂಜುಳೆ, ಉಳ್ಳೂರರು, ಆಕೆಯ ಬದುಕಿನಲ್ಲಿ ಪ್ರವೇಶಿಸುವ ಹೊತ್ತಿಗೆ 'ಬೃಹನ್ನಳೆ'ಯಾಗಿರುತ್ತಾರೆ. ಅವರ ಸಂಬಂಧದ ಒಡನಾಟದಲ್ಲಿ ಮಂಜುಳೆಯ ಮನಸ್ಸು ಮಾತ್ರ ಖುಷಿಯಾಗಿರಬಲ್ಲದು. ಹೀಗಿರುವಾಗ ಲೈಂಗಿಕ ಸಂಬಂಧದಲ್ಲಿ ಮನಸ್ಸಿನ ಪಾತ್ರವೇ ಹಿರಿದು ಅಂತೇನಾದರೂ ಹೇಳಿದ್ದಾಳೆಯೇ? . ಇದೂ ಒಂದು ಸುಳಿ. ಇದೆಲ್ಲದರ ಆಚೆಗೆ ಮಂಜುಳೆ ತನ್ನ ವೃತ್ತಿಯನ್ನೇ ಸಮರ್ಥಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ರಾಮಪ್ಪ ಅಡಿಗಳು ಹಾಗು ಕಾವೇರಮ್ಮನ ದಾಂಪತ್ಯದ ನಿರರ್ಥಕತೆ ಕಾಣುವುದು ದುಗ್ಗಿ ಪಮ್ಮರ ಎದುರಿಗೆ. ಪಮ್ಮ ಮುದುಕ, ದುಗ್ಗಿ ಕುರುಡಿ. ಹೀಗಿದ್ದೂ ಪಮ್ಮ ತನ್ನ ಹೆಂಡತಿಗೆ ನೆರವಾಗುವ ಬಗೆ, ಊಟ ಮಾಡಿಸುವ ರೀತಿ ಮುಂತಾದವುದೆಲ್ಲ ಮಂಜುಳೆಗೆ ಆದರ್ಶವಾಗುತ್ತದೆ. ಯಾಕೆಂದರೆ ರಾಮಪ್ಪ ಅಡಿಗಳ ಜೀವನಕ್ರಮದ ಬಗ್ಗೆ ಮಂಜುಳೆಯಲ್ಲಿ ಟೀಕೆಯಿದೆ: 'ಅಗ್ನಿಯಸುತ್ತ ಏಳುಸುತ್ತು ಬರಲಿ. ಎಪ್ಪತ್ತು ಸುತ್ತು ಬರಲಿ. ಸುತ್ತಿದ್ದು ನಿರರ್ಥಕವಾಗಬೇಕಾದರೇ ದುಗ್ಗಿ–ಪಮ್ಮರ ಹಾಗಿರಬೇಕು' ಅನ್ನುವ ಮಂಜುಳೆ ತನ್ನ ಕನಸಿನಲ್ಲಿ ದುಗ್ಗಿ ಪಮ್ಮಾರನ್ನ ತರುಣ ವಧು ವರರನ್ನಾಗಿ ಕಾಣುವುದು, ಅವರನ್ನು ಕುದುರೆ ಹಾರಿಕೊಂಡು ಹೋಗುವುದು, ದೇವಲೋಕದಲ್ಲಿ ದೇವತೆಗಳೂ ಅವರಿಬ್ಬರನ್ನು ನೋಡಿ ನಾಚುವುದು ಮುಂತಾದವೆಲ್ಲ ಕಾರಂತರ ಸಮರ್ಥನೀಯ ಸೃಷ್ಟಿಗಳು ಅಂತ ಬೇಗ ತಿಳಿದುಬರುತ್ತದೆ.

ಇನ್ನು ಮೂರು ಮತ್ತು ನಾಲ್ಕನೇ ತಲೆಮಾರಿನ ಶಾರಿ ಹಾಗು ಚಂದ್ರಿ ಹೆಚ್ಚು ಪ್ರಸ್ತುತ ಅನಿಸುತ್ತಾರೆ. ಶಾರಿ ಮಂಜುಳೆಗಿಂತ ತೀರ ಭಿನ್ನವಾಗಿ ಕಾಣಿಸುವುದು ಅವಳ ಶುದ್ಧ ಲೌಕಿಕ ಯೋಚನೆಗಳಿಂದ ತನ್ನ ದುಸ್ಥಿತಿಗೆ ಮರುಗಿ ಯಾರದೋ ಹೇಳಿಕೆ ಮಾತು ಕೇಳಿಕೊಂಡು ತನ್ನ ಉದ್ಧಾರವಿರುವುದು ಭಾವಿ ಅಳಿಯನಿಂದ ಅಂತ ಮನವರಿಕೆಯಾಗಿದ್ದರಿಂದ. ಅದಕ್ಕಾಗಿ ಇನ್ನಿಲ್ಲದಂತೆ ಚಂದ್ರಿಯನ್ನು ಬದಲಾಯಿಸುವ ಪ್ರಯತ್ನ ಮಾಡುತ್ತಾಳೆ ಶಾರಿ. ತನ್ನ ಮಗಳು ಚಂದ್ರಿಗೆ ಯಾರೋ ಬಂದಿದ್ದಾರೆ ನೋಡು ಅಂತ ಹೇಳಿದರೆ, ಚಂದ್ರಿ ಅದಕ್ಕೆ ಉದಾಸೀನವಾಗಿ ಬಂದರೆ ಬಂದಹಾಗೇ ಹೋಗ್ತಾರೆ, ಅನ್ನುತ್ತಾಳೆ. ಅವಳಿಗೆ ಇದೆಲ್ಲ ಅಸಹ್ಯ ಅನಿಸಿದೆ. ಬೇಕಾದರೆ ಬಾವಿಗೆ ಬಿದ್ದುಬಿಟ್ಟೇನು, ಇಂಥ ಎಂಜಲು ತಿಂದು ಬದುಕಲು

ಸಾಧ್ಯವಿಲ್ಲ ಎಂಬ ನಿಲುವು ಆಕೆಯದು. ಅದಲ್ಲದೇ ಜೀವನ ನಿರ್ವಹಣೆಗೆ ಚಂದ್ರಿಯಲ್ಲಿ ಅಷ್ಟೊಂದು ಗೊಂದಲಗಳಿಲ್ಲ. ಮಾಸ್ತರಿಕೆ ಅಥವಾ ಇನ್ನಾವುದಾದರೂ ಕೆಲಸ ಸಿಕ್ಕೇ ಸಿಗುತ್ತದೆಂಬ ಖಾತ್ರಿ ಆಕೆಯದು. ಈಕೆ ತನ್ನ ಅಜ್ಜಿ ಮಂಜುಳೆಯ ಆತ್ಮ ವೃತ್ತಾಂತ ಓದಿಯೂ ಕೂಡ ಹೇಳುವ ಮಾತೆಂದರೆ ಇದನ್ನೆಲ್ಲಾ ಓದಿದ ಮೇಲೆ ಆ ಧೈರ್ಯ ಕರಗುವಂತಿದೆ. ಒಟ್ಟಾರೆ ಮರ್ಯಾದೆಯಿಂದ ಬದುಕಬೇಕು ಅಷ್ಟೇ. ಶಾರಿ ತನ್ನ ಮಗಳನ್ನು ಒಂದು ಆರ್ಥಿಕ ಸಂಪನ್ಮೂಲ ಅಂತ ತಿಳಿಯಬೇಕಾದ ಅನಿವಾರ್ಯತೆ ಇದ್ದಾಗಲೂ ಚಂದ್ರಿಯ ವಿದ್ಯೆಯ ಅರಿವು ಹೊಸ ಬದುಕಿನತ್ತ ಮುಖ ತಿರುಗಿಸಲು ಸಹಾಯ ಮಾಡುತ್ತದೆ. ಕಾರಂತರು ಕಾದಂಬರಿಯಲ್ಲಿ ಮೈಮನಗಳ ಕುರಿತಂತೆ ಸುಳಿಗಳೆಬ್ಬಿಸಿದರೂ ನಂತರ ತಮ್ಮ ಸ್ಪಷ್ಟ ನಿಲುವುಗಳನ್ನು ಚಂದ್ರಿಯ ಮೂಲಕ ವ್ಯಸಿಸಿ ಯಶಸ್ವಿಯಾಗಿದ್ದಾರೆ.

ನಾನು ಓದಿದ ಬೆಟ್ಟದ ಜೀವ

ಬಿ. ಮೈತ್ರಿ, ಪ್ರಥಮ ಪಿ.ಯು.ಸಿ., ಜೈನ್ ಕಾಲೇಜು

ಸಾಹಿತ್ಯ ಕೃತಿಯೊಂದನ್ನು ನಾನು ಓದುವುದು ಮುಖ್ಯವಾಗಿ ಎರಡು ಕಾರಣಕ್ಕೆ. ನನ್ನ ಬದುಕಿನ ಮಿತಿಯಲ್ಲಿ ಸಿಕ್ಕಿಲ್ಲದ ಅನುಭವಗಳ ಪರಿಚಯ ಮಾಡಿಕೊಳ್ಳಬಹುದು ಎನ್ನುವುದು ಒಂದು ಕಾರಣವಾದರೆ, ಮತ್ತೊಂದು ಆ ಸಾಹಿತ್ಯ ಕೃತಿಯು ವ್ಯಕ್ತಪಡಿಸುವ ವಿಚಾರ ಚಿಂತನೆಗಳ ಮೂಲಕ ನನ್ನ ವೈಚಾರಿಕ ಜಗತ್ತನ್ನು ವಿಸ್ತರಿಸಿಕೊಳ್ಳುವ ಆಸೆಯಿಂದ. ಈ ಬುದ್ಧಿ ಭಾವಗಳೆರಡರ ಸಂಗಮವನ್ನು ಸಾರ್ಥಕವಾಗಿ ಸಾಧ್ಯವಾಗಿಸುವುದು ಒಳ್ಳೆಯ ಸಾಹಿತ್ಯ ಕೃತಿಗಳು ಮಾತ್ರ. ಶಿವರಾಮ ಕಾರಂತರ ಬೆಟ್ಟದ ಜೀವ ಕಾದಂಬರಿಯು ಇಂತಹ ಸಾಧ್ಯತೆಯನ್ನು ವ್ಯಕ್ತ ಪಡಿಸುತ್ತದೆ ಎನ್ನುವ ಕಾರಣಕ್ಕಾಗಿಯೇ ಅದನ್ನು ಇಲ್ಲಿ ಚರ್ಚೆಗೆ ಆಯ್ಕೆ ಮಾಡಿಕೊಂಡಿದ್ದೇನೆ. ಕಾಡಿನಲ್ಲಿ ದಾರಿತಪ್ಪಿ ಹೊರಟ ಅಲೆಮಾರಿ ವ್ಯಕ್ತಿಯೊಬ್ಬ ಅನಿವಾರ್ಯವಾಗಿ ಆಶ್ರಯಕ್ಕಾಗಿ ಕೆಳಬೈಲು ಗೋಪಾಲಯ್ಯನವರ ಮನೆ ತಲುಪುತ್ತಾನೆ. ಅವರ ಆತಿಥ್ಯ, ಪ್ರೀತಿ, ವಿಶ್ವಾಸಗಳಿಗೆ ಮಣಿದು ಒಂದೆರಡು ವಾರ ಅವರ ಮನೆಯಲ್ಲಿಯೇ ಉಳಿದು ಅವರ ಸುಖದುಃಖಗಳಲ್ಲಿ ಭಾಗಿಯಾಗುವುದು ಈ ಕೃತಿಯ ಸ್ಥೂಲವಾದ ಕಥಾ ಹಂದರ. ದಾರಿ ತಪ್ಪಿ ಹೊರಟ ವ್ಯಕ್ತಿ ಶಿವರಾಮಯ್ಯನ ಚಿಂತನೆ, ಅನುಭವದ ದೃಷ್ಟಿಕೋನದ ಮೂಲಕ ಬೆಟ್ಟದ ಜೀವವಾದ ಗೋಪಾಲಯ್ಯನ ಪರಿಸರ, ವ್ಯಕ್ತಿತ್ವ ದರ್ಶನಗಳ ಅವಲೋಕನವಾಗುವುದರಲ್ಲಿ ಕಾದಂಬರಿಯು ಬೆಳೆಯುತ್ತದೆ. ಶಿವರಾಮಯ್ಯ ಮತ್ತು ಗೋಪಾಲಯ್ಯ ಇಬ್ಬರೂ ಮುಖ್ಯ ಪಾತ್ರಗಳಾಗಿ ಕಾದಂಬರಿಯನ್ನು ಬೆಳೆಸುತ್ತಾರೆ.

ಬಯಲು ಸೀಮೆಯಲ್ಲಿ ಅದರಲ್ಲೂ ಬೆಂಗಳೂರಿನಂತಹ ಪಟ್ಟಣದಲ್ಲಿ ಹುಟ್ಟಿ ಬೆಳೆದ ನನಗೆ ಈ ಕಾದಂಬರಿಯ ಪುಟ ಪುಟದ ವಿವರವೂ ಅಚ್ಚರಿ ಹುಟ್ಟಿಸುವಂತಹುದೇ. ಕಾಡಿನ ಒಂದೊಂದು ಚಿಕ್ಕ ವರ್ಣನೆಯು ಪ್ರಕೃತಿಯ ವೈವಿಧ್ಯಮಯತೆಯನ್ನು, ಅಗಾಧತೆಯನ್ನು ಮತ್ತು ಸೊಬಗನ್ನು ಚಿತ್ರಿಸುತ್ತಾ ನಮ್ಮನ್ನು ಬೇರೆಯೇ ಒಂದು ಲೋಕಕ್ಕೆ ಕೊಂಡೊಯ್ಯುತ್ತದೆ. ಇತ್ತೀಚೆಗಷ್ಟೇ ನನಗೆ ಹಿಮಾಚಲ ಮತ್ತು ಗಡವಾಲ ಹಿಮಾಲಯದತ್ತ ಚಾರಣ ಮಾಡುವ ಅವಕಾಶ ಸಿಕ್ಕಿತು. ಆ ಚಾರಣದಲ್ಲಿ ಬೃಹತ್ ಗಿರಿ ಶ್ರೇಣಿಗಳು ಹರಿಯುವ ನದಿ, ಧುಮ್ಮಿಕ್ಕುವ ಜಲಪಾತ, ಹೇರಳವಾದ ನೀರ್ಗಲ್ಲುಗಳು ಮತ್ತು ಅಪಾರ ಹಸಿರನ್ನು ಕಂಡಿದ್ದ ನನಗೆ ಆ ಹಿನ್ನಲೆಯಿಂದ ಬೆಟ್ಟದ ಜೀವ ಕಾದಂಬರಿಯನ್ನು ಓದಿದಾಗ ಇಲ್ಲಿನ ಪ್ರತಿಯೊಂದು ವಿವರವೂ ಕಣ್ಣಿಗೆ ಕಟ್ಟಿದಂಥ ಅನುಭವವಾಗಿ ಸಂಭ್ರಮ ಪಟ್ಟೆ. ಅಷ್ಟೇಯೇ ಅಲ್ಲ, ಹಿಮಾಲಯದ ಭವ್ಯತೆಯ ಮುಂದೆ ನಾವೆಷ್ಟು ಸಣ್ಣವರು ಎಂಬ ನಮ್ರತಾಭಾವ ನಮ್ಮಲ್ಲಿ ಮೂಡುತ್ತದೆ.

ಅಂತಹುದೇ ಭಾವನೆಯನ್ನು ವ್ಯಕ್ತಪಡಿಸುವ ಈ ಕಾದಂಬರಿಯ ಸಾಲುಗಳ ನನಗೆ ತುಂಬಾ ಹಿಡಿಸಿದವು. "ಈ ದೆವ್ವನ ಹಾಗಿರುವ ಮರಗಳು, ಅವುಗಳನ್ನು ನುಂಗುವಂತೆ ಕಾಣುವ ಈ ಬೆಟ್ಟಗಳು– ಇವನ್ನೆಲ್ಲ ನೋಡಿದರೆ ಮನುಷ್ಯ ಎಷ್ಟು ಸಣ್ಣ ಪ್ರಾಣಿಯಾಗಿ ಕಾಣುತ್ತಾನೆ ಅಲ್ಲ?. ಬೆಟ್ಟದ ಮೇಲೆ ಓಡಾಡುವ ಆನೆ ಸಹ ಇರುವೆಯಂತೆಯೆ ಅಲ್ಲವೇ? ನನಗೆ ಈ ಸುತ್ತಲೂ ನೋಡಿ, ನೋಡಿ, ನನ್ನ ಕಿರಿತನದ ನೆನಪು ಬರುತ್ತದೆ. ಮನುಷ್ಯ ಎಷ್ಟರವನು ಎನಿಸುತ್ತದೆ. ಇಲ್ಲೇ ಹೀಗಿದ್ದರೆ ಹಿಮಾಲಯ ಹೇಗಿರಬೇಡ! ನಿಮ್ಮ ಕುಮಾರ ಪರ್ವತ ಏನು ಐದು ಸಾವಿರ ಅಡಿ ಎತ್ತರ ಇದೆಯೆಂದು ಕಾಣುತ್ತದೆ. ಅದು ಐದು ಸಾವಿರವಾದರೆ, ನಾವು ಐದಡಿ ಚಿಲ್ಲರೆ.ಹಿಮಾಲಯ ಇರುವುದು ಇಪ್ಪತ್ತೊಂಬತ್ತು ಸಾವಿರ . ಅದರೆದುರು ಮನುಷ್ಯನಿಗೆ ಇರುವೆಯ ಸ್ಥಾನವೂ ಸಿಗಲಾರದು" (ಪುಟ 94 ಮತ್ತು 95).

ಕಾದಂಬರಿಯ ಓಟದೊಂದಿಗೆ ಅದರ ಕೇಂದ್ರ ಪಾತ್ರವಾದ ಗೋಪಾಲಯ್ಯನ ವ್ಯಕ್ತಿತ್ವದ ಪರಿಚಯವೂ ಪ್ರಕಟಗೊಳ್ಳುತ್ತಾ ಹೋಗುತ್ತದೆ. ಈ ವ್ಯಕ್ತಿತ್ವ ರೂಪುಗೊಂಡ ಬಗೆಯನ್ನು ಚಿತ್ರಿಸುವ ಮುನ್ನ ಕಾದಂಬರಿಯ ಸನ್ನಿವೇಶ ನಿರ್ಮಾಣ ಮಾಡಲು ಕಾಡಿನ ಸಿರಿ ವೈಭವವನ್ನು ಜೊತೆ ಜೊತೆಯಲ್ಲಿಯೇ ಚಿತ್ರಿಸಲು ಕಾರಂತರು ತೊಡಗುತ್ತಾರೆ. ಬೆಟ್ಟದಷ್ಟೇ ಅಗಾಧ ವ್ಯಕ್ತಿತ್ವವನ್ನು ಹೊಂದಿರುವ ಹಿರಿಯ ಜೀವ ಗೋಪಾಲಯ್ಯನ ಮನೆಗೆ ಬಂದ ಶಿವರಾಮಯ್ಯನಿಗೆ ಅವರ ಮನೆಯಲ್ಲಿದ್ದಷ್ಟು ದಿನವೂ ಅವರ ವ್ಯಕ್ತಿತ್ವದ ವಿವಿಧ ಮುಖಗಳ ಪರಿಚಯವಾಗುತ್ತಾ ಹೋಗುವುದರಲ್ಲೇ ಕಾದಂಬರಿಯ ಬೆಳವಣಿಗೆಯಿದೆ.

ಗೋಪಾಲಯ್ಯನ ಬದುಕಿನಲ್ಲಿ ದುಡಿಮೆ ಒಂದು ಮೌಲ್ಯ. ಅರವತ್ತರ ವಯಸ್ಸಿನಲ್ಲೂ ವಿಶ್ರಾಂತಿ ಎನ್ನುವ ಪದಕ್ಕೆ ಆಸ್ಪದವಿಲ್ಲದೆ ಅಡಿಕೆ ತೋಟದಲ್ಲಿ, ಮನೆಗೆಲಸದಲ್ಲಿ ತೊಡಗಿಸಿಕೊಳ್ಳುವಂತೆ ಕೇವಲ ದುಡಿಮೆಗಾರನಾಗಿ ಮಾತ್ರ ಚಿತ್ರವಾಗಿಲ್ಲ. ಅವನೊಬ್ಬ ಅಪರೂಪದ ಸಾಹಸಿ. ಅಪೂರ್ವ ಸಾಧಕ. ಮಲೆನಾಡಿನ ದಟ್ಟ ಕಾಡುಗಳನ್ನು ಕಡಿದು ವ್ಯವಸಾಯ ಯೋಗ್ಯ ಮಾಡಿದ ಹರಿವ ನೀರಿಗೆ ತಾನೆ ಕೃತಕ ನೀರ್ಕಟ್ಟೆ ಮಾಡಿ ಬೇಲಿ ಹಾಕಿ ಯಾರೂ ಜನ ಹೋಗದ ಜಾಗವನ್ನು ವಾಸ ಯೋಗ್ಯಮಾಡಿದ ಶ್ರಮಿಕ. ಇವರ ಸಾಹಸ ಹಟ ಮನುಷ್ಯ ಮಾತ್ರದವರಿಗೆ ಬರಲಾರದು (ಪುಟ 42). ಎನ್ನುವಷ್ಟು ಸಾಹಸಿ.

ಮನುಷ್ಯ ಸಂಘ ಜೀವಿ. ಅವನು ಪೇಟೆಯಲ್ಲಿರಲಿ, ಹಳ್ಳಿಯಲ್ಲಿರಲಿ, ಅವನ ಸುಖ ದುಃಖಗಳಿಗೆ ಪಾಲುಗಾರರು ಬೇಕೇ ಬೇಕು. ತನ್ನ ದುಃಖವನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳುವುದರಿಂದ ಮನಸ್ಸು ಹಗುರವಾಗುತ್ತದೆ. ಅದನ್ನು ಕೇಳಿದವನಿಗೂ ಲಾಭವುಂಟು ಇತರರ ಆಪತ್ತನ್ನು ತಿಳಿಯುವುದರಿಂದ ಬದುಕಿನ ನಿಜತ್ವ ತಿಳಿಯುತ್ತದೆ. ಇಡೀ ಕಾದಂಬರಿವ್ಯಕ್ತ ಪಡಿಸುವುದು ಇದೇ ದರ್ಶನವನ್ನು. ಗೋಪಾಲಯ್ಯನ ಕುಟುಂಬದ ಕಷ್ಟಗಳು. ಮಕ್ಕಳನ್ನು ಕಳೆದುಕೊಂಡ ದುಃಖ, ಅವರ ಸಾಕು ಮಗ ನಾರಾಯಣಯ್ಯನ ಸಾಂಸಾರಿಕ ತಾಪತ್ರಯಗಳು ಇವೆಲ್ಲವುಗಳ ಪರಿಚಯ ಮಾಡಿಕೊಡುತ್ತಲೇ, ಅವಕ್ಕೆ ಪ್ರತಿಕ್ರಿಯಿಸುತ್ತಲೇ ಕಥೆಯ ಮುಖ್ಯ ಪಾತ್ರವಾದ ಶಿವರಾಮಯ್ಯನ ಅನುಭವದ ಲೋಕ ವಿಸ್ತರಿಸುತ್ತದೆ. ಹಾಗೆಯೇ ಓದುಗರ ಅನುಭವ ಲೋಕವೂ ಹಿಗ್ಗುತ್ತದೆ. ಮನುಷ್ಯರ ಸಂಪರ್ಕವಿಲ್ಲದೆ ಕಾಡಿನ ಮೂಲೆಯೊಂದರಲ್ಲಿ ವಾಸಿಸುವ ಗೋಪಾಲಯ್ಯ ಶಂಕರಮ್ಮನಿಗೆ ನರಪ್ರಾಣಿಯೊಂದು ಅವರಲ್ಲಿಗೆ ಹೋಗುವಾಗ ಆಗುವ ಸಂತೋಷ ಊಹಿಸತಕ್ಕದ್ದೇ. ಮನೆಗೆ ಬಂದ ಅತಿಥಿಯನ್ನು ಮುಕ್ತ ಮನಸ್ಸಿನಿಂದ ಆದರಿಸುತ್ತಾರೆ. ಈ ಆದರ, ಆತಿಥ್ಯ ತನಗೊಬ್ಬಗೆ ಮಾತ್ರವಾಗಿರದೇ ಆ ಮುದಿಜೀವಿಗಳ ಬದುಕಿನಲ್ಲಿ ಬರುವ ಪ್ರತಿಯೊಬ್ಬ ಜೀವಿಗೂ ಮೀಸಲು ಎಂಬ ಅಂಶ ತಿಳಿಯುತ್ತದೆ. ಅನಾಥನೊಬ್ಬನನ್ನು ಕರೆತಂದು

ತೋಟ ಗದ್ದೆ, ಮಾಡಿಕೊಟ್ಟು ಮದುವೆ ಮಾಡಿ, ಅವರನ್ನು ಸ್ವಂತ ಮಕ್ಕಳಂತೆ ಪ್ರೀತಿ ತೋರುವ ಗೋಪಾಲಯ್ಯ ದಂಪತಿಗಳ ಹೃದಯ ವೈಶಾಲ್ಯತೆ ಇಡೀ ಕಾದಂಬರಿಯುದ್ದಕ್ಕೂ ಹರಡಿಕೊಂಡಿದೆ.

ಗೋಪಾಲಯ್ಯ ಮತ್ತು ಶಿವರಾಮಯ್ಯನವರ ನಡುವಿನ ಮಾತುಕತೆ, ಚರ್ಚೆಯಲ್ಲಿ ಹುಟ್ಟುವ ವಿಚಾರಗಳು ನಗರ ಮತ್ತು ಗ್ರಾಮೀಣ ಜನಜೀವನದ ಅಗತ್ಯತೆ ಮತ್ತು ವಿಶಿಷ್ಟತೆಯನ್ನು ನಮ್ಮ ಮುಂದೆ ತೆರೆದಿಡುತ್ತದೆ. "ಪೇಟೆಯಲ್ಲಿ ಕಾಸಿಲ್ಲದೇ ಯಾವುದೂ ಆಗುವುದಿಲ್ಲ. ಅಲ್ಲಿ ದುಡ್ಡೇ ದೊಡ್ಡಪ್ಪ. ಆದರೆ ಹಳ್ಳಿಯವರಿಗೆ ಹಣವು ಬೇಡವೆಂದಲ್ಲ, ರೂಪಾಯಿ ನೋಟು ಕಹಿಕುಕ್ಕುತ್ತದೆಂದಲ್ಲ. ಆದರೆ ಎಷ್ಟೋ ಸಂಗತಿಗಳಿಲ್ಲಿ ದುಡ್ಡಿಲ್ಲದೇಯೂ ನಡೆಯುತ್ತದೆ. ಇಲ್ಲಿ ಬೇಕಾದ ಒಡವೆಗಳನೆಲ್ಲ ನಾವೇ ಬೆಳೆಯಿಸುತ್ತೇವೆ. ಊರಲ್ಲಿ ನಮಗೆ ಹಣದ ಅವಶ್ಯಕತೆಯಿರುವುದಿಲ್ಲ. ಪೇಟೆಯ ಹಂಗೂ ಕಡಿಮೆ." (ಪುಟ 21) ಎನ್ನುವ ಗೋಪಾಲಯ್ಯನವರ ಮಾತುಗಳು ಸರಳ, ಸ್ವತಂತ್ರ ಜೀವನದ ಸ್ವರೂಪವನ್ನು ನಮ್ಮ ಕಣ್ಣ ಮುಂದೆ ತೆರೆದಿಡುತ್ತದೆ. ಅದೇ ಜೀವ ನಾಗರೀಕರಣಗೊಂಡಾಗ ಎಂತಹ ಸಂಕೀರ್ಣವಾಗಬಹುದು ಎಂಬುದನ್ನು ನಾವು ಊಹಿಸಿಕೊಳ್ಳಬಹುದು.

ಈ ಇಡೀ ಕಾದಂಬರಿಯ ಹರಹು ಮತ್ತು ದ್ರವ್ಯ ಎಷ್ಟೊಂದು ಪ್ರಕೃತಿಮಯವಾಗಿದೆಯೆಂದರೆ ಪ್ರಕೃತಿಯ ಪ್ರತಿಯೊಂದು ತುಣುಕಿನಲ್ಲೂ ಮನುಷ್ಯ ಪ್ರಕೃತಿಯನ್ನು ತಳಕು ಹಾಕಿ ಅಸ್ವಾದಿಸುವಂತೆ ಮಾಡುತ್ತದೆ. ಪಟ್ಟಣದ ಶಿವರಾಮಯ್ಯನಿಗೆ ಕೆಳಬೈಲಿನ ಸುತ್ತಮುತ್ತಲಿನ ಕಾಡುಗಳನ್ನು ನೋಡುತ್ತಾ ಮನಸ್ಸಿನಲ್ಲಿ ಹುಟ್ಟುವ ಇಂತಹ ವಿಚಾರಗಳು ಮತ್ತೆ ಮತ್ತೆ ಓದಬೇಕೆನಿಸುತ್ತವೆ. –"ಮಾನವನ ಎಟುಕು, ಹಿಡಿತಗಳನ್ನು ಮೀರಿ ನಿಂತಂತೆ ಆ ಊರಿನ ಬೆಟ್ಟ ಹಳ್ಳಗಳು ನನಗೆ ಕಾಣಿಸುತ್ತಿದ್ದವು. ಪ್ರತಿಯೊಂದು ಹೊಳೆಯೂ ಹಳ್ಳವೂ ಕೈಗೆ ಸಿಕ್ಕದೆ ಓಡುವ ಮಿಂಚುಬಳ್ಳಿಯಾಗಿತ್ತು. ತಿಳಿಯಾಗಿ ನಕ್ಕು ಹರಿಯುವ ನೀರು, ಎಂಥ ಗಂಡು ಶಿಲೆಯೆನ್ನೂ ಕೊರೆದು ಕಟೆದು ಉರುಟು ಮಾಡುವ ಶಕ್ತಿಯುಳ್ಳದ್ದಾಗಿತ್ತು. ಹೊಸತಾಗಿ ಹುಟ್ಟಿದ ಅಬ್ಬಿಯ ನೀರು ಬಾಳಿಗಿಂತ ಹರಿತವಾಗಿತ್ತು. ಆ ನಾಡಿನ ಕನ್ಯೆಯರೇ ಹೀಗಾದ ಮೇಲೆ ಅಲ್ಲಿಯ ಗಂಡುಗಣ ಹೇಗಿರಬೇಡ?. ಪ್ರತಿಯೊಂದು ಬೆಟ್ಟವೂ ದೆವ್ವದಂತೆ ತಲೆಯೆತ್ತಿನಿಂತಿದೆ. ಐದಡಿ ಗಾತ್ರದ ಮನುಷ್ಯ ಜೀವನವನ್ನು ಇರುವೆಯೆಂದು ತಿಳಿದು ಅಣಕಿಸುತ್ತದೆ. ಅಂಥ ಬೆಟ್ಟಗಳ ಎಡೆಯಲ್ಲಿ ಈ ಮನುಷ್ಯ ತನ್ನ ಆಳ್ತನವನ್ನು ಮೆರೆಯಿಸಲು ನಿಂತರೆ ಅವನಿಗೆ ಜಯವೆಲ್ಲಿಯದು? ಅವನ ಪರಮ ಕೃತಿಯಾದ ಅಡಿಕೆಯ ಮರ ಕೂಡ ಕಣಿವೆಯ ಪಾಲಿಗೆ ಪುಟ್ಟ ಹುಲ್ಲಿನ ಗಿಡವಾಗಿದೆ" (ಪುಟ 33). ಶಿವರಾಮ ಕಾರಂತರ ಆರಂಭದ ಕಾದಂಬರಿಗಳಲ್ಲಿ ಒಂದಾದ ಬೆಟ್ಟದ ಜೀವ ಸುಮಾರು ಆರೇಳು ದಶಕಗಳ ಹಿಂದೆ ರಚಿತವಾದ ಕಾದಂಬರಿ. ಆ ಕಾಲದ ನಗರ ಸಂವೇದನೆಯನ್ನು ಪ್ರತಿನಿಧಿಸುವ ಪಾತ್ರವನ್ನು ಮತ್ತು ಗ್ರಾಮೀಣ ಸಂಸ್ಕೃತಿಯ ವಿವಿಧ ಎಳೆಗಳನ್ನು ಮುಖಮುಖಿಯಾಗಿಟ್ಟು ಬದುಕಿನ ಮಹತ್ವವೇನೆಂಬುದನ್ನು ಕಾರಂತರು ಈ ಕಾದಂಬರಿಯಲ್ಲಿ ಶೋಧಿಸ ಹೊರಟಿದ್ದಾರೆ. ಆಗಂತುಕನಾಗಿ ಹೊರಗಿನ ಪ್ರಜ್ಞೆಯಾಗಿ ಬರುವ ಶಿವರಾಮಯ್ಯ, ಬೆಟ್ಟದ ಜೀವಿಗಳಿಗೆಲ್ಲಾ ಆತ್ಮೀಯನಾಗಿ ಆ ಪರಿಸರದ ಭಾಗವಾಗುತ್ತಾನೆ. ಅವರೆಲ್ಲ ಕ್ರಿಯೆಗಳಿಗೆ ಸಾಕ್ಷಿಯಾಗುತ್ತಾನೆ. ಅಷ್ಟೆ ಅಲ್ಲ ಕಾದಂಬರಿಯ ಕೊನೆಯವರೆಗೂ ನಿರಂತರತೆಯನ್ನು ಕಾಯ್ದುಕೊಂಡು, ಅದರ ಒಂದು ಮುಖ್ಯ ತಿರುವಿಗೆ ಕಾರಣನಾಗುತ್ತಾನೆ. ಹೀಗೆ ಕಾದಂಬರಿಯ ತಂತ್ರ ವೈಚಾರಿಕತೆ ಮತ್ತು ಅದು ಕೊಡುವ ಅನುಭವದ ಲೋಕವೆಲ್ಲದರ ದೃಷ್ಟಿಯಿಂದಲೂ ನಾನು ಓದಿದ ಕಾದಂಬರಿಗಳಲ್ಲಿ ಬೆಟ್ಟದಜೀವ ನಿಸ್ಸಂಶಯವಾಗಿ ನನಗೆ ಮುಖ್ಯವಾದುದು.

ಸಂಕಿರಣ



ಇದೊಂದು ಹೊಸಾ ಅಂಕಣ. ನಮ್ಮಲ್ಲಿ ಹೆಚ್ಚು ಚರ್ಚೆಯಾಗದೇ ಉಳಿದಿರುವ ಗಮನಾರ್ಹ ಲೇಖಕರನ್ನು ಕುರಿತು ಇಲ್ಲಿ ಚರ್ಚಿಸಲಾಗುತ್ತದೆ. ಲೇಖಕನೊಬ್ಬನ ಕೃತಿಗಳನ್ನು ಕುರಿತು ಬಿಡಿಯಾಗಿ ಮತ್ತು ಇಡಿಯಾಗಿ ಪ್ರತಿಕ್ರಿಯೆಗಳನ್ನು ದಾಖಲಿಸಲಾಗುತ್ತದೆ.


ಸಂಕಿರಣದ ಮೊತ್ತಮೊದಲ ಪ್ರಯೋಗವಾಗಿ ಕವಿ ಆನಂದ ಝುಂಜರವಾಡರ ಕಾವ್ಯವನ್ನು ಕುರಿತು ಚರ್ಚಿಸಲಾಗಿದೆ. 1952 ರಲ್ಲಿ ಬಾಗಿಲಕೋಟೆಯಲ್ಲಿ ಜನಿಸಿದ ಆನಂದ ಝುಂಜರವಾಡರು ಈವರೆಗೂ ಐದು ಕವಿತಾ ಸಂಗ್ರಹಗಳನ್ನು ಹೊರತಂದಿದ್ದಾರೆ. ಪದಗಳ ಪರಿಧಿಯಲ್ಲಿ (1974) ಖನನೋದ್ಯಮ (1980) ಎಲ್ಲಿದ್ದಾನೆ ಮನುಷ್ಯ (1984) ಶಬ್ದ ಪ್ರಸಂಗ (1997) ದಿಂಡಿ ಮತ್ತು ದಾಂಡಿ (2001) 'ಜೊತೆಗೆ ಸರ್ಪ ಮೂಲದ ಸರೋವರ' ಎಂಬ ನಾಟಕ ರಚನೆಯಲ್ಲಿ ಸದ್ಯಕ್ಕೆ ತೊಡಗಿಸಿಕೊಂಡಿದ್ದಾರೆ. 'ಹಕ್ಕಿಯ ಹೆಗಲೇರಿ' ಎಂಬ ಬಾಗಿಲಕೋಟೆಯಲ್ಲಿ ಬದುಕಿದ್ದ ಪ್ರಸನ್ನ ವೆಂಕಟದಾಸರ ಜೀವನ ಕುರಿತ ನಾಟಕವನ್ನು ರಚಿಸಿದ್ದಾರೆ. ಅದು ಕೆಲವಾರು ಪ್ರಯೋಗಗಳನ್ನು ಕಂಡಿದೆ. ಮುದ್ದಣ ಸ್ಮಾರಕ ಪ್ರಶಸ್ತಿ, ಉಗ್ರಾಣ ಪ್ರಶಸ್ತಿಗಳನ್ನು ಅವರು ಪಡೆದಿದ್ದಾರೆ.

ವೃತ್ತಿಯಲ್ಲಿ ಮುಧೋಳದ ಕೋರ್ಟಿನಲ್ಲಿ ಗುಮಾಸ್ತರಾಗಿರುವ ಆನಂದರು ತೀವ್ರವಾದ ಬಡತನ ಮತ್ತು ಸಂಕಷ್ಟಗಳಲ್ಲಿ ಬದುಕಿಯೂ ಬದುಕಿನ ಬಗ್ಗೆ ಅದರ ವಿಸ್ಮಯಗಳ ಬಗ್ಗೆ ಪ್ರೀತಿ ಇಟ್ಟುಕೊಂಡವರು. ಹೋಟೆಲ್ ಕಾರ್ಮಿಕನಾಗಿ ಲೋಕೋಪಯೋಗಿ ಇಲಾಖೆಯ ಗ್ಯಾಂಗಮೆನ್ ಆಗಿ ಕೋರ್ಟಿನ ಅಮೀನನಾಗಿ ದುಡಿದ ಅವರು ಶ್ರಮದ ಬದುಕನ್ನು ಅದರ ನಿಷ್ಠುರತೆಯನ್ನು ಅನುಭವಿಸಿಯೂ ಕಹಿಯಾಗದೇ ಕವಿಯಾದವರು. ಕನ್ನಡ ಮರಾಠಿ ಸಾಂಸ್ಕೃತಿಕ ಜಗತ್ತಿನ ಸಂಪರ್ಕ-ಸಹವಾಸಗಳ ಜೊತೆಗೆ ಸಂಗೀತದ ಬಗೆಯೂ ಅಪಾರವಾದ ಒಲವು ಉಳ್ಳವರು. ತಮ್ಮ ಮುಂದಿನ ಕವನ ಸಂಕಲನಕ್ಕೆ 'ತರಾನ' ಎಂಬ ಹೆಸರಿಡುವ ಆಸೆ ಹೊತ್ತ ಆನಂದ ಝುಂಜರವಾಡರ ಕಾವ್ಯಾಲೋಕನ ಇಲ್ಲಿದೆ.



ಶೀತಲ ಸಮರದ ಪ್ರತಿಮಾಲೋಕ


– ಜಿ.ಬಿ. ಹರೀಶ್



ಆನಂದ ಝುಂಜರವಾಡ ಅಡಿಗರ ನಂತರದಲ್ಲಿ ಮರೆಯದೆ ಅಧ್ಯಯನ ಮಾಡಬೇಕಾದ ಮುಖ್ಯ ಕವಿ. ಸದ್ಯಕ್ಕೆ ಇಲ್ಲಿ ಅವರ ಮೊದಲ ಮೂರು ಕವನ ಸಂಕಲನಗಳ –1. ಪದಗಳ ಪರಿಧಿಯಲ್ಲಿ 2. ಖನನೋದ್ಯಮ. 3.ಎಲ್ಲಿದ್ದಾನೆ ಮನುಷ್ಯ ?– ಸ್ಥೂಲವಾದ ಅಭ್ಯಾಸಮಾಡಲಾಗಿದೆ. ಆನಂದರು ಬಹಳ ಚಿಂತನಶೀಲರು. ಬಡತನದಲ್ಲಿ ಬೆಳೆದು ಅದರ ಮೂಲಕ ಬದುಕಿನ ಸತ್ವ ಹೀರಿಕೊಂಡವರು ಎಂಬುದು ಅವರನ್ನು ನೋಡಿ, ಮಾತನಾಡಿಸಿದವರಿಗೆ ತಿಳಿಯುತ್ತದೆ. ಆದರೆ ಈಗಲೂ ಅವರನ್ನು ಮಾತನಾಡಿಸಿದಾಗ– ಅವರೆಷ್ಟು ತೀವ್ರವಾಗಿ ಕಾವ್ಯ ಕುರಿತು ಚಿಂತಿಸುತ್ತಲೇ ಇರುತ್ತಾರೆ ಎಂಬುದು ಸಹೃದಯರಿಗೆ ತಿಳಿಯಲಾರದೇ ಹೋಗುತ್ತದೆ. ಇದಕ್ಕೆ ಸಹೃದಯರಿಗಿಂತ ಆನಂದರೇ ಕಾರಣ. ಕವಿತೆಗಿಂತ ಬದುಕು ದೊಡ್ಡದು ಎಂದು ಅವರ ನಂಬಿಕೆಯಿರುವುದರಿಂದ ಅವರು ಜೀವನದ ವಿವಿಧ ಮುಖಗಳು ಮುಖವಾಡಗಳನ್ನು ಕಳಚಿ ಹಾಕುವಂತೆ ಬರೆಯುತ್ತಾರೆ. ಕಾವ್ಯ ಪ್ರಿಯರೊಡನೆ ಮಾತನಾಡುತ್ತಾರೆ. ಅವರ ಮಾತಿನಲ್ಲಿ ವ್ಯಂಗ್ಯದ ಮೊನಚು, ದಿಗ್ಭ್ರಮೆ ಕಾಣುವಷ್ಟು ಕವಿತೆಯಲ್ಲಿ ಅದು ಹಸಿ ಹಸಿಯಾಗಿ ಇಳಿಯುವುದಿಲ್ಲ. ಇದಕ್ಕೆ ಕವಿತೆಯ ಅಂತರಂಗವೆಂದರೇನು ಎಂಬ ತತ್ವ ಬೋಧೆ ಅವರಿಗಾಗಿರುವುದೇ ಕಾರಣ.



'ಪದಗಳ ಪರಿಧಿಯಲ್ಲಿ' ಕವನಸಂಕಲನದಲ್ಲಿ ಹನ್ನೊಂದು ಕವನಗಳಿವೆ. ಮುಖ್ಯವಾಗಿ ಕವಿಗಿರುವ ಜೀವನ ದರ್ಶನ ನಮ್ಮನ್ನು ಆಕರ್ಷಿಸುತ್ತದೆ.



'ನನ್ನ ಪ್ರೇಮ ನಾಟಕದ' ಹುಡುಗಿಗೆ ಕವನದ ಕೆಲವು ಸಾಲುಗಳು-

"ಉರಿಬಿಸಿಲಲ್ಲಿ ಕಮರುತ್ತ
ಈ
ಅನಂತ ಆಕಾಶದಡಿ ನನ್ನ ಸಂಕುಚಿತ ಸತ್ಯಕ್ಕೆ
ವಿಷಾದಿಸುತ್ತ,
ಇದ್ದ ಆರಡಿ ದೇಹದಲ್ಲೆಲ್ಲಿಡುವೆ ನಿನ್ನೀ ಭಾವಗಳ ?
ಬಿಸಿಯುಸುರುಗಳ ? . . . . . ." (ಪು.7)

" ಬರೆಯುತ್ತ ಹೋದಂತೆ ಭಾಷೆ ಹಸಿಯುತ್ತದೆ
ಭಾವದ ಮೈ ಕೈ ಹರಚಿ ತಣ್ಣಗಿನ ಚಳಿಯಲ್ಲಿ
ಹೆಕ್ಕಳೆಗಟ್ಟಿ ತುರಿಕೆ ಕೆರಳುತ್ತದೆ . . . .." (ಪು. 8)

ಇಲ್ಲಿ ಎರಡನೇ ಉದಾಹರಣೆಯಲ್ಲಿ ಭಾಷೆ ಹಸಿಯುವ ಪ್ರತಿಮೆ ಕೊಡುವ ಸಂತೋಷವನ್ನು ನಂತರದ ಸಾಲುಗಳು ಉಳಿಸಿಕೊಂಡಿದ್ದರೆ ಎಂದು ಸಹೃದಯರ ಮನಸ್ಸು ಹಪಹಪಿಸುತ್ತದೆ. ' ನನ್ನ ಪ್ರೇಮ . . . .' ಕಿಂತಲೂ 'ಒಂದು ಕವನ' ಹೆಚ್ಚು ಸಾವಯವ ರಚನೆ. ಆನಂದರ ಕವಿತೆಗಳಲ್ಲಿ ಹಿಂಸ್ರಕ ಪ್ರತಿಮೆಗಳು ಅನೇಕ ಕಡೆ ಬರುವುದನ್ನು ಹೆಚ್. ಎಸ್. ಆರ್. ಗುರುತಿಸಿದ್ದಾರೆ (ಶಬ್ದ ಪ್ರಸಂಗ, 1997). ಈ ಲಕ್ಷಣ ' ಒಂದು ಕವನ' ದಲ್ಲೇ ಸ್ಫುಟವಾಗಿದೆ:

" ತಿಪ್ಪೆ ಬುರುಜನ್ನೇರಿ ಕಹಳೆ ಮೊಳಗುವ ಕೋಳಿ
ಮೂಡಣದ ಮುಂಚೂಣಿಯಲಿ ಕೆಂಗಿರಣ ಸೈನ್ಯ
ಹಾಳು ಮಣ್ಣಿನ ಭದ್ರ ಕೋಟೆಗೆ ಬಿತ್ತು ಬೆಂಕಿಯ ಗುಂಡು
ಕೈವಶವಾಗಿತ್ತು ನಿರ್ಜನ ಬೀದಿ ನಿರಾಶೆ – " (ಪು. 9).

ಅದೇ ಕವನದಲ್ಲಿ ಬರುವ-
" ಸಹಸ್ರ ಬಾಹುಗಳ ಬೀಸು ತೆಕ್ಕೆಯೊಳಗೇ ಸಿಕ್ಕು ಗೋಳಿಟ್ಟು-
ಜೀಕಿ-ಸುಸ್ತಾದ-ಸೌಮ್ಯ ಹೊಸ ನೋಟ. ರೆಕ್ಕೆ ಕಡಿದ
ನೋವಿನಡಿ ಕ್ರಿಯೆ ಕಳೆದು, ಬರೀ ನರಳುತ್ತಿರುವ
ಭಾಷೆಯ ಜಟಾಯು " (ಪು. 10).

ಭಾಷೆ, ಶಬ್ದ, ಅರ್ಥ, ಕವಿತೆಯ ತತ್ವ ಇವುಗಳು ಮೊದಲಿನಿಂದಲೂ ಆನಂದರ ಕವನಗಳ ಹುಡುಕಾಟದ ವಿಷಯಗಳು. ಇಂದು ಅವರ ಸುಮಾರು 150 ಕವಿತೆಗಳು ಪ್ರಕಟಗೊಂಡಿವೆ. ಅವರ ಪ್ರತಿಭೆಯ ಧಾತುವನ್ನು ಅರಿಯಲು ಅವರದೇ ಸಾಲುಗಳಲ್ಲಿ ವ್ಯಕ್ತವಾಗಿರುವ ಕಾವ್ಯಸತ್ವವನ್ನು ಪೋಣಿಸಿ ಆನಂದಝುಂಜಡವಾಡರ ಕಾವ್ಯ ಮೀಮಾಂಸೆ ರಚಿಸಿಕೊಳ್ಳುವ ಸೌಲಭ್ಯವಂತೂ ಸಹೃದಯರಿಗೆ ಧಾರಾಳವಾಗಿದೆ.

'ಖನನೋದ್ಯಮ' 1980 ರಲ್ಲಿ ಪ್ರಕಟವಾಯಿತು. ಹೊಸದಾಗಿ ಕವನ ಸಂಕಲನ ಪ್ರಕಟಿಸಿದವರು ತಮ್ಮ ಕವಿತೆಯ ಸತ್ವವನ್ನು, ಆಯ್ಕೆಯನ್ನು ಸಮರ್ಥಿಸಿಕೊಳ್ಳುವ ಸೂಕ್ಷ್ಮ ಒತ್ತಡಕ್ಕೆ ಸಿಲುಕುವರು ಎಂಬುದಕ್ಕೆ ಬೇಂದ್ರೆಯವರ 'ಗರಿ' ಯಿಂದ ನಮ್ಮ ಕಾಲದ ಕವಿ ಆನಂದರ 'ಖನನೋದ್ಯಮ' ದ ತನಕ ಸಾಕಷ್ಟು

ಉದಾಹರಣೆಗಳಿವೆ: " ಮುಖ್ಯವಾಗಿ ನನಗೂ ಬದುಕಿದೆ, ಬದುಕಿಗೆ ನೋವಿದೆ, ನೋವಿಗೆ ಮಿಡಿಯುವ ನನ್ನದೇ ಆದ ಪ್ರಾಣವಿದೆ. ಪ್ರಾಣಕ್ಕೆ ಉಸಿರಿರುವ ತನಕ ಹೋರಾಡುವ ಆಶೆಯಿದೆ. ಈ ಆಶೆಯ ದೀಪ, ಪ್ರಸ್ತುತದ ಪ್ರಚಂಡ ಬಿರುಗಾಳಿಯಲ್ಲಿ ಹೊಯ್ದಾಡಿ, ಮೂಡಿಸಿದ ನೂರೆಂಟು ನೆರಳಿನ ವಿನ್ಯಾಸಗಳಾಗಿ ಈ ಕವಿತೆಗಳ ಮಂಡನೆ ಇದೆ ". ಇಲ್ಲಿ ಆನಂದರ ಒತ್ತಡಗಳನ್ನು ಬಿಡಿಸಿ ಹೇಳಬೇಕಿಲ್ಲ. ಹೇಳಬೇಕಾದ ಸಂತೋಷದ ಸಂಗತಿ, ಈ ಕವನ ಸಂಕಲನಕ್ಕೆ ಹಸ್ತ ಪ್ರತಿಯಲ್ಲಿರುವಾಗಲೇ 'ಕವಿ ಮುದ್ದಣ್ಣ ಸ್ಮಾರಕ ಕಾವ್ಯ ಬಹುಮಾನ' ದೊರೆಯಿತೆಂಬುದು. ಜನ್ಮದಿನ, ನಡುರಾತ್ರಿ, ಬಡತನ, ಕಠೋರ ವಾಸ್ತವತೆ ಇವೆಲ್ಲಾ ಈ ಸಂಕಲನದ ವಸ್ತುಗಳು. ಹಿಂದಿನ ಸಂಕಲನದಲ್ಲಿ ಕಾಣಿಸದ ಕಥನಶೈಲಿಯ ಕವನ ('ಹೊಸದಂಪತಿಗಳಿಗೆ', ' ಬದುಕು ಮತ್ತು ಕಲೆ') ಮತ್ತು ನಾಟಕೀಯತೆ (' ಮಧ್ಯರಾತ್ರಿಯ ಮಾತುಗಳು') ('ಒಂದು ರಾತ್ರಿಯ ಕೆಟ್ಟ ನೆನಪು') ಖನನೋದ್ಯಮದಲ್ಲಿ ನಿಧಾನವಾಗಿ ಹೆಪ್ಪುಗಟ್ಟತೊಡಗಿದೆ.

ಒಂದು ಕಡೆ ಬದುಕಿನ ಬರಡು ವಾಸ್ತವದ ಚಿತ್ರ ಮತ್ತು ಮತ್ತೊಂದು ಕಡೆ ಅಲೌಕಿಕವೆನ್ನಬಹುದಾದುದರ ಕಡೆಗೆ ಸೆಳೆತ ಇವೆರಡರ ಶೀತಲ ಸಮರ ಈ ಸಂಕಲನದ ಕವಿತೆಗಳಲ್ಲಿದೆ.

ಆನಂದರ 'ದಿಂಡಿ ಮತ್ತು ದಾಂಡಿ'ವರೆಗಿನ ಕವಿತೆಯ ಹರಿವನ್ನು ಅರಿಯಲು ಈ ಮೌನ ಸಂಘರ್ಷ ಸಹಾಯ ಮಾಡುತ್ತದೆ. ಸ್ವಲ್ಪ ವಿವರಿಸುವುದು ಒಳ್ಳೆಯದು. 'ಬಿನ್ನಹ' ಕವನದಲ್ಲಿರುವ–

"ಕವಿಯ ಬದುಕನೆಲ್ಲ ಅಪಹಾಸ್ಯ ಮಾಡದಿರಿ
ಕವನವೆಂದು ಕರೆದು"
" ಹೊಟ್ಟೆ ಹಸಿದರೆ ಸಮಷ್ಟಿಯ ಮೀರಿ ನಿಲ್ಲುವ
ಕವಿಯ ಸೂಕ್ಷ್ಮ– ಚಿಂತನೆ ಕೂಡ ನಿರ್ಥಕ
ಪಟ್ಟ ಪಾಡೆಲ್ಲವನು ಹುಟ್ಟು– ಹಾಡಾಗಿಸುವ ಮಾತು ಬರಿ ಕವನ
ಹೊಟ್ಟೆತುಂಬಿದವನ ಸಾಂತ್ವನ"

ಎಂಬ ಸಾಲುಗಳು ಸ್ವಲ್ಪ ವಾನಿಸಿದರೂ ಬೇಂದ್ರೆ ಕವಿಯ "ಯಾರಿಗ್ ಬೇಕೈತಿ ನಿಮ್ ಕವಿತಾ, ಬ್ರೆಡ್ ತಾ ಬೆಣ್ಣೆ ತಾ.." ದಷ್ಟು ಯಾಕೆ ತೀವ್ರ ಅಭಿವ್ಯಕ್ತಿ ನೀಡುತ್ತಿಲ್ಲ ಎಂದು ಕೇಳಿಕೊಳ್ಳಬೇಕೆನಿಸುತ್ತದೆ. ಆದರೆ ಬದುಕನ್ನು ಗ್ರಹಿಸುವ ಕವಿಯ ವಕ್ರತೆಯ ಕ್ರಮಕ್ಕೆ ಕಂಡು ವಾಹ್ ಎಂಬ ಉದ್ಗಾರವೂ ಸಹೃದಯರಿಂದ ಹೊರಡುತ್ತದೆ. ಎಲ್ಲೋ ಆನಂದರು 'ಅರಳು ಮರಳು', ಆಚೆಯ 'ತಾ ಲೆಕ್ಕಣಿಗಿ ತಾ ದೌತಿ' ಸಂಕಲನದ ಬೇಂದ್ರೆ ಕವಿಯೊಂದಿಗೆ ವಾಗ್ವಾದಕ್ಕಿಳಿದಿದ್ದಾರೆ ಎಂದೆನಿಸುತ್ತದೆ.

ಆನಂದರು ಏನನ್ನೇ ಚಿಂತಿಸುತ್ತಿರಲಿ ಬದುಕಿನ ನೋವು ಮತ್ತು ಅಲೌಕಿಕತೆಯ ಕಾತುರ ಎರಡಂತೂ ಎಲ್ಲೆಡೆ ವಿವಿಧ ಪ್ರಮಾಣಗಳಲ್ಲಿ ಕಾಣಿಸುತ್ತದೆ. ಘನತತ್ವದ ಆಸರೆ– ಅದು ಎಷ್ಟು ಅನ್ಯೆಜವಿರಲಿ ನಮ್ಮ ದೇಶದ ಮುಕ್ಕಾಲು ಪಾಲು ಬಡವರನ್ನು ಆತ್ಮಹತ್ಯೆಯಿಂದ ತಡೆದಿದೆ ಎಂಬುದನ್ನು ಎಂಥ ಪ್ರಕಾಂಡ ನಾಸ್ತಿಕರೂ ಸ್ವೀಕರಿಸಲೇ ಬೇಕು. ಇಲ್ಲದಿದ್ದರೆ ಅವರಿಗೆ ಭಾರತದ ಬಡತನದ ಸಮಸ್ಯೆಯ ಅಂತರಂಗ ದರ್ಶನವಾಗಿಲ್ಲವೆಂದೇ ನನ್ನ ತಿಳುವಳಿಕೆ.

ಆನಂದರು ವೈದಿಕ ಪರಿಭಾಷೆಯ ಪ್ರತಿಮೆಗಳನ್ನು ವರ್ತಮಾನದಲ್ಲಿ ಎರಕಹೊಯ್ಯುವ ಪರಿಗೆ ಅದರದ್ದೇ ಆದ ಗಮ್ಮತ್ತಿದೆ. "ಸಾಲು ಕೋಣೆಗಳಲ್ಲಿ ಸಾವಿರದ ಸಾರ್ವಜನಿಕರು ಬಂದು ಹೋಗುತ್ತಾರೆ. ಹತ್ತಿ ಹೊಂದಿದ ಕಾಮ್ಯಕ ವನದಲ್ಲಿ ನಿತ್ಯ–ನೈಮಿತ್ಯಕದ ಸಮಿತ್ತುಗಳ ಹೊತ್ತಿಸಿ ಮಾಂಸ ಬೇಯಿಸುತ್ತಾರೆ" (ಮಧ್ಯ ರಾತ್ರಿಯ ಮಾತುಗಳು).

ಆಸ್ತಿಕತೆ ಕೂಡಾ ನಾಸ್ತಿಕತೆಯಂತೆಯೇ ಕವಿಗೆ ಮಿತಿಯೊಡ್ಡಬಲ್ಲದು. ಆನಂದರಲ್ಲಿ ಎಷ್ಟೋ ಸಲ

ಜೀವನದ ನಶ್ವರತೆ, ಈ ಜೀವನ ಒಂದು ಲಾಡ್ಜಿನಂತೆ, ಎಂಬ ತತ್ವಗಳು ತೀರಾ ಹೇಳಿಕೆಗಳಾಗಿಯೇ ಬರುತ್ತದೆ. ಆದರೆ ಕವಿ ಮನುಷ್ಯನಾದ್ದರಿಂದ ಅವನಿಗೂ ಜೀವನದಲ್ಲಿ ದುರ್ಭರ ಪ್ರಸಂಗ ಬರುವುದರಿಂದ, ನಾಸ್ತಿಕತೆಯ ಜೌಗು ನೆಲ ಆಸ್ತಿಕತೆಗೆ ಹತ್ತಿರವಿರುವ ಕವಿಯನ್ನು ಎಳೆಯಲು ಹೊಂಚುಹಾಕುತ್ತಿರುವುದರಿಂದ ಆತ ಅನಿವಾರ್ಯವಾಗಿ ಸತ್ವದ ದೃಷ್ಟಿಯಿಂದ ಪ್ರಮುಖವಲ್ಲದ ಕವನಗಳನ್ನು ರಚಿಸುತ್ತಾನೆ. ಮುಖ್ಯವಾಗಿ 'ಖನನೋದ್ಯಮ' ಆನಂದರಿಗೆ ಗಟ್ಟನೆಲ ಒದಗಿಸಿಕೊಟ್ಟಿತು. ಅವರ ಅಂತರಂಗ – ಬಹಿರಂಗಯಾತ್ರೆಯ ಚಿಂತನೆಗೆ ಇದು ಧ್ರುವನಕ್ಷತ್ರ.

'ಎಲ್ಲಿದ್ದಾನೆ ಮನುಷ್ಯ ?' ಮೂರನೇ ಕವನ ಸಂಕಲನದಲ್ಲಿ (1984) ಆನಂದರು ವ್ಯಷ್ಟಿ ಸಮಷ್ಟಿಯ ಸಂಘರ್ಷವನ್ನು ತೆರೆದಿಟ್ಟಿದ್ದಾರೆ. ವ್ಯಷ್ಟಿ ಸಮಷ್ಟಿಗೆ ಪೂರಕ. ಸಮಷ್ಟಿ ವ್ಯಷ್ಟಿಯ ರಕ್ಷಕ ಎಂಬ ಸಿದ್ಧಾಂತ ಭಾರತದಲ್ಲಿದೆ. ಆದರೆ ಸ್ವಾತಂತ್ರ್ಯಾನಂತರದಲ್ಲಿ ಸರ್ಕಾರಗಳು ಕೈಗೊಂಡ ಬೃಹತ್ ಅಣೆಕಟ್ಟು ರಚನೆಯಿಂದ ಅನೇಕ ಹಳ್ಳಿಗಳು (ವ್ಯಷ್ಟಿ) ಮುಳುಗಡೆಯಾಗಿ ಲಕ್ಷಾಂತರ ಜನ ನಿಂತ ನೆಲ ಕಳೆದುಕೊಂಡರು. ಈ ಜನರ ಸಂಖ್ಯೆ ಭಾರತದಿಂದ ಪಾಕಿಸ್ತಾನ ತುಂಡರಿಸಿದಾಗ ಆದ ಜನಸಂಖ್ಯೆಯ ನಷ್ಟಕ್ಕಿಂತ ದೊಡ್ಡದು ಎಂದು ಸಮಾಜಶಾಸ್ತ್ರಜ್ಞ ಆಶೀಶ್ ನಂದಿ ಹೇಳಿದ್ದಾರೆ. ಆನಂದರು ಗಾಂಧೀಜಿಯ 'ಹಿಂದ್ ಸ್ವರಾಜ್' ತೀವ್ರವಾಗಿ ಮೆಚ್ಚಿಕೊಂಡವರು. ಆಧುನಿಕತೆಯ ಕ್ರೂರ ಮುಖವಾಡಗಳು ನಗರ ಜೀವನದ ಪರಿಧಿಯಲ್ಲಿ ಅನೇಕ ಕವಿತೆಗಳಲ್ಲಿ ಇಣುಕಿವೆ. ಸೂಳೆಗಾರಿಕೆಯ ವಿಷಚಕ್ರ. (ಬೀದಿಗೂಂದ ದಾಸರ ಹುಡುಗಿ), ಮುಳುಗಡೆ ಪ್ರದೇಶದ ಸಂಕಟ (ಮುಳುಗತ್ತಲಿದೆ ನಮ್ಮೂರು). ಪ್ರಳಯದ ಭಯಾನಕ ವಿಷಯಗಳು ಕವನಗಳಾಗಿವೆ. ಹಿಂಸ್ರಕ ಜಗತ್ತಿನ ಪ್ರತಿಮೆಗಳಿಂದ ಆನಂದರು ಹಿಂಸಾರು ಜಗತ್ತಿನ ನೇರ ಚಿತ್ರಣ ನೀಡಲು ಆರಂಭಿಸಿರುವುದು 'ಸ್ವಾಮೀಜಿ'ಯ ಕವಿತೆಯ–


"ಬದುಕಿನ ತೊಗಲು ಸುಲಿದು
ಆತ್ಮದ ಅಮರತೆಯ ಉಪನ್ಯಾಸ ನೀಡಿ
ನಿಮ್ಮಷ್ಟಕ್ಕೆ ನೀವು ಬಗೆ ಹರಿಸಿಕೊಳ್ಳಬಹುದಾದರೂ– ಹಿಂಸೆಯ ಕ್ರೂರ ವ್ಯಾಜ್ಯ"

–ಸಾಲುಗಳಿಂದ ಸ್ಪಷ್ಟವಾಗುತ್ತದೆ. ಹಿಂದಿನ ಸಂಕಲನಗಳಂತೆಯೇ ಇದರಲ್ಲಿಯೂ ಅನೇಕ ಉತ್ತಮ ಕವನಗಳಿವೆ. ಉದಾ : 'ಖಾಲಿಮನೆ', 'ಕವಿತೆಯ ಕಥೆ', 'ಯಾವ ಶಬ್ದವೇನೋ ಏನೋ'. . . ವೈಯಕ್ತಿಕ ಬದುಕನ್ನು ಸಾಮಾಜಿಕ ವ್ಯವಸ್ಥೆ ಹೊಸಕಿ ಹಾಕಲು ನೋಡುತ್ತಿರುವುದರತ್ತ ಆನಂದರ ಪ್ರಧಾನ ಕಾಳಜಿಯಿರುವುದು ಸಂಕಲನದ ಹೆಸರಿನಲ್ಲೂ ವ್ಯಕ್ತವಾಗಿದೆ.

ಕಡೆಯದಾಗಿ ಆನಂದರ ಕವಿತೆ ಒಂದಾಯ– ದಲಿತ ಚಳವಳಿಯ ಪ್ರವಾಹದ ದಂಡೆಯಲ್ಲಿ ಹುಟ್ಟಿಕೊಂಡ ಕಾಡು ಹೂವುಗಳು. ಕವಿತೆಯ ಬಗ್ಗೆ ಚಿಂತಿಸುವಾಗಲೇ ಕವಿಯ ಬಗ್ಗೆಯೂ ಚಿಂತಿಸುವ ಸಂಯಮ ಅವರ ದೊಡ್ಡಗುಣ. ನವ್ಯದ ಕುಲುಮೆಯಲ್ಲಿ ಬಂದು ಅಲ್ಲಿಂದ ಅನೇಕ ತಾಂತ್ರಿಕ ಗುಣಗಳನ್ನು ಪಡೆದಿರುವ ಈ ಮೂರೂ ಸಂಕಲನಗಳಲ್ಲಿ ಆನಂದರು ಬದುಕನ್ನು ಕಾಣುವ ಪರಿಧಿ ವಿಸ್ತಾರಗೊಳ್ಳುತ್ತಾ ನಡೆದಿದೆ. ಸ್ವಾತಂತ್ರ್ಯೋತ್ತರದ ಭಾರತೀಯ ಮಾನಸಿಕ ಗುಲಾಮತನ ಸೂಕ್ಷ್ಮವಾಗಿ – ತಾತ್ವಿಕವಾಗಿ ದಾಖಲಾಗಿದೆ.ಕವಿಯೂ ಮನುಷ್ಯ. ಅವನಿಗೂ ಬದುಕಲು ಅವಕಾಶ ಬೇಕು ಎಂಬ ಪ್ರಾಮಾಣಿಕ ಹಂಬಲ ಅವರ ಇಲ್ಲಿವರೆಗಿನ (1984) ಎಲ್ಲ ಪ್ರಮುಖ ಕವನಗಳಲ್ಲೂ ವ್ಯಕ್ತವಾಗಿದೆ. ದಲಿತ–ಬಂಡಾಯ ಚಳುವಳಿಗಳ ಕಾವಿನಲ್ಲಿ ಕೇಳಿಸಿದ ಎಷ್ಟೋ ಸಶಕ್ತ, ತಾಜಾ, ಒಂಟಿಧ್ವನಿಗಳು– ಕನ್ನಡ ಸಾಹಿತ್ಯವು ಜೋರು ಮಳೆ ಬಿದ್ದು ನಿಂತ ಮೇಲೆ ಇರುವ ನೆಲದಂತೆ ಇರುವ ಈ ಕಾಲದಲ್ಲಿ ನಿಜವಾಗಿಯೂ ಕೇಳಿಸತೊಡಗಿವೆ.

ಶಬ್ದ ಪ್ರಸಂಗವೆಂಬ ಕಾವ್ಯದ ಮೇಜವಾನಿ

– ರಘುನಾಥ ಚ.ಹ.



ಕಾವ್ಯ ಆಂದ್ರ
ಕವಿಯ ಮನಿ –
– ಯ ಮೇಜವಾನೀ

ಆನಂದ ಝುಂಜರವಾಡರ ಶಬ್ದ ಪ್ರಸಂಗ ಸಂಕಲನ ಓದುಗನಿಗೆ ಮುಖಾಮುಖಿಯಾಗುವುದೇ ಈ ಸಾಲುಗಳ ಮೂಲಕ. ಈ ಕವಿಯ ಮನೆಯ ಮೇಜವಾನಿ ಒಂದೇ ಥರದಲ್ಲ – ಕವಿ ಸಾವಿರದ ಪಡಿ ಪದಾರ್ಥಗಳ ಚಂದ ಬಡಿಸಿಟ್ಟಿದ್ದಾನೆ. ಇಲ್ಲಿ ವೈವಿಧ್ಯತೆಯಿದೆ. [illegible] ಕಲಾವಿದನ ಕೈಯಲ್ಲಿ ಒಣಗಸೋದು, ನೆನಸೋದು, ಬೇಯಿಸೋದು, ಕರಿಯೋದು ಎಲ್ಲವೂ ಹದವಾಗಿದೆ. 'ಘಮ್ಮಗ ವಾಸಾನೇ ಮನೇ ಎಲ್ಲಾ ತುಂಬೇದ/ ಯಾರ ಬಂದ್ರೂ ಕರೀತದ ಒಳಗ ಬರ್ರಿ /' ಎಂದು ಕವಿ ಆಶ್ವಾಸನೆ ನೀಡುತ್ತಾರೆ. ಸಂಕಲನದ ಆರಂಭದಲ್ಲಿ ನೀಡುವ ಈ ಭರವಸೆ ಸಂಕಲನದುದ್ದಕ್ಕೂ ಹುಸಿಯಾಗುವುದಿಲ್ಲ. ಅದು ಝುಂಜರವಾಡರ ಕಾವ್ಯದ ಯಶಸ್ಸು.

ಕವಿತೆಯೆಂಬುದು ಅಂತರಂಗದ ವ್ಯಾಪಾರವಾಗಿರುವ ಸಾಧ್ಯತೆಗಳು ಕಡಿಮೆಯಾಗಿರುವ ಈ ದಿನಗಳಲ್ಲಿ , ಕವಿತೆಯನ್ನು ಪ್ರೀತಿಸುವವವರಿಗೆ ಝುಂಜಡವಾಡರ ಶಬ್ದ ಪ್ರಸಂಗ ಕಾವ್ಯದ ಮೇಜವಾನಿ ಅನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಝುಂಜರವಾಡ ನಮ್ಮ ನಡುವಿನ ಮಹತ್ವದ ಕವಿ ಅನ್ನುವುದನ್ನು ಶಬ್ದ ಪ್ರಸಂಗ ರುಜುವಾತು ಪಡಿಸುತ್ತದೆ. ಶಬ್ದ ಪ್ರಸಂಗದ ಕುರಿತು ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳುವ ಮುನ್ನ ಒಂದು ವಿಷಯವನ್ನು ಸ್ಪಷ್ಟಪಡಿಸಲೇ ಬೇಕು. ಅದೆಂದರೆ ಝುಂಜರವಾಡರ ಕವಿತೆಗಳನ್ನು ವಿಮರ್ಶಿಸುವುದು. ಅಥವಾ ಅವುಗಳಿಗೆ ಬೆಲೆ ಕಟ್ಟುವುದು ಈ ಬರಹದ ಉದ್ದೇಶವಲ್ಲ. ಕವಿತೆಯನ್ನು ಪ್ರೀತಿಸುವ ಸಹೃದಯನಾಗಿ ಶಬ್ದ ಪ್ರಸಂಗಕ್ಕೆ ಮುಖಾ ಮುಖಿಯಾದಾಗ ಉಂಟಾದ ಅನಿಸಿಕೆಗಳ ಕೆಲವು ಟಿಪ್ಪಣಿಗಳು ಇಲ್ಲಿವೆ.

ಪ್ರತಿ ಓದಿಗೂ ಹೊಸ ಅರ್ಥ ಸಾಧ್ಯತೆಗಳನ್ನು ಹೊಳೆಯಿಸುವ ಶಬ್ದ ಪ್ರಸಂಗದ ಮಹತ್ವದ ಕವಿತೆಗಳು ಅರ್ಥವಾಗಿಯೂ ಮಿಗುವ ಸಂಕೀರ್ಣ ರಚನೆಗಳು. ಬೇಂದ್ರೆ ಹಾಗೂ ಅಡಿಗರನ್ನು ಎರಕ ಹೊಯ್ದಂತೆ ಕಾಣುವ ಝುಂಜಡವಾಡರ ಕವಿತೆಗಳ ಪಟ ಹಾರುವ ಮುಗಿಲ ವಿಸ್ತಾರ ಬಹು ದೊಡ್ಡದು. ಶಬ್ದ ಪ್ರಸಂಗದಲ್ಲಿನ ಕವಿತೆಗಳನ್ನು ಓದುವಾಗ ಅನೇಕ ಬಾರಿ ಬೇಂದ್ರೆ ಹಾಗೂ ಅಡಿಗ ನೆನಪಿಗೆ ಬರುವುದು ಇಲ್ಲಿನ ಕವಿತೆಗಳ ಶ್ರೇಷ್ಠತೆಯಿಂದಲೇ ಹೊರತು. ಕವಿತೆಗಳ ಬಗೆಗಿನ ಅನುಮಾನದಿಂದಲ್ಲ. ಇಡೀ ಕನ್ನಡ ಕಾವ್ಯವನ್ನು ಪ್ರಭಾವಿಸಿರುವ ಬೇಂದ್ರೆ ಹಾಗೂ ಅಡಿಗರ ನೆರಳು ಶಬ್ದ ಪ್ರಸಂಗದ ಕವಿಯ ಮೇಲೆ ಬಿದ್ದಿಲ್ಲವೆಂದು ತರ್ಕ ಹೂಡುವ ಅಗತ್ಯವೂ ಇಲ್ಲ. 'ಅಹೋ ಬೇಂದ್ರೆ ಮಾಸ್ತರ'. 'ಅಡಿಗರು ಹೋದರು'. 'ಅಡಿಗರನ್ನು ಮತ್ತೆ ಓದಿದಾಗ' – ಕವಿತೆಗಳನ್ನು ಓದಿದರೆ ಝುಂಜರಡವಾಡರಿಗೆ ಇಬ್ಬರು ಮಹಾನ್

ಕವಿಗಳ ಮೇಲಿನ ಗೌರವ ಅರ್ಥವಾಗುತ್ತದೆ. ಒಂದರ್ಥದಲ್ಲಿ ಬೇಂದ್ರೆ ಹಾಗೂ ಅಡಿಗರ ಹಾದಿಯ ಮುಂದುವರೆದ ಕುರುಹಾಗಿ 'ಶಬ್ದ ಪ್ರಸಂಗ'ದ ಕವಿತೆಗಳು ಕಾಣಿಸುತ್ತವೆ. ಬೇಂದ್ರೆ, ಅಡಿಗರನ್ನು ಮೆಚ್ಚಿಯೂ ಅವರನ್ನು ಮೀರುವ ಮಹತ್ವಾಕಾಂಕ್ಷೆ, ಸಾಮರ್ಥ್ಯ ಹಾಗೂ ಆತ್ಮವಿಶ್ವಾಸ ಝುಂಜರವಾಡರದು. ಅವರು ಬರೆಯುತ್ತಾರೆ:

ನಿನ್ನ ಮುಗಿಲಾದಾಗ ನಿನ್ನ ಗಾಳೀಪಟಾ ಹಾರಸು
ಮಂದೀ ಹೆಗಲಮ್ಯಾಲ ಕೈ ಹಾಕಬ್ಯಾಡಾ

ಕವಿತೆ, ಕವಿ, ಹಾಗೂ ಕವಿಯ ತೊಳಲಾಟ ಕುರಿತು 'ಶಬ್ದ ಪ್ರಸಂಗ' ದ ಬಹುತೇಕ ಕವಿತೆಗಳು (ನನ್ನ ಕವಿತೆ, ಕವಿಯ ಸಾವು, ಗಾಳೀ ಪಟ, ಕಾವ್ಯ ಅಂದ್ರ, ನನ್ನ ಕವಿತೆಗೆ........ ಇತ್ಯಾದಿ) ಧ್ಯಾನಿಸಿರುವುದು ಗಮನಾರ್ಹ. ಸಮಾಜಕ್ಕೆ ಮುಖಾಮುಖಿಯಾಗುವ ಕವಿ, ಆತ್ಮಕ್ಕೂ ಮುಖಾ ಮುಖಿಯಾಗುತ್ತಾನೆ. ಇಲ್ಲಿ ಕವಿಯ ಆತ್ಮ ಕವಿತೆಯೇ ಆಗಿದೆ. ಆತ್ಮ ಕೇಂದ್ರಿತನಾದಾಗ ಅಥವಾ ಬಾಲ್ಯದ ನೆನಪು– ಅನುಭವಗಳತ್ತ ಹೊರಳಿದಾಗ ಕವಿ ಸ್ಥಳೀಯ ಭಾಷೆ ಬಳಸುವುದು. ಉಳಿದಂತೆ ಬರಹದ ರೂಢಿ ಭಾಷೆಗೆ ಮರಳುವ ಝುಂಜರವಾಡರ ಕಾವ್ಯ ಭಾಷೆ ಕುತೂಹಲಕರವಾದುದು.

ಶಬ್ದ ಪ್ರಸಂಗದ ಕವಿ ನಾದಲೋಲ. ಝುಂಜರವಾಡರ ಲೇಖನಿಯಲ್ಲಿ ಪದಗಳು ಬಾಗುವ ಬಳಕುವ ಮೋಡಿಯೇ ಮೋಡಿ. ಇಲ್ಲಿನ ಬಹುತೇಕ ಕವಿತೆಗಳು ಹಾಡಬಾರದ ಭಾವಗೀತೆಗಳು, ಆಡು ಮಾತಿನ ಬಳಕೆಯ ಕವಿತೆಗಳನ್ನು ಕಟ್ಟುವಾಗಂತೂ ಝುಂಜರವಾಡ ಅವರು ಮಾತುಗಳ ಮಾಯೆಯಲ್ಲಿ ಮೈ ಮರೆಯುತ್ತಾರೆ.

ಕವಿಯ ಪಾಲಿಗೆ ಕವಿತೆ ಎನ್ನುವುದು ಅಂತರಂಗದ ವ್ಯಾಪಾರವೋ ಇನ್ನೊಂದೋ ಅಲ್ಲ. ಇಲ್ಲಿನ ಕವಿತೆ ತೃಪ್ತ ಮನಸ್ಸಿನ ಗರ್ಭದಲ್ಲಿ ಹುಟ್ಟಿದುದೂ ಅಲ್ಲ. ಆ ಕಾರಣದಿಂದಲೇ ಶಬ್ದಪ್ರಸಂಗದಲ್ಲಿನ ಕವಿತೆಗಳಲ್ಲಿ ಪ್ರಕೃತಿಯ ಸ್ಥಾನ ತೀರಾ ಗೌಣವಾದುದು. ಝುಂಜರವಾಡರ ಕವಿತೆ।

ಹೆಣಕ್ಕುಡಿಸಿದ ಸೀರೆಯನ್ನೇ ಉಟ್ಟು
ಜೀವಂತ ಜನರನ್ನು ಕಾಮಿಸಿ ಕರೆಯುತ್ತಾಳೆ.
ಸತ್ತವರ ಸುತ್ತ ಅಳುವವರನ್ನು ಕಂಡು
ನಗುತ್ತಾಳೆ ನನ್ನ ಕವಿತೆ
ನಗೆಯ ಬೂದಿಯಲ್ಲಿ ನಿಗಿನಿಗಿಸುವ ಚಿತೆ.

ವಿಷಾದವೇ ಸ್ಥಾಯಿಯಾದ ಸಂದರ್ಭದಲ್ಲಿ 'ಶಬ್ದ ಪ್ರಸಂಗ' ದ ಕವಿತೆಗಳು ಹುಟ್ಟಿದರೂ, ಕವಿಯ ಆಶಯ ಸಹೃದಯನಗೆ ಸಂತೋಷ ನೀಡುವುದೇ ಆಗಿದೆ. 'ನನ್ನ ಕವಿತೆಗೆ ಚಳಿಯಲ್ಲಿ ಸುಖ ಕೊಡುವ /ಬೆಚ್ಚಗಿನ ಮೊಲೆಗಳ ಮಾಂಸಲತೆ ಇರಲಿ/ ಎರೆದುಕೊಂಡವಳ ಕೇಶಗಳ ವಿಶಾಲ ಬೆನ್ನಹರವು/ ಸಿಪ್ಪೆಯೊಡೆದ ಬಿಸಿತುಟಿಗಳ ಹುಳಿ ಹುಳಿಯಾದ ರುಚಿ ಇರಲಿ' ಎಂದು ಕವಿ ಆಶಿಸುತ್ತಾರೆ.

ಕವಿತೆಯ ಬಗ್ಗೆ ಏನೆಲ್ಲಾ ಆತ್ಮವಿಶ್ವಾಸದ ಮಾತಾಡಿದರೂ ತನ್ನ ಕವಿತೆ ಓದುಗನಿಗೆ ತಲುಪದೇ ಹೋದರೆ ಎನ್ನುವ ಎಲ್ಲ ಕವಿಗಳೆದೆಯ ಭಯದ ಬೀಜ ಝುಂಜರವಾಡರದೂ ಆಗಿದೆ. 'ಕವಿಯ ಸಾವು' ಈ ಭಯವನ್ನು ಸಮರ್ಥವಾಗಿ ಚಿತ್ರಿಸಿದೆ. ಕವಿಯ ಸಾವಿನ ಹಿನ್ನಲೆಯಲ್ಲಿ ಆತನ ಬಗ್ಗೆ ಜನ

ಮಾತಾನಾಡಿಕೊಳ್ಳುವ ವಿವರಗಳ ಕವಿತೆ ಮುಕ್ತಾಯವಾಗುವುದು– 'ಕವಿತಾನ ಮರತಾವ್ರಿಗೆ , ಕವೀನ ಮರೀಲಿಕ್ಕೆಷ್ಟೊತ್ತು ?' ಎನ್ನುವ ಸಾಲಿನೊಂದಿಗೆ .

'ದ್ವೇಷ', 'ಕೊಂಡರು', 'ಜೀವನ' ಮುಂತಾದ ಅಷ್ಟೇನೂ ಮಹತ್ವವಾದುದನ್ನು ಹೇಳದ ಕವಿತೆಗಳೂ 'ಶಬ್ದ ಪ್ರಸಂಗದಲ್ಲಿವೆ'. ಆದರೆ –ಸಂಸ್ಕೃತಿ ಸರಳ ರೇಖೆಯಲ್ಲ. ತಾರೆ ಮತ್ತು ವೃತ್ತಗಳು, ಜಂಗೀ ಜಾತ್ರೆ, ಇದೇ ಹೊಳೆಯಲ್ಲಿ, 'ಆಟಾ, ಮುಟ್ಟಾಟ'ದಂಥಹ ಕವಿತೆಗಳ ಕವಿ ಝುಂಜರವಾಡರ ಕಾವ್ಯ ಪ್ರತಿಭೆ ಮೇಲ್ಮಟ್ಟದ್ದೆನ್ನುವುದರಲ್ಲಿ ಅನುಮಾನವೇ ಇಲ್ಲ.

ಶಬ್ದ ಪ್ರಸಂಗ ದ ಕವಿತೆಗಳಲ್ಲಿನ ವರ್ತಮಾನಕ್ಕೆ ಸ್ಪಂದನ, ಪಾರಮಾರ್ಥ ಚಿಂತನೆ, ಆಧ್ಯಾತ್ಮದ ವಾಸನೆ ಮುಂತಾದ ಅಂಶಗಳನ್ನು ಚರ್ಚಿಸಲು ಇಲ್ಲಿ ಪ್ರಯತ್ನಿಸಿಲ್ಲ. ಕೆಲವು ಕವಿತೆಗಳ ಪ್ರವೇಶವೇ ಕಠಿಣವಾಗಿದೆ. ಆದರೆ, ಝುಂಜರವಾಡರ ಕವಿತೆಗಳೊಂದಿಗೆ ಗುದ್ದಾಡುವುದೂ ಸುಖವೇ. ಆ ಸುಖ ನಿರಂತರವಾಗಿರಲಿ.

ಶಬ್ದ ಪ್ರಸಂಗ– ಸಂಕಲನದ ಕೆಳಗಿನ ಸಾಲುಗಳೊಂದಿಗೆ ಈ ಬರಹವನ್ನು ಮುಗಿಸುತ್ತೇನೆ.

> ಕವೀನೂ, ನಮ್ಮ –ನಮ್ಮ ಪ್ಯಾಟ್ಯಾಗ ಸಂತೀ ಮಾಡತಾನ
> ನಮ್ಮ ಪಂಕ್ತ್ಯಯಾಗ ಕೂಡತಾನ
> ಅವಂಗೂ ತನ್ನ ಸಾಹಿತ್ಯದ ಬಗ್ಗೇ ತಾನ ಹೇಳಬೇಕಾದ ಮಾತು
> ಇದ್ದೇ ಇರ್ತಾವ.
> ತಗದ ಒಗಿರಿ ಇನ್ನರೇ ಆ ನಿಮ್ಮ ಮೋರ್ಕು ಸ್ಪೂನೂ
> ಈ ಕೈಲೇ ಮಾಡಿದ್ದನ್ನ ಇದ ಕೈಲೇ ಉಣ್ಣೂಣು.

ದಿಂಡೀ ಮತ್ತು ದಾಂಡಿಯ ದಂಡೆಯ ಮೇಲಿನ ಚಿತ್ರಗಳು

– ಡಿ.ಎಸ್. ರಾಮಸ್ವಾಮಿ



ಆಧುನಿಕ ಕನ್ನಡ ಕಾವ್ಯ ಹೊಸದೊಂದು ರೂಪಾಂತರಕ್ಕೆ ತವಕಿಸುತ್ತಿರುವ ವರ್ತಮಾನದ ಸ್ಥಿತಿಯಲ್ಲಿ ಅಂಥ ಪ್ರಕ್ರಿಯೆಯನ್ನು ನಿರ್ದೇಶಿಸುವ ಸಿದ್ಧ ಸೂತ್ರಗಳೂ, ಚಳುವಳಿಯ ಕಾವೂ ಕಾಣುತ್ತಿಲ್ಲ. ಆದರೂ ನವೋದಯದ ರಮ್ಯತೆ, ಪ್ರಗತಿಶೀಲರ ವೈಚಾರಿಕಕಾಳಜಿ, ನವ್ಯರ ತೀವ್ರತೆ, ಬಂಡಾಯ ಕಲ್ಪಿಸಿದ ಸಾಮಾಜಿಕ ವಿವೇಕಗಳು ಈ ಬಗೆಯ ಎಲ್ಲ ಸಿದ್ಧ ಮಾದರಿಗಳನ್ನೂ ತನ್ನೊಳಗೆ ಘನೀಕರಿಸಿ ಹೊಸ ಪರಿಪಾಕವೊಂದನ್ನು ಸೃಷ್ಟಿಸಿರುವ ಕೀರ್ತಿ ಆನಂದ ಝುಂಜರ ವಾಡರಿಗೆ ಸಲ್ಲುತ್ತದೆ. ಮೂಲತಃ ವೈಯಕ್ತಿಕ ಸೃಜನಶೀಲತೆಯೊಂದೇ ಕವಿತೆಯ ಮೂಲ ಅಸ್ತಿಭಾರವಾಗುತ್ತಿರುವುದರಿಂದ ಮೇಲೆ ಹೇಳಿದ ರೂಪ, ಮಾದರಿಗಳು ಕವಿ ಮೊದಲೇ ಸಿದ್ಧಗೊಳಿಸಿಕೊಂಡ ಧ್ವನಿಯ

ಆಯತನದ ಮೇಲೆ ಕಟ್ಟಡ ಕಟ್ಟಿ, ಅಲಂಕಾರಣಕ್ಕೆ ಬಳಸುವ ವಸ್ತುಗಳಂತೆ ತೋರುತ್ತದೆ. ನಿಜವಾಗಿಯೂ ಕವಿತೆಯೊಂದರ ಯಶಸ್ಸು ಅದು ಓದುಗನೊಂದಿಗೆ ನಡೆಸುವ ಸಂಘರ್ಷದಲ್ಲಿ, ಧರಿಸಿಕೊಂಡಿರುವ ಸಂಕೀರ್ಣತೆಯಲ್ಲಿ, ಆವರಿಸಿಕೊಂಡಿರುವ ವ್ಯಾಪ್ತತೆಯಲ್ಲಿ ಧ್ವನಿಸುವ ಭಾವತೀವ್ರತೆಯಲ್ಲಿ ಹೊಸ ಅರ್ಥಗಳನ್ನು ಹುಟ್ಟಿಸಿದ ಬೆರಗುಗಳಲ್ಲಿ ಹಾಗೂ ಬಳಸಿರುವ ಪ್ರಯೋಗಗಳಲ್ಲಿ ನಿಂತಿರುತ್ತದೆ. ಒಂದನ್ನು ಸರಿತೂಗಿಸಿದರೆ ಮತ್ತೊಂದು ತಪ್ಪಿಸಿಕೊಳ್ಳುವಾಗ ಈ ಎಲ್ಲವನ್ನು ಒಟ್ಟು ಸೇರಿಸಿ ಕವಿತೆಯೊಂದನ್ನು ಹೆಣೆಯುವುದು ನಿಜ ಕವಿಗೆ ಮಾತ್ರ ಸಾಧ್ಯವಿರುವ ಸಂಗತಿ.

ಬಹು ಮುಖ್ಯವಾಗಿ ಸೃಜನಶೀಲತೆಯ ಅನುಭವವೊಂದರ ಆಂತರಂಗಿಕ ಶೋಧ. ಅದು ಪರಂಪರೆ ಕಲಿಸಿಕೊಟ್ಟ ವಿದ್ವತ್ತಿನ ಅರಿವು, ಅದನ್ನು ಮೂರ್ತೀಕರಿಸಿಕೊಳ್ಳಲು ಬೇಕಾದ ಮುಕ್ತತೆ ಹಾಗೂ ಹೇಳಲೇ ಬೇಕೆನ್ನುವ ತೀವ್ರತೆಗಳನ್ನು ಬಯಸುತ್ತದೆ.

ಈ ಇಷ್ಟು ಗುಣಗಳನ್ನು ಏಕತ್ರಗೊಳಿಸಿಕೊಂಡಿರುವುದೇ ಆನಂದ ಝುಂಜರವಾಡರ 'ದಿಂಡೀ ಮತ್ತು ದಾಂಡೀ' ಸಂಕಲನದ ವಿಶಿಷ್ಠತೆ.

ಬಹಳಷ್ಟು ಕವಿಗಳು ತಾವು ನೆಚ್ಚಿಕೊಂಡಿರುವ ಸಿದ್ಧಾಂತಗಳೇ ಕವಿಗೆ ಮಿತಿಯನ್ನು ಹೇರಿಬಿಡುವ ಅಪಾಯದಿಂದಲೂ ಇಲ್ಲಿನ ಕವಿತೆಗಳು ಪಾರಾಗಿವೆ. ಸದ್ಯದ ಸ್ಥಿತಿಯನ್ನು ಗೇಲಿಮಾಡುತ್ತಲೇ ಹೊಸ ಕನಸಿಗೆ ಕೈಚಾಚುವ ಇಲ್ಲಿನ ಬಹುತೇಕ ಕವಿತೆಗಳು ಬಂಡಾಯದ ಛಾಪಿಲ್ಲದೆಯೂ ಬಂಡಾಯದ ಧ್ವನಿಯನ್ನು ಸಮರ್ಥವಾಗಿ ತೋರುತ್ತವೆ.

ಒಂದು ಸಂಕಲನದಲ್ಲಿ ಇರುವ ಕವಿತೆಗಳು ಸಾಮಾನ್ಯವಾಗಿ ಧ್ವನಿಸುವ ಸ್ಥಾಯಿ ಭಾವವನ್ನು ಈ ಸಂಕಲನದ ಕವಿತೆಗಳು ಹೊರಡಿಸದಿರುವುದೇ ಇಲ್ಲಿನ ಘನಾಂಶವಾಗಿದೆ. ಬಿಡಿ ಬಿಡಿಯಾಗಿ ಓದಿಕೊಂಡಾಗ ಧ್ವನಿಸುವ ಈ ಪ್ರತಿಮೆಗಳಿಗೂ ವ್ಯತ್ಯಾಸ ತೋರತೊಡಗಿ, ಕವಿತೆ ಒಂದೇ ಓದಿಗೆ ಬೆತ್ತಲಾಗಿ ಬಿಡಬಾರದೆಂಬ ಕವಿಯ ಕುಶಲ ನೇಯ್ಗೆ ಅರಿವಾಗುತ್ತದೆ.

ಸಂಕಲನದ ತುಂಬು ಶಕ್ತ ಪದ್ಯಗಳಾದ 'ದಿಂಡೀ ಮತ್ತು ದಾಂಡೀ' ಎಂಬೆರಡೂ ರಚನೆಗಳೂ ಪರಸ್ಪರ ಪೂರಕವಾಗಿ ಕಾಣುತ್ತಿರುವಂತೆಯೇ ಬಿನ್ನಧೃವಗಳಿಗೆ ಅಂಟಿ ನಿಂತು ಪರಸ್ಪರ ವಿರೋಧಿ ನಿಲುವನ್ನು ತಾಳಿರುವುದನ್ನು ಗಮನಿಸಬಹುದು. ದಿಂಡೀ ಎಂಬುದು ಅಮೂರ್ತ ಅನುಭಾವಿಕ ನೆಲೆಯ ಸತತ ಶೋಧದಲ್ಲಿ ತನಗೆ ತಾನೆ ಕರಗಿಹೋಗಬೇಕಾದ ವ್ಯಕ್ತಿಗತ ಧೋರಣೆಗಳನ್ನು ಪಟ್ಟಿ ಮಾಡಿದರೆ ದಾಂಡಿಯು ಮೂರ್ತ ಸಂತನೊಬ್ಬ ಕೊಡಮಾಡಿದ ಸೈದ್ಧಾಂತಿಕ ನಿರ್ಣಯವನ್ನು ವ್ಯಕ್ತಿಗಳು ಸ್ವಲಾಭಕ್ಕೆ ಬಳಸಿಕೊಂಡ ವ್ಯಂಗ್ಯವನ್ನು ಅನಾವರಣಗೊಳಿಸುತ್ತಲೇ ಪರಸ್ಪರ ಪೂರಕವೂ ವಿರೋಧವೂ ಆದ ಈ ಎರಡೂ ನೆಲೆಗಳಲ್ಲಿ ಪ್ರಸ್ತುತ ಭಾರತೀಯರು ಯಾವ ದಿಕ್ಕಿನಲ್ಲಿ ಸಾಗಬೇಕೆಂಬುದರ ಚಿಂತನೆಯನ್ನೂ ಕೊಡುತ್ತವೆ.

ಕಬ್ಬಿಗರೆದೆಯ ಕಬ್ಬು, ಮಗೀ ಕೂಡುತನಾ, ಗೆಳೆಯರೊಂದಿಗೆ ಒಂದು ಸಂಜೆ, ಹಬ್ಬದ ಕಸ, ದೊರೆ ಮತ್ತು ಕಲಾವಿದ ತುಂಬು ಸಾರ್ಥಕತೆಯನ್ನು ಹೆಣೆದುಕೊಂಡ, ತಮ್ಮೊಳಗೆ ಬಂದು ತನವನ್ನಿಟ್ಟುಕೊಂಡ ರಚನೆಗಳು. ತಂದೆ, ದೀಪಾವಳಿ, ಧರ್ಮ ಬಣ್ಣ ಮತ್ತು ಕುಂಚ ಇವು ಕವಿಯ ಕನಸುಗಳನ್ನು ನೆಟ್ಟು ಭಾವನೆಗಳನ್ನು ಬೆಳೆಸಿದ ಕ್ಲಿಷ್ಟ ರಚನೆಗಳು.

'ಪ್ರಪಂಚದ ಪಂಚ ಪಾತ್ರೆಯಿಂದ ಪುರಾಣಗಳ ಸಣ್ಣ ಉದ್ಧರಣೆಗೂ ವ್ಯಾಸತೀರ್ಥದಕ್ಕಿದ್ದೆಷ್ಟು, ದಕ್ಕುವದೆಷ್ಟು'? (ಹಬ್ಬದ ಕಸ) ಎಂದು ಹಪ ಹಪಿಸುತ್ತಲೇ 'ಮನಸು ಕೂಸಾಗಿ ಕೂತು ವಿಷದ

ಬಟ್ಟಲದಾಗೂ ಹೊತ್ತಿಗೆ ಸರಿಯಾಗಿ ಬಿತ್ತು, ನವಕೋಟಿ ನೋವುಗಳ ಥಳ ಥಳಿಸೋ ನತ್ತು' (ಗೆಳೇಯರೊಂದಿಗೆಒಂದು ಸಂಜೆ) ಎಂದು ಸಮಾಧಾನಗೊಳ್ಳುತ್ತಲೇ 'ಚಕ್ಕುಲಿ, ಕೋಡುಬಳೆ, ತಂಬಿಟ್ಟುಗಳ ತುಂಬಿಡಲು ಮಾತ್ರ ಮತಪೆಟ್ಟಿಗೆಗಳನ್ನು ಬಳಸುವ ಕಾಲ ಇಲ್ಲಿ ಅರಳುವಂತೆ (ಹಿಮಾಲಯ ಮತ್ತು ರಕ್ತ) ಕೇಳಿಕೊಳ್ಳುವ ಕವಿ 'ಕಣಕಣದ ಅಣುವಿನಲಿ ಕಣ್ಣು ಬಿಡುತಲಿವ ಕಂಪಿಸುವ ಹಿಗ್ಗು..........ಕಂಪಿಸುವ ಹಿಗ್ಗು ಮೊಗ್ಗೆ, ಮುಳ್ಳುಕೂಡ ಇದೆ ಸರತಿ ಸಾಲಿನಲಿ ಮಳೆ ಕಾಯಬೇಕು ಬೇಗ' (ಹುಲ್ಲು ಗರಿಕೆ) ಎಂಬ ಸತ್ಯ ದರ್ಶನವನ್ನು ಮಾಡಿಸುತ್ತಾರೆ.

ಆದರೂ ಇಂಥ ಗಟ್ಟಿಸಂಕಲನದಲ್ಲಿರಬಾರದಿದ್ದ ಕೆಲ ಕವಿತೆಗಳು ಇದೇ ಸಂಕಲನದಲ್ಲಿ ಉಳಿದಿದ್ದು ಇಡೀ ಸಂಕಲನ ಧ್ಯಾನಿಸಿದ ವಜ್ಜೆಗೆ, ಆರ್ದ್ರತೆಗೆ, ತೀಕ್ಷ್ಣತೆಗೆ ದೃಷ್ಟಿಬೊಟ್ಟಿಕ್ಕಿವೆ. ಕೀರ್ತಿ ಸ್ತಾಲಿನ ಗಿಡ ಮೂಲಿಕೆಗಳು ಧ್ವನಿಸುವ ವ್ಯಂಗ್ಯ ನಿಜವನ್ನೇ ನುಡಿಯುತ್ತಿದ್ದರೂ ಏನೋ ಈ ಕವಿ ಇತರ ಸಾರ್ಥಕ ರಚನೆಗಳಿಂದ ಓದುಗನನ್ನೊಯ್ದು ಪರಿಜುಗಳಿಂದ ಒಮ್ಮೆಲೇ ಬೀಳಿಸಿಬಿಡುತ್ತದೆ. ಕ್ಲಿಂಟನ್ ಹೋಳಿ ಆಡುತ್ತಾರೆ ತೀರ ಸರಳ ರಚನೆಯಾಗಿದ್ದು ತನ್ನೊಳಗೆ ಯಾವ ಸಂಕೀರ್ಣತೆಯನ್ನೂ ಬೆಳೆಸಿ ಕೊಳ್ಳದಿರುವುದೂ ಸಂಕಲನದಿಂದ ದೂರ ಉಳಿಯ ಬೇಕಿದ್ದರ ಕಾರಣ.

'ಡಿ.ಆರ್ ಸ್ಮೃತಿ', 'ಕೃಷ್ಣಾಜಿಯ ಭಾಗವತ', 'ಜಿ.ಬಿ. ಸ್ಮೃತಿ'– ಕವಿ ತನ್ನ ಮೇಲೆ ಪ್ರಭಾವಿಸಿದವರ ಮೇಲೆ ಕೊಟ್ಟ ಟಿಪ್ಪಣಿಗಳು. ಝುಂಜರವಾಡರ ಕಾವ್ಯ ಕುಶಲತೆ ಸೂಕ್ಷ್ಮವಾಗಿ ಗಂಭೀರವಾಗಿ, ಆಳವಾಗಿ ಕಲೆಯ ನೆಲೆಯನ್ನೇ ಬಗೆಯ ಬಲ್ಲದೆಂಬುದನ್ನು ಇಲ್ಲಿನ ಕವಿತೆಗಳು ಸ್ಪಷ್ಟಪಡಿಸುತ್ತಲೇ ಅಡಿಗರ ನಂತರದ ಕನ್ನಡ ಕಾವ್ಯ–ಬಂಡಾಯದ ನೇರಧಾಳಿಯಿಂದ ತಪ್ಪಿಸಿಕೊಂಡೂ ತಮ್ಮ ಪಾಡಿಗೇ ತಾವು ಬರೆಯುತ್ತಲೇ ಇರುವವರು ಕಂಡುಕೊಳ್ಳುತ್ತಿರುವ ಹೊಸ ದಿಕ್ಕನ್ನೂ, ಸ್ಪಷ್ಟದಾರಿಯನ್ನೂ ಗುರ್ತಿಸಿದೆ.



ಮದರ್ ತರೇಸಾ ಎಂ.ಎಫ್.ಹುಸೇನ್‌ರ ಕೃತಿ

ಭಾವ-ಬುದ್ಧಿಯ ಸಮ್ಯಕ್ ನೆಲೆ

ಆನಂದಝುಂಜಡವಾರ ಕಾವ್ಯ

– ಬಾಲಸುಬ್ರಹ್ಮಣ್ಯ ಕಂಜರ್ಪಣೆ

ಕನ್ನಡ ನವ್ಯೋತ್ತರರಲ್ಲಿ ಚಳವಳಿ ಪ್ರೇರಿತ / ಮುಖೇನ ಪ್ರಕಾಶಗೊಂಡ ಕವಿಗಳಷ್ಟು ಗಮನವನ್ನು ಉಳಿದವರು ಸೆಳೆಯಲಿಲ್ಲವೆನ್ನಿಸುತ್ತದೆ. ಕಳೆದ ಸುಮಾರು ಮೂರು ದಶಕಗಳಲ್ಲಿ ಈ ಕಾವು ಇಳಿದು ಬೇಸಗೆಯಲ್ಲೂ ಬತ್ತದ ಒರತೆಯಂತಿರುವ ಪರಿವಿನ ಜುಳು ಜುಳು ನಿನಾದಕ್ಕೆ ಅವಕಾಶವಾಗುತ್ತಿದೆ ಯೆನ್ನುವುದು ಕಾವ್ಯಾಸಕ್ತರಿಗೆ ಸಮಾಧಾನ ತಂದೀತು.

ಇನ್ನೊಂದೆಡೆ ಕಾವ್ಯೋದ್ದೇಶಕ್ಕಿಂತ ಹೊರತಾದ ಕಾರಣಗಳನ್ನಿಟ್ಟುಕೊಂಡು ಏನಕೇನ ಪ್ರಕಾರೇಣ ಪ್ರಸಿದ್ಧರಾಗಲು ಹೂಡುವ ತಂತ್ರಕ್ಕೆ ಕಾವ್ಯವೂ ಬಲಿಯಾಗುತ್ತಿರುವ ವಿಷಾದಕರ ಬೆಳವಣಿಗೆಗಳನ್ನೆ ದುರಿಸುವುದು ಕವಿಯ ಮತ್ತು ಕಾವ್ಯದ ಸವಾಲೂ ಆಗುತ್ತಿದೆ. ಜೊತೆಗೆ ಒಳ್ಳೆಯ ಕಾವ್ಯ ರಚನೆಯನ್ನು ಮಾಡಿದ ಹಿರಿಯ ಕವಿಗಳ ನಡುವೆ ತನ್ನದೇ ಛಾಪನ್ನು ಮೂಡಿಸಲು ಮಾಡಬೇಕಾದ ಯತ್ನದ ಸವಾಲು ಪ್ರಾಮಾಣಿಕ ಕವಿಯದ್ದಾಗಿದೆ. ಏನು ಬರೆಯಲಿ ಎಂಬುದು ಕವಿಗೆ ಸಮಸ್ಯೆಯಾಗದು. ಹೇಗೆ ಬರೆಯಲಿ ಎಂಬುದು ಜಾಗ್ರತ ಕವಿಯ ಎಚ್ಚರದ ಸೂಚನೆಯಾಗುತ್ತದೆ. (ಯಾಕೆ ಬರೆಯಲಿ ಎಂಬುವನು ಕವಿಯೇ ಆಗಲಾರ).

ಕಾವ್ಯವನ್ನು ಗಂಭೀರವಾಗಿ ಕಾಣುವುದನ್ನು ಮತ್ತು ಪ್ರಜ್ಞಾಪೂರ್ವಕವಾಗಿ (ಅಂದರೆ ಜಳ್ಳು ಬಿತ್ತುವುದನ್ನು ತಡೆಯುತ್ತ) ಕಾವ್ಯ ರಚನೆಯಲ್ಲಿ ತೊಡಗಿಕೊಳ್ಳುವುದನ್ನು ಕಳೆದ ಕೆಲವು ದಶಕಗಳಲ್ಲಿ ಕೆಲವೇ ಮಂದಿಯಾದರೂ ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ. ಆನಂದ ಝುಂಜಡವಾಡರು ಈ ವರ್ಗದ ಕವಿ ಎಂದು ಹೇಳುವುದು ಅಭಿಮಾನದ ಸಂಗತಿ. ಎಸ್. ಮಂಜುನಾಥ್, ಜಿ.ಕೆ. ರವೀಂದ್ರ ಕುಮಾರ್ ಹೀಗೆ ಹೆಸರಿಸಬಹುದಾದ ಇತರರು. ಈ ಕೆಲವು ಕವಿಗಳನ್ನು ಒಟ್ಟಾರೆ ಸೈದ್ಧಾಂತಿಕವಾಗಿ ವಿವಿಧ ನೆಲೆಗಳಲ್ಲಿ ವಿವೇಚಿಸಬಹುದಾದರೂ ಅದರಿಂದಾಗುವ ತೊಂದರೆಯೆಂದರೆ ಒಬ್ಬೊಬ್ಬರದ್ದೇ ಆದ ಹಾದಿ ನಿಚ್ಚಳವಾಗಿ ಕಾಣದಿರುವುದು. ಸರಳ-ಸಂಕೀರ್ಣ, ಸಾಮಾಜಿಕ-ಅನುಭಾವಿಕ / ಆಂತರಂಗಿಕ, ಪದಲಾಲಿತ್ಯ ಭಾಷಾ ಎಚ್ಚರ-ರೂಪಕ/ ಕಾಣ್ಕೆ ಹೀಗೆ ಬೇರೆ, ಬೇರೆ ಅಂಶಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಓದುಗನ ವೈಯಕ್ತಿಕ ಇಷ್ಟಾನಿಷ್ಟಗಳು ಈ ನಿಟ್ಟಿನಲ್ಲಿ ಕಾಣಬಹುದು.

ಆನಂದ ಝುಂಜಡವಾಡರ ಕಾವ್ಯದ ವೈಶಿಷ್ಟಗಳೇ ಅವರ ಕಾವ್ಯ ಯಾಕೆ ಇಷ್ಟವಾಗುತ್ತದೆ ಎಂಬುದಕ್ಕೆ ನೆಲೆಯಾಗಬಹುದು. 'ಪದಗಳ ಪರಿಧಿಯಲ್ಲಿ' 'ಖನನೋದ್ಯಮ', 'ಎಲ್ಲಿದ್ದಾನೆ ಮನುಷ್ಯ', 'ಶಬ್ದ ಪ್ರಸಂಗ', ಮತ್ತು 'ದಿಂಡಿ ಮತ್ತು ದಾಂಡಿ' ಈ ಐದು ಕವನ ಸಂಕಲನಗಳ ಮೂಲಕ ಕಳೆದ ಸುಮಾರು ಮೂರು ದಶಕಗಳಿಂದ ಆನಂದರು ಪರಿಚಿತರು. ಅವರ ಪದ್ಯಗಳ ಪದಗಳ ಮೇಲೆ ಸರ್ಕಸ್ಸು ಹೂಡುತ್ತಾ ಹೇಳುವುದಾದರೆ ಅವರು ಒಂದು ಕಾವ್ಯ ಯಾತ್ರೆ ಮಾಡುತ್ತ ಪರಿಧಿಯಿಂದ ಕೇಂದ್ರಕ್ಕೆ ಚಲಿಸುತ್ತಾರೆ. ಹಾದಿ ವಿಚಲಿತವಾಗದಂತಹ ಅಪೂರ್ವ ಎಚ್ಚರವನ್ನು ಪ್ರದರ್ಶಿಸಿದ್ದಾರೆ. 'ಸತ್ಯವನ್ನು ಶಬ್ದಗಳಲ್ಲಿ ಹಿಡಿಯಲಾಗುವುದಿಲ್ಲ, ಶಬ್ದಗಳಲ್ಲಿ ಹಿಡಿದಿದ್ದು ಸತ್ಯವಲ್ಲ' ಎಂಬ ತಾವೋ ಉಕ್ತಿಯನ್ನು ಅಕ್ಷರಶಃ ಅನುಭವಿಸುವವರಂತೆ ಆನಂದ ಬರೆಯುತ್ತಾರೆಂಬುದಕ್ಕೆ ಮುಂದೆ ನಿದರ್ಶನಗಳನ್ನು ಕಾಣಬಹುದು.

ಈಗಾಗಲೇ ಕೆಲವು ವಿಮರ್ಶಕರಾದರೂ ಆನಂದರ ಕಾವ್ಯದ ಕುರಿತು ಚರ್ಚಿಸಿದ್ದಾರೆ. ಈ ಚರ್ಚೆ ಸೈದ್ಧಾಂತಿಕ ಒಲವಿನ ಆಧಾರದಲ್ಲಿ ನಡೆದಷ್ಟೆ ಶುದ್ಧ ಕಾವ್ಯ ಶಿಲ್ಪದ ಆಧಾರದಲ್ಲಿ ನಡೆದಿದೆಯೆನ್ನುವುದು ಖುಷಿ ಕೊಡುತ್ತದೆ. ಉದಾಹರಣೆಗೆ ಎಚ್. ಎಸ್. ರಾಘವೇಂದ್ರರಾವ್ ಅವರು ಆನಂದರ ಕಾವ್ಯದ

ವಿಶಿಷ್ಟ ಧ್ವನಿಯನ್ನು ಗುರುತಿಸುತ್ತಲೇ ಅವರದು ಮೇಲು ಮೇಲಿನ ಒಡನಾಟದಿಂದ ಓದುಗನಿಗೆ ದಕ್ಕದ ಸಂಕೀರ್ಣ ಕವಿತೆ ಎಂಬ ಅಭಿಪ್ರಾಯವನ್ನು ತಳೆಯುತ್ತಾರೆ. ಇವನ್ನು ಪರಸ್ಪರ ಪೂರಕವೆಂಬಂತೆ ಕಂಡಾಗ ಮಾತ್ರ ಆನಂದರ ಕಾವ್ಯದ ಸ್ಪಷ್ಟ ಕಲ್ಪನೆ ಎದುರಾದೀತು.

ಮೇಲುನೋಟಕ್ಕೆ ಕಾಣುವ ಒಂದು ಲಕ್ಷಣದಿಂದ ಆನಂದರ ಕಾವ್ಯದ ವೈಶಿಷ್ಟ್ಯವನ್ನೇ ಗಮನಿಸಬಹುದು. ಒಟ್ಟು ಕನ್ನಡಕ್ಕೆ ಒಗ್ಗುವ, ಗ್ರಾಂಥಿಕ ಎನ್ನಬಹುದಾದ ಭಾಷೆಯನ್ನು ಅವರು ತಮ್ಮ ಅನೇಕ ಕವನಗಳಲ್ಲಿ ಉಪಯೋಗಿಸಿದರೆ, ಇನ್ನುಳಿದ ಕವನಗಳಲ್ಲಿ ತಮ್ಮ ಪ್ರಾದೇಶಿಕ ಭಾಷೆಯನ್ನುಪಯೋಗಿಸುತ್ತಾರೆ. ತೀ.ನಂ.ಶ್ರೀ. ಯವರು ಬೇಂದ್ರೆ ಕಾವ್ಯದ ಬಗ್ಗೆ ಬರೆಯುತ್ತ ಇಬ್ಬರು ವ್ಯಕ್ತಿಗಳು ಒಂದೇ ಹೆಸರಿನಲ್ಲಿ ಕಾವ್ಯ ಬರೆಯುತ್ತಿರುವಂತಿದೆ ಎಂದು ಹೇಳಿದ್ದರು. ಆನಂದರು ತಮ್ಮ ಮೊದಲ ಕವನ ಸಂಕಲನದ (ಪದಗಳ ಪರಿಧಿಯಲ್ಲಿ) ನಂತರ ಈ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ.

ಎರಡನೆಯದಾಗಿ ನವ್ಯೋತ್ತರರಿಗೆ ಅನಿವಾರ್ಯವಾಗಬಹುದಾದಷ್ಟೂ ಪ್ರಭಾವವನ್ನು ಹೇರಿದ ಇಪ್ಪತ್ತನೆಯ ಶತಮಾನದ ಇಬ್ಬರು ಪ್ರಮುಖರು ಬೇಂದ್ರೆ ಮತ್ತು ಅಡಿಗ.ಇವರ ಕಾವ್ಯ ಕಸುವುಗಾರಿಕೆಯನ್ನು ಕಸಬುಗಾರಿಕೆಯನ್ನು ಅನುಭವಿಸುತ್ತ ಅದರಿಂದ ತಪ್ಪಿಸಿಕೊಳ್ಳುವ ಯತ್ನವನ್ನು ಆನಂದರ ಕಾವ್ಯದಲ್ಲಿ ಯಥೇಚ್ಛವಾಗಿ ಕಾಣಬಹುದು. ಭಾಷೆಯನ್ನು ಅನುಭವವನ್ನು ಬಿಗಿಯಾಗಿ ಬಿಗುವಾಗಿ ನೀಡುವ ಈ ಸಾಲುಗಳನ್ನು ಗಮನಿಸಬಹುದು.

'ಶಬ್ದಾತೀತವಾಗುವವರೆಗೆ ಶಬ್ದಗಳು ಬೆನ್ನತ್ತುವುದೇ ಹೀಗೆ'
(ಕವನ 'ಹೀಗೆ', ಸಂಕಲನ, 'ಶಬ್ದ ಪ್ರಸಂಗ')
'ಭವದಾಚೆಗೆ ಟೊಂಗೆಗಳು' ಕೈ ಎತ್ತಿ ಪ್ರಾರ್ಥಿಸುತ್ತವೆ.
(ಕವನ: ಅನುಭವಗಳು, ಸಂಕಲನ ಶಬ್ದ ಪ್ರಸಂಗ)
'ಕೊನೆಗೂ ನಾವೂ ಬೆಳದಿಂಗಳೆಂದು ಭ್ರಮಿಸಿದ್ದು, ಪ್ರಚಂಡ/
ಬಿಸಿಲಿನ ಮತ್ತೊಂದು ರೂಪವೇ, ಯಾರೂ ಈ ಸತ್ಯ ಮರೆಯದಿರಲಿ'
'ನಮ್ಮ ಪ್ರೀತಿಗೆ ಪೇಟೆಯ ಧಾರಣೆ ಮತ್ತು ತಕ್ಕಡಿಗಳ ಜೊತೆಗೆ
ಸ್ಪರ್ಧೆಯಿಲ್ಲ. ಯಾವ ಅಪ್ಸರೆಯೂ ನಮ್ಮ ಏಕಾಂತವನ್ನು ಕೆಣಕದಿರಲಿ'
(ಕವನ : ಏಕಾಂತ, ಸಂಕಲನ : ದಿಂಡಿ ಮತ್ತು ದಾಂಡಿ)
ಅಡಿಗರನ್ನು ದಟ್ಟವಾಗಿ ನೆನಪಿಸುವ ಈ ಕೆಳಗಿನ ಸಾಲುಗಳನ್ನು ಅನುಸರಿಸಿಹೋದರೆ–
" . . .ಎಲ್ಲೋ ಒಂದು ದೇಶಿ ಒರತೆ, ಅಲ್ಲಾದರೂ
ತಿಳಿನೀರು ಎಷ್ಟಿದೆ? ತುಂಬಿ ಹರಿಯದ ಪರಂಪರೆ ಹೊಳೆ–ಹಳ್ಳಗಳಲ್ಲಿ
ಹೊಸ ವಾಸ್ತವದ ವಾಸ್ತು–ರಚನೆಗೆ, ಹಸನಾದ ಹೊಸ ಉಸುಕು
ಸಿಗುವುದಾದರೂ ಎಲ್ಲಿ ? ಸಾಪು ಎಳೆಯುವ ಸಿದ್ಧಾಂತಗಳ
ತೇಪೆ ಅಂತರಂಗದ ಅನಾದಿ ಬಿರುಕುಗಳ ಮುಚ್ಚಿತೆಷ್ಟು ?
ಸಮಾಜವಾದಿ ಕೃತಿಯ ಕಾಂಪೌಂಡ ಮೇಲೆಲ್ಲ ಚೂಪಾದ
ಚೂರುಗಳ ನೆಟ್ಟಿರುವಾಗ, ಸರ್ವೋದಯದ ಬೆಳದಿಂಗಳು ಹರಿದು ಒಳಬರುವು ದಾದರೂ ಹೇಗೆ?...'

ಆನಂದರು ಮಾತ್ರವಲ್ಲ ನವ್ಯ –ನವ್ಯೋತ್ತರರ ಅನೇಕರು ಇಷ್ಟು ಯಶಸ್ವಿಯಾಗಿ ಬಿಗಿ ಬಂಧವನ್ನು ಕಾಯ್ದುಕೊಂಡಿರಲಾರರೆಂದು ಅನ್ನಿಸುತ್ತದೆ. ಆದರೆ ಆನಂದರ ಸ್ವಂತಿಕೆಯಿರುವುದು ಈ ಹೋಲಿಕೆಯ ಢಾಳನ್ನು ಮೀರುವ ಕೆಲವು ಕ್ಷಣಗಳಲ್ಲಿ , ಸಾಲುಗಳಲ್ಲಿ :

1. 'ಕೇಸರಿ ನಿಶಾನೆಗಳ ಹೊಟ್ಟೆಯಲ್ಲಿ ಕೇಬಲ್ ಸಂಜ್ಞೆಗಳು,
ಗಗನಚುಂಬಿಗಳ ಹೊಟ್ಟೆಯಲ್ಲಿ ಝೋಪಡ ಪಟ್ಟಿಗಳು
ಹುಟ್ಟಿದಾದರೂ ಹೇಗೆ?
ಹುಟ್ಟಾ ಬಂಜೆ, ಪ್ರಸವಶಾಸ್ತ್ರ ಪರಂಗೀತಜ್ಞೆಯ
ಶುಭ್ರಭಾಷೆಯ ಮೇಲೆ ಒಂದು ಹನಿ ಕಲೆಯೂ ಇಲ್ಲ.'
(ಕವನ : ಯುಗಧರ್ಮಿ, ಸಂಕಲನ : ದಿಂಡಿ ಮತ್ತು ದಾಂಡಿ)

2. ಅರುಣೋರಣೀಯನ ಅರಣ್ಯಕದಲೂ
ಅಣ್ವಸ್ತ್ರದ ಕಿಡಿ ಸಿಡಿಯುತಿದೆ
ಸಣ್ಣ ಕಣ್ಣುಗಳು ಸಹಸ್ರ ಸೂರ್ಯರ
ಉರಿಯಲಿ ಸುಡುವುದ ಸುಖಿಸುತಿದೆ
(ಕವನ : ಸುವರ್ಣ ಗಾಥೆ, ಸಂಕಲನ: ದಿಂಡಿ ಮತ್ತು ದಾಂಡಿ)

ಬೇಂದ್ರೆಯವರ ಅನುಭವಗಳನ್ನು ದರ್ಶಿಸುವ ರೀತಿ ಗಾರುಡಿಗನ ರೀತಿಯದ್ದೇ. ಶ್ಲೇಷೆಯಾಗಿರುವ 'ಬೆಳಗು' ಕವನದ ರೂಪಕದಿಂದ ಆರಂಭಗೊಂಡು 'ನಾಕು ತಂತಿ'ಯ ವರೆಗೂ ಬೇಂದ್ರೆ ಭಾಷೆಯ ಸಲಿಲತೆಯೊಂದಿಗೆ ಏಕಾತ್ಮತೆಯನ್ನು ಸಾಧಿಸಿದ ರೀತಿ ಅಪೂರ್ವ. ಇದನ್ನು ಮೆಚ್ಚುವವರೆಲ್ಲ ಅಸೂಯೆಪಡುವಷ್ಟು ವಿಶಿಷ್ಟ ಅವರ ಶೈಲಿ. ಬೇಂದ್ರೆಯವರನ್ನು ಅನುಸರಿಸ ಹೋದವರೆಲ್ಲ ಅವರನ್ನು ಅನುಕರಿಸಿ ಮುಕ್ತರಾದರು. ಬೇಂದ್ರೆಯವರ ಶ್ರೇಷ್ಠತೆಯೊಂದಿಗೆ ಮೌಲಿಕತೆಯನ್ನು ಪಡೆಯಬಲ್ಲ ಕೆಲವಾದರೂ ಕವನಗಳನ್ನು ಆನಂದರು ಬರೆದಿದ್ದಾರೆನ್ನುವುದಕ್ಕೆ ಅಡ್ಡಿಯಿಲ್ಲ. ಆನಂದರ ವೈಯಕ್ತಿಕ ವ್ಯಕ್ತಿವಿಶಿಷ್ಟ ಧ್ವನಿಯನ್ನು ಗಮನದಲ್ಲಿಟ್ಟುಕೊಂಡೇ ಈ ಮಾತುಗಳನ್ನು ಬರೆಯುತ್ತಿದ್ದೇನೆ. ಕೆಲವು ಉದಾಹರಣೆಗಳೊಂದಿಗೆ ಈ ಅಂಶಗಳನ್ನು ಶೋಧಿಸಬಹುದು.

1. ಬುದ್ಧನಿರಲಿ, ಭವಬದ್ಧನಿರಲಿ, ಮುದ್ದಿಸುವ ಮೌನದೆಸಳೆ,
ಹೃದ್ಯವಿರಲಿ, ಬರಿ ಗದ್ಯವಿರಲಿ, ಪದ್ಯೆಯಲಿ ವೇದ್ಯವಾಗುವವಳೆ
ಹಬ್ಬು ಹಬ್ಬಿನಲಿ ತಬ್ಬಿಕೊಳುತ ಸವಿ ಶಬ್ದವಾಗುವವಳೆ
ಪಕಳೆ–ಕೋಟೆಯಲಿ ಜೀವನದುಂಬಿ ಸೆರೆಹಾಕಿ ಆಳುವವಳೆ

ಪ್ರಾಚೀನವೆಂದರೂ ಆಚೆ ಈಚೆ ಚಾಚಿರುವ ಸೂಚ್ಯ–ವಾಚಕವೆ
ರುಚಿಸಿದಂತೆ ಆ ಅನಿರ್ವಚನ ಉಣಿಸಿರುವ ಪ್ರಾಣ– ವಾಚಕವೇ
ಅಭಂಗನಾದದಲಿ ಮಣ್ಣ–ಬಣ್ಣ–ಕಿರುಗೆಜ್ಜೆಗೀವ ಸ್ವರವೆ
ಹೀಚು–ಹೂವು–ಕಸುಗಾಯಿ– ಹಣ್ಣು, ರಂಗಕ್ಕೆ ತರುವ ಮರವೆ.
(ಕವನ : ಅರಿವು–ಇರುವು ಸಂಕಲನ : ದಿಂಡಿ ಮತ್ತು ದಾಂಡಿ)

2. ಕಾಡುವ ಪ್ರಶ್ನೆ ಒಂದೆ . ದೊಡ್ಡ ಸಂಬಳಕ್ಕೆ ಸಣ್ಣ ಸಹಿಮಾಡುವ ಶಾಯಿಯಿಂದಲೇ ಸಮಾಜವಾದೀ ಕವಿತೆ ಬರೆಯುವದ್ದೇಗೆಂದು ಏಕೆ ನಿನಗೆ ನೀನೆ ಒಮ್ಮೆಯೂ ಕೇಳಲಿಲ್ಲ.

ಶಬ್ದದ ಹೂಗಳನ್ನು ಅರ್ಥದ ಸೂಜಿಯಲ್ಲೇ ಪೋಣಿಸಬೇಕಾಗುತ್ತದೆ. ಸರಿಯೇ.
ಸೆಳೆದ ಸೆರಗು ಯಾಕೆ ಧ್ವನಿ-ವಸನವನು ಅಕ್ಷಯವಾಗಿ ಬೆಳೆಸಲಿಲ್ಲ
'ಈಗ ನಾವೆಲ್ಲ ಕಾಗದ -ಪೆನ್ನು ಬದಿಗಿಟ್ಟು ಬರೆಯಬೇಕು. ಈ ಬೇಸಿಗೆಯಲ್ಲಿ ಒಂದು ಪುಟ್ಟ
ತಾಯಿ ಬೇರಿಗೆ ಬೊಗಸೆ ನೀರುಣಿಸುವುದು. ಕವಿತೆ ಬರೆಯುವುದಕ್ಕಿಂತ ಯಾಕೆ ಮುಖ್ಯವಲ್ಲ ?'
(ಕವನ : ಕೇಳಲಿಲ್ಲ, ಸಂಕಲನ: ದಿಂಡಿ ಮತ್ತು ದಾಂಡಿ)

ಈ ಪದ್ಯಗಳಲ್ಲಿ ಕವಿ ನೀಡುವ ಅನುಭವ ಎಷ್ಟು ಗಾಢವೋ ದಟ್ಟವೋ ಅದಕ್ಕೆ ಮಾಧ್ಯಮವಾದ ಕವಿ ಸಮಯ ಮತ್ತು ಭಾಷೆಯೂ ಅಷ್ಟೇ ಆಪ್ತ ಚೇತೋಹಾರಿ. ಈ ಪದ್ಯಗಳನ್ನು ಹೂವಿನ ಸೌಂದರ್ಯವನ್ನು, ಪರಿಮಳವನ್ನು, ಅದು ನೀಡುವ ಜೀವನ ಪ್ರೀತಿಯನ್ನು ಅನುಭವಿಸುವಂತೆ ಅನುಭವಿಸಬೇಕಲ್ಲದೆ ಸೈದ್ಧಾಂತಿಕ ಗೊಂದಲಗಳಲ್ಲೋ. ಕಾವ್ಯರಚನೆಯ ಪರಿಕರಗಳ ಧಾತು ಪ್ರಕ್ರಿಯೆಗಳಲ್ಲೋ ಮುಳುಗಿ ಉಸಿರುಗಟ್ಟಿಕೊಳ್ಳುವುದರಿಂದಲ್ಲ.

'ಖನನೋದ್ಯಮ' ಸಂಕಲನ ಆನಂದರ ಕವಿತ್ವದ ಸಂಕ್ರಮಣ ಕಾಲವೆನ್ನುವುದಕ್ಕಿಂತಲೂ ಅವರ ಉಡ್ಡಯಣದ ಸ್ಪ್ರಿಂಗ್ ಬೋರ್ಡು ಎನ್ನಬಹುದು. ಇಲ್ಲಿ ಕವಿ ತನ್ನ ಸುತ್ತಲಿನ ಸಮಾಜವನ್ನು ತನ್ನ ಕಾಲವನ್ನು ಏಕಾಗ್ರಚಿತ್ತದಿಂದ ಗಮನಿಸುತ್ತಲೇ ತನ್ನ ಏಕಾಂತವನ್ನು ಸಾಮಾಜಿಕ ಬಹುಮುಖತೆಯೊಂದಿಗೆ ಶೃತಿಬದ್ಧವಾಗಿಸಲು ಯತ್ನಿಸಿದ್ದಾರೆ.

'ತನ್ನ ಕಳಕೊಂಡಿರುವ ಈ ಒಂಟಿ ಜೀವಕ್ಕೆ
ಬೇರೆಯಾರಿದ್ದಾರೆ ನಿಮ್ಮ ಹೊರತು ?
(ಕವನ : ಬಿನ್ನಹ , ಸಂಕಲನ : ಖನನೋದ್ಯಮ)

ಎಂಬ ಸಾಲುಗಳಲ್ಲಿ ಎಲ್ಲ ವೈರುಧ್ಯಗಳಲ್ಲಿ ವ್ಯತ್ಯಸ್ತತೆಗಳಲ್ಲೂ ಪೂರಕ ಪ್ರಮಾಣವನ್ನು ಆಪ್ತವಾಗಿ ಅನ್ವೇಷಿಸುವ ಸರಳತೆ ಮತ್ತು ಸತ್ಯವನ್ನು ಹೇಳಬೇಕೆಂಬ ನಿಷ್ಠುರತೆ ತ್ರಿವಿಕ್ರಮನಾಗಿ ನಿಂತಿವೆ. ಕವಿ ಬೆಳೆಯುವ ಎಲ್ಲ ಲಕ್ಷಣಗಳೂ ಇಲ್ಲೇ ಇದ್ದವು. ರೂಕ್ಷ ಅನುಭವಗಳಿಗೆ ಇಂದ್ರಿಯಗಳನ್ನೇ ತಕ್ಕೈಸುವ ಮನಸ್ಸು ಕವಿಯದ್ದು. ಜೊತೆಗೆ 'ಬದುಕಿನ ನೋವಿಗುತ್ತರವಲ್ಲ-ಕಲೆಯ ರೂಹು' (ಕವನ : 'ಬದುಕು ಮತ್ತು ಕಲೆ' ಸಂಕಲನ : ಖನನೋದ್ಯಮ) ಎಂಬ ಅತೀವ ಎಚ್ಚರ ಮತ್ತು ವಿನಯ.

ಈ ಎಚ್ಚರ ಮತ್ತು ವಿನಯಗಳೇ ಆನಂದರ ಅನಂತರದ ಸಂಕಲನಗಳ ಗುಣಗಳನ್ನು ಗೌರವ ಪೂರ್ವಕವಾಗಿ ಕಾಣುವಂತೆ ಮಾಡಿವೆ. ' ಎಲ್ಲಿದ್ದಾನೆ ಮನುಷ್ಯ' ಎಂಬ ಅವರ ಮೂರನೆಯ ಕವನ ಸಂಕಲನದಲ್ಲಿ ಈ ಹಿಂದೆ ಹೊಳೆದ ವ್ಯಕ್ತಿ -ಸಮಾಜದ ಮುಖಾಮುಖಿಯ ವಿಹಲ್ವತೆ ಪ್ರತ್ಯಕ್ಷವಾಗಿ ಸಾಕಾರಗೊಂಡಿದೆ.

'ಎಂಥ ದಟ್ಟಣೆಯಲ್ಲೂ ತನ್ನ ಪುಟ್ಟಡಿಗಳನ್ನೇ
ಆಧರಿಸಿ ತೆವಳುವವು ಕಣ್ಣು ಗೊಂಬೆ"
'ತರಗೆಲೆಗೆ ಬಿರುಗಾಳಿ ಬಿಟ್ಟನ್ಯಗತಿ ಇಲ್ಲ'
(ಕವನ : ಪೈಪೋಟಿ. ಸಂಕಲನ : ಎಲ್ಲಿದ್ದಾನೆ ಮನುಷ್ಯ)
ಇದೇ ರೀತಿಯ ಚಿಂತನೆ ವಿಕಾಸಗೊಳ್ಳುತ್ತಿರುವ ಕ್ರಮ ಹೀಗಿದೆ.
'ಥಳ ಥಳಿಸುವ ಚೂರಿ ಎಷ್ಟು ನಯವಾಗಿ ಸೀಳುತ್ತದೆಂದರೆ.

ಮೈಯ್ಯನ್ನು ಕತ್ತರಿಸಿಕೊಳ್ಳುವುದೇ ಮೂಕ ಪ್ರಾಣಿಗಳಿಗೆ
ಸುಖ ಎನಿಸುತ್ತದೆ'
'ಒಣಗಿಸಿ ಹದ ಮಾಡಿದ ಚರ್ಮವಂತೂ
ವಿಶಾಲ ವೇದಿಕೆಗೆ ಅಪ್ಯಾಯಮಾನ
ಮಾತಾಡಲು, ಮಾನವೀಯತೆ ಮತ್ತು ವಿಜ್ಞಾನ
ದ ಬಗೆಗೆ.'
(ಕವನ : ಕಸಾಯಿ– ಕಾವ್ಯ ಕಲೆ. ಸಂಕಲನ : ಎಲ್ಲಿದ್ದಾನೆ ಮನುಷ್ಯ)

'ಕಾಸಿದರೆ ಕರಗುವ ರೂಪಿಸಿದಂತೆ ಆಕಾರಗೊಳ್ಳುವ
ಕಬ್ಬಿಣ ಕೂಡ ಹದ ತಪ್ಪಿ ಹೊಡೆದರೆ ಒಡೆಯುತ್ತದೆ'
(ಕವನ : ಪುಟಪಾಕ, ಸಂಕಲನ : ಎಲ್ಲಿದ್ದಾನೆ ಮನುಷ್ಯ ?)

'ಮೂಡಿ– ಮುಳುಗುವ ನನ್ನೂರು– ನಾನು–ನನ್ನ ಜನ
ವಲಸೆ ಹೋಗುತ್ತಲೇ ಇರುತ್ತದೆ.
ಹೊರಗಿನಿಂದ ಒಳಗೆ , ಒಳಗಿನಿಂದ ಹೊರಗೆ
ಅನಾಥ ತೇಲುವ ತುಂಡು ಮಂತ್ರದಂಡವಾಗುವವರೆಗೆ'
(ಕವನ : ಮುಳುಗುತ್ತಲಿದೆ ನನ್ನೂರು, ಸಂಕಲನ : ಎಲ್ಲಿದ್ದಾನೆ ಮನುಷ್ಯ)

ಈ ಹೊತ್ತಿಗೆ ಆನಂದರು ಭಾಷೆಯನ್ನು ಭಿನ್ನರೂಪದಿಂದ ಉಪಯೋಗಿಸುವುದರ ಪರಿಣಾಮವನ್ನು ಅಭ್ಯಸಿಸಿರಬೇಕು. 1980ರಂದೀಚೆಗಿನ ಕವನಗಳಲ್ಲಷ್ಟೇ ಈ ಗ್ರಾಂಥಿಕ ಪ್ರಾದೇಶಿಕ ವೈವಿಧ್ಯ ಕವನದ ವಸ್ತುವನ್ನಲಂಬಿಸಿ ಪ್ರಯೋಗಗೊಂಡಿದೆ. ಇವನ್ನು ಅವರು 'ಶಬ್ದ ಪ್ರಸಂಗ' ಮತ್ತು 'ದಿಂಡಿ ಮತ್ತು ದಾಂಡಿ' ಸಂಕಲನಗಳಲ್ಲಿ ಯಶಸ್ವಿಯಾಗಿ ಅಭಿವ್ಯಕ್ತಿಸಿದ್ದಾರೆ. ರಾಘವೇಂದ್ರ ಪಾಟೀಲರು ' ಮಗೀ ಕೂಡುತಾನ. . .' ಕವಿತೆಯ ಕುರಿತು ಹೇಳುತ್ತ ಬೇಂದ್ರೆಯವರನ್ನು ನೆನಪಿಸಿದ್ದಾರೆ. ಪ್ರಾಯಃ ಒಂದು ಕವಿತೆಯನ್ನು ಓದಿದಾಗ ಆಗುವ ಅನುಭವಕ್ಕೂ ಅದನ್ನು ಕೇಳಿದಾಗ (ಕವಿಯಿಂದಲೇ ಕೇಳಿದಾಗ ?) ಆಗುವ ಅನುಭವಕ್ಕೂ ಅಗಾಧ ವ್ಯತ್ಯಾಸವಿದೆ.ಭಾಷೆಯ ತೊಡಕಿನಿಂದಾಗಿ ಈ ಕವನ ನನ್ನ ಅನುಭವ ಕಕ್ಷೆಯೊಳಗೆ ಗೂಡುಕಟ್ಟಲಿಲ್ಲವಾದ್ದರಿಂದ ಅದರ ವಿಶ್ಲೇಷಣೆಯ ಗೋಜಿಗೆ ಪ್ರತ್ಯೇಕವಾಗಿ ಇನ್ನೊಮ್ಮೆ ಪ್ರಯತ್ನಿಸುತ್ತೇನೆ. ಈ ಪ್ರಬಂಧದೊಳಗಲ್ಲ. 'ಗಾಳಿ ಪಟಾ' ಎಂಬ ಕವನದಲ್ಲಿ ಕವಿ ಔನ್ನತ್ಯಕ್ಕೇರುವ ಮೆಟ್ಟಲುಗಳ ಕಷ್ಟವನ್ನು ಗಾಳಿಪಟದ ರೂಪಕದೊಂದಿಗೆ ವಿವರಿಸುತ್ತಾರೆ.

'ಪಟಾ ಹಾರೂದೂ, ಮಾಡಿದಾಂವನ ಕೈಯಾಗಿಲ್ಲ
ಗಾಳಿಜೋಡಿ ಗುದ್ದಾಟ
ಯಾರಿಗೇ ಬಿಟ್ಟೈದ' ಎನ್ನುತ್ತ ಕೊನೆಗೆ

ಪಟಾ ಮಾಡಲಿಕ್ಕೆ ಬರ್ತದs ಮಾಡು ಹಾರಸು.
ಗಾಳಿಗೆ ತಾನೆ ಬಿಚಿಗೋತ ಹೋಗತದ ಧಾರಾ.

ಇಷ್ವಾಕ ಮಾರೀ ಸಪ್ಪಗ ಮಾಡೀ?
ಮ್ಯಾಲ ಆದ ಒಂದೊಂದು ಹಾಳಿಪಟಕ್ಕೂ ಒಂದೊಂದು ಮುಗಿಲು ತಯಾರಾ
ಎಂಬ ಇತ್ಯಾತ್ಮಕ ಆಶಯ ದೊಂದಿದೆ ಕವನವನ್ನು ಮುಗಿಸುತ್ತಾರೆ.

ಹೀಗೆಂದರೆ ಕವಿ ನೈತಿಕತೆ, ಆದರ್ಶ ಇವುಗಳಿಗೆ ಒತ್ತು ನೀಡುತ್ತಾರೆಂದಲ್ಲ. ಬದುಕನ್ನೇ ಹೇಗಿದೆಯೋ ಹಾಗೆ ಕಾಣುವುದು ಮತ್ತು ಅದರಿಂದ ಒಂದು ದರ್ಶನವನ್ನು ಸಂದೇಶವನ್ನ ಪಡೆಯುವುದು ಹಾಗೂ ಈ ದರ್ಶನ ಸಂದೇಶವನ್ನ ಕಾವ್ಯದ ಅನುಭವ– ಅನುಭಾವದ ಮೂಲಕ ಮತ್ತೆ ಸಮಾಜಕ್ಕೆ –ಬದುಕಿಗೆ– ಕಾಲಕ್ಕೆ ಮರಳಿಸುವುದು ಕವಿಯ ಜವಾಬ್ದಾರಿ. ಈ ಜವಾಬ್ದಾರಿಯತ್ತ ಆನಂದರ ದೃಷ್ಟಿಯಿದೆ. ಉಳಿದ ಮೌಲ್ಯಗಳಾದ ಜ್ಞಾನ ಹಾಗೂ ಜಗತ್ತಿಗೆ ತಾನೇನನ್ನೋ ಹೇಳಬೇಕೆನಿಸಿದೆಯೆಂಬ ದ್ರಷ್ಟಾರ ಧಾಷ್ಟ್ಯ ಈ ಕವಿಗಿಲ್ಲ. ಆದ್ದರಿಂದಲೇ ಕವಿ

'ಅನುಭವದ ವಧುವಿಗೆ ತುಂಬಾ ನಾಚಿಕೆ,
ಸ್ವಲ್ಪ ಸಣ್ಣದಾಗಿಸು ನಿನ್ನ ಜ್ಞಾನ ದೀಪ'

(ಕವನ : ಹಬ್ಬ–2, ಸಂಕಲನ: ದಿಂಡಿ ಮತ್ತು ದಾಂಡಿ) ಎಂದು ಹೇಳುತ್ತ ಅಲ್ಲಮನ ಶಬ್ದದ ಲಜ್ಜೆಯನ್ನು ಧ್ವನಿಸುತ್ತಾರೆ.

ಅಕಡೆಮಿಕ್ ಗಿಮಿಕ್ಕುಗಳಲ್ಲಿ ಆನಂದರಿಗೆ ಅಷ್ಟಾಗಿ ವಿಶ್ವಾಸವಿದ್ದಂತಿಲ್ಲ. ಈ ಕುರಿತು ನಾನು ಹೇಳುವ ನಿರ್ಣಯ ಅವಸರದ್ದಿರಬಹುದು. ಆದರೂ ಈ ಸಾಲುಗಳನ್ನು ಗಮನಿಸಬೇಕೆಂದೆನ್ನಿಸಿದೆ.

'ಪಶ್ಚಿಮದ ಸಭಾಂಗಣದಲ್ಲಿ: ದೇಶಿ–ಸ್ಮೃತಿ'
'ಪ್ರಭುತ್ವ ಸಂಕೀರ್ಣ ವಾಗ್ದಾದ'

(ಕವನ: ಈಗ, ಸಂಕಲನ : ದಿಂಡಿ ಮತ್ತು ದಾಂಡಿ)

ಈ ಸಾಲುಗಳು ನೀಡುವ ಸೂಚನೆ ಸಾಲದೆಂದರೆ ಇದೇ ಕವನದ ನಂತರದ ಸಾಲುಗಳನ್ನೇ ಗಮನಿಸಬಹುದು.

'ಮೂರು ತಿಂಗಳ ಮೊಮ್ಮಗಳು ರಾತ್ರಿ ಕೆಮ್ಮಿದರೆ
ಕಾದಿಟ್ಟದ್ದೇನೆ, ನನ್ನವ್ವ ನನಗೆ ತೇದಿದ್ದ ಬೇರು'
'ಎಷ್ಟೊಂದು ವಸಂತಗಳ ಕಂಡೆ' ಎಂದುಕೊಂಡೆ. 'ಛೇ ಅಲ್ಲಲ್ಲ ಇಷ್ಟೊಂದು'
ವಸಂತಗಳೇ ನನ್ನ ಕಂಡುಂಡು ಅರಳಿದವು' ಎನ್ನಿಸುವ ವಯಸ್ಸು ನನಗೀಗ'

ಆನಂದರ ಕಾವ್ಯ ಕ್ರಮದ ಯಾತ್ರೆಯಲ್ಲಿ ಕವಿ ಒಳಗೂ ಇರುತ್ತಾನೆ. ಹೊರಗೂ ಇರುತ್ತಾನೆ. ದಿಂಡಿ ಈ ಯಾತ್ರೆಯ ಒಂದು ಮುಖವಾದರೆ , 'ದಾಂಡೀ' ಇನ್ನೊಂದು ಮುಖ. ದಿಂಡಿ ಭಾವದ ಭಕ್ತಿಯ, ಲಹರಿಯ ಅಂದರೆ ಏಕಾಗ್ರತೆ ಅಷ್ಟಾಗಿ ಅಗತ್ಯವಿಲ್ಲದ ಹಾದಿಯಾದರೆ, ದಾಂಡೀ ಸಾಮಾಜಿಕ ಜವಾಬ್ದಾರಿಯನ್ನೊಳಗೊಳ್ಳುವ ಬಹುಮುಖಿ ಪ್ರಜ್ಞೆಯ ಏಕಾಗ್ರ ಚಿತ್ತದ ಹಾದಿ. (ಚಂದ್ರಕಾಂತ ಕುಸನೂರರು 'ದಿಂಡಿ' ಎಂಬ ನಾಟಕವನ್ನು ಬರೆದಿದ್ದಾರೆ.) ಈ ಎರಡೂ ಹಾದಿಗಳ ಸಮ್ಮುಖಿ ಮುಖ ಆನಂದರದು. ಅವರ ದಿಂಡಿಯಲ್ಲಿ ದಾಂಡಿಯಿದೆ. ದಾಂಡಿಯಲ್ಲಿ ದಿಂಡಿಯಿದೆ. 'ಶಬ್ದ ಪ್ರಸಂಗ'ಸಂಕಲನದಲ್ಲಿ ಮತ್ತು ಅದರ ಮುಂದುವರಿದ ಭಾಗದಂತಿರುವ ದಿಂಡಿ ಮತ್ತು ದಾಂಡಿಯಲ್ಲಿ ಕಾವ್ಯದ ಕುರಿತ ಧ್ವನಿಪೂರ್ಣ ಕಾಳಜಿಯಿದೆ. ಪದ್ಯ ಬರೆಯುವ ಬಗ್ಗೆ ಕವಿಯ ಬಗ್ಗೆ ಇಷ್ಟೊಂದು ಕವನ ಬರೆದ ಸಮಕಾಲೀನ ಕವಿ ಬೇರೊಬ್ಬರಿದ್ದಾರೆಂದು ನನಗನ್ನಿಸಲಿಲ್ಲ. 'ಶಬ್ದಪ್ರಸಂಗ'ದ ಜೀವನ ಎಂಬ ಕವನದಲ್ಲಿ ಕವಿ ಮರೆತು

ಹೋಗುತಿರುವ ಕವಿ- ಕಾವಂತೆ ಸುಡುಬಿಸಿಲಲ್ಲಿ ಸಿಗರೇಟು ಸುಡುತ್ತಿರುವ ಕವಿ-ಪ್ರಕೃತಿಯಂತೆ. ಕೇಳಿ ಕೇಳಿ ಸಾಕಾದ ಬಂಡಾಯರವರ ವ್ಯಂಗ್ಯದಂತೆ. ಎಂದು ಬರೆಯುತ್ತಾರೆ. ಬೇಂದ್ರೆ ನಿಧನದ ಸುದ್ದಿ ಎಂಬ ಕವನದಲ್ಲಿ, 'ಬದಕ ಬಾಳಿ ಕವಿ ತಾ ಅಳತಾನ, ಉಳಿತಾನ ಎಂದಿಗೂ ಕಾಯಮಾ' ಎಂಮಹೇಳಿ ನಂತರ, ಮುಗಲಾಗ ಮಾಡಾ ಕವದರ ಹ್ಯಾಂಗ ಕಂಡಾನೋ ತಿಂಗಳ ಚಂದ್ರಾಮಾ ಎಂಬ ಸಂಶಯವನ್ನು ವ್ಯಕ್ತ ಪಡಿಸುತ್ತಾರೆ.

ಈ ಸಂಶಯ ಧನಾತ್ಮಕವಾದದ್ದು. ತಿಂಗಳ ಚಂದ್ರಮ ಮತ್ತೆ ಕಂಡಾನು ಎಂಬುದೇ ಈ ಸಾಲುಗಳ ಆಶಯವೆನ್ನಿಸುತ್ತದೆ.

ಇಂಥ ಅಂದರೆ ಕಾವ್ಯದ, ಕವಿಯ ಕುರಿತು ಭಾಷ್ಯವಾಗಬಲ್ಲಂತಹ ಹಲವು ರಚನೆಗಳು ಆನಂದರ 'ಶಬ್ದಪ್ರಸಂಗ' ಹಾಗೂ 'ದಿಂಡೀ ಮತ್ತು ದಾಂಡೀ' ಸಂಕಲನದಲ್ಲಿವೆ.

ಈ ಕಾಲದಲ್ಲಿ ಆನಂದರಷ್ಟು ಶಕ್ತವಾಗಿ ಮತ್ತು ಕಾವ್ಯನಿಷ್ಠೆಯಿಂದ ಬರೆಯುವವರು ಕೆಲವೇ ಜನರಿದ್ದಾರೆ. ಎಂಬ ನನ್ನ ಆರಂಭದ ಸೂತ್ರವಾಕ್ಯಗಳಿಗೆ ಸಮರ್ಥನೆಯೆಂದು ಇಷ್ಟನ್ನು ಹೇಳಿದ್ದೇನೆ. ಆನಂದರ ಕಾವ್ಯಗಂಗೆಯ ಮೂಲ ಅವರ ಬದುಕಿನೊಳಗೆ ಇರುವುದರಿಂದ ಅವರ ಶಕ್ತ ಕವನಗಳೆಲ್ಲ ಅನುಭವನಿಷ್ಠವಾಗಿವೆ. ಈ ಒಳಗನ್ನು ಒಳಗು ಮಾಡುವುದರ ಕಡೆಗೆ ಕಾವ್ಯಾಸಕ್ತಿ ಹರಿದರೆ ಆನಂದರ ಕವನಗಳು ಸಂಕೀರ್ಣ ಅನ್ನಿಸಲಾರವು. ಮುಖ್ಯವಾಗಿ ಓದುಗ ಈ ಕವನಗಳನ್ನು ಆಪ್ತವಾಗಿಯೇ ಪ್ರವೇಶಿಸಬೇಕು. ಮೇಲ್ನೋಟದ 'ಸಂಕೀರ್ಣತೆ'ಯೆಂದು ವಿಮರ್ಶಕರು ಗುರುತಿಸಿದ ಬೆರಳತುದಿ ದುಡಿದ ಕೈಗಳದ್ದು. ಅದು ತೋರಿಸುವ ಗುರಿ ಹೊಳೆವ ನಕ್ಷತ್ರದ್ದು. ಅನುಭವಗಳ ಸಮೃದ್ಧ ನೆಲಕ್ಕೂ ಅನಂತವಾದ ತ ಆಕಾಶಕ್ಕೂ ಕೊಂಡಿ ಬೆಸೆಯುವ ನೆಲದ ಕಾವ್ಯ ಆನಂದ ಝುಂಜರವಾಡರದ್ದು.

ಆನಂದರ ಕಾವ್ಯದ ಕೆಲವು ಪರಿಚಿತ ಮುಖಗಳ ಕಡೆಗೆ ನನ್ನ ದೃಷ್ಟಿ ಹಾಯಿಸಿದ್ದೇನೆ. ಓದುಗರ ಖನನೋದ್ಯಮದ ಬುದ್ಧಿಗೆ ಆನಂದರ ಕಾವ್ಯದ ಇನ್ನಷ್ಟು ಮುಖಗಳು ಕಂಡರೆ ಕನ್ನಡ ಕಾವ್ಯದ ಶ್ರೀಮಂತಿಕೆ ಹೆಚ್ಚಾದೀತು.



Fantasy ಬಿಮಲ್ ದಾಸ್ ಗುಪ್ತ

ನನ್ನ ಬರಹ ನನಗೇನು ಕೊಟ್ಟಿದೆ?



– ಆನಂದ ಝುಂಜರವಾಡ

"ಮುನ್ನ ಬಗೆಯಾಗಿ ನನ್ನ ಹಾಡನು ನೀನೆ ಹೆತ್ತಿ
ನನ್ನ ನಾಲಿಗೆ ನಿನ್ನ ಬರಿ ಸೂಲಗಿತ್ತಿ"

–ಬೇಂದ್ರೆ

'ನಿರ್ಮಿತಿ' ಎಂಬ ಶಬ್ದದ ಒಂದು ಅರ್ಥ 'ಸೃಷ್ಟಿ'ಯಾದರೆ, ಇನ್ನೊಂದರ್ಥ 'ಮಿತಿಇಲ್ಲದಿರುವಿಕೆ' ಎಂದೂ ಆಗಬಹುದು. 'ಭೂಮತ್ವ' ಮತ್ತು 'ಭಾವತ್ವ'ಗಳ ಕೂಡಲದಲ್ಲಿಯೇ ಸೃಜನಶೀಲತೆಯ ಮೂಲವಿದೆ. ಈ 'ಸೃಜನ ಸ್ಥಾವರ ಘಟಕ' ಜೀವಂತವಾಗಿರುವವರೆಗೆ, ಜೀವಂತವರುವಷ್ಟು ಪ್ರಮಾಣದ, 'ಕಾವ್ಯತ್ವ' ಅದರ ಶಾಬ್ದಿಕ ಯೋಜನೆಯಲ್ಲಿ ಹರಿಯುತ್ತಿರುತ್ತದೆ.

ಆದರೆ ಈ 'ಸೃಜನ ಸ್ಥಾವರ'ದ ಘಟಕ ಎಲ್ಲರಲ್ಲೂ ಇರುತ್ತದೆ ಎಂದೋ ಅಥವಾ ಒಂದೇ ಸ್ವರೂಪದಲ್ಲಿ ಇರುತ್ತದೆಂದೋ, ನಾವು ತಪ್ಪು ತಿಳಿಯಬಾರದು. ಕಾರಕೂನನೊಬ್ಬನ ಫಾಯಿಲ್ಲುಗಳ ವ್ಯವಸ್ಥಿತ ಯೋಜನಾ ಕ್ರಮವೇ 'ಸೃಜನ ಶೀಲ'ವಾಗಿರಬಹುದು. ಒಬ್ಬ ಕೂಲಿಕಾರ ಅಧ್ಯಾಪಕ ವೈದ್ಯ, ಅಭಿಯಂತ ಅಧಿಕಾರಿ, ಎಲ್ಲರೂ ತಮ್ಮ ತಮ್ಮ ಸ್ವಧರ್ಮದಲ್ಲಿಯೇ ತಮ್ಮ ತಮ್ಮ 'ಸೃಜನ ಸ್ಥಾವರದ' ಕ್ರಿಯಾಶೀಲತೆಯನ್ನು ಬಳಸಿಕೊಳ್ಳಬಹುದು. ಸೃಜನಶೀಲತೆಯ ಬಳಕೆಯಿಂದ ಬಳಕೆದಾರನ ಕರ್ಮ ಕೌಶಲ, ಯೋಗವಾಗುತ್ತದೆ ("ಯೋಗಂ ಕರ್ಮಸು ಕೌಶಲಮ್"). ಈ ಯೋಗದಿಂದ, ಸೃಜನಸ್ಥಾವರ ಘಟಕ ಮತ್ತೆ ಮತ್ತೆ ಆವಾಹಿತವಾಗುತ್ತದೆ. ಹೀಗೆ 'ನಿರ್ಮಿತ'ದಿಂದ 'ನಿರ್ಮಿತಿ', 'ನಿರ್ಮಿತಿ'ಯಿಂದ 'ನಿರ್ಮಿತ' ಕೊಡು – ಪಡೆಯಲ್ಲಿ ಬೆಳೆದು ಚರಿತ್ರೆಯನ್ನು ನಿರ್ಮಿಸುತ್ತದೆ.

ಅಂದರೆ ಒಂದು ಪದ್ಯ ಆವಿರ್ಭಾವವಾಗುವ ಪೂರ್ವದಲ್ಲಿನ ಕವಿ ಮನಸ್ಥಿತಿಗೂ ಆವಿರ್ಭಾವದ ನಂತರದ ಸ್ಥಿತಿಗೂ ಖಂಡಿತ ಸೂಕ್ಷ್ಮ ಅಂತರವಿರುತ್ತದೆ. ಭಾವ ತಿಳಿಯಾಗುವಿಕೆ ಸ್ತ್ರೈಣ ಸಮನಶೀಲತೆ ಸಹಜವಾಗುವಿಕೆ. ಹೊರ ರಾಜಕೀಯದ ಬಗ್ಗೆ ಕನಿಕರದ ಅಲಿಪ್ತತೆ, ತಾತ್ಕಾಲಿಕ ಒದಗುವ ಪರಿಣಾಮಗಳನ್ನು ಎದುರಿಸುವ ಸದೃಢತೆ ಇಂಥಾ ಕೆಲವು ಸಾಮಾನ್ಯ ಲಕ್ಷಣಗಳು, ಕವಿ ತನ್ನ 'ನಿರ್ಮಿತಿ'ಯಿಂದ ಪಡೆಯುವಂಥ ಲಕ್ಷಣಗಳಾಗಿವೆ.

ಒಂದರ್ಥದಲ್ಲಿ 'ನಿರ್ಮಿತ'ದ ಶಕ್ತಿಯ ಮಾಪಕವಾಗಿಯೇ 'ನಿರ್ಮಿತಿ'ಯ ಅಸ್ತಿತ್ವವಿರುತ್ತದೆ. 'ಬಾಗುವಿಕೆ' ಇಲ್ಲದೆ 'ಮಾಗುವಿಕೆ' ಇಲ್ಲವೆಂಬ ಸತ್ಯ, ಬಾಗುವಿಕೆಯ ಬಗೆಗೆ ಸಾಶಂಕಿತವಾದ ಆಧುನಿಕ ಜನಾಂಗಕ್ಕೆ ಅರ್ಥವಾಗುವುದು ಸದ್ಯಕ್ಕಂತೂ ಸಾಧ್ಯವಿಲ್ಲವೆಂದೇ ಹೇಳಬೇಕು. ಬರೀ ತಾತ್ವಿಕ ಚರ್ಚೆ, ಇನ್ನೊಂದು ಬಗೆಯ ರಾಜಕೀಯ ತಂತ್ರವಾಗಿ ಬಿಡಬಹುದು. ಅದಕ್ಕೆಂದೇ ಅದನ್ನು ಕೈ ಬಿಟ್ಟು ನಾಳಿನ ಜೂನ್ ತಿಂಗಳು ಐವತ್ತೊಂದು ವರ್ಷಗಳ ಬದುಕಿನ ಕಾಲಾವಧಿಯನ್ನು ಮುಗಿಸಿದ ನಾನು ನನ್ನ ಒಳ ಲೋಕವನ್ನೇ ಪ್ರವೇಶಿಸುವೆ.

***


ಬಾಗಿಲುಕೋಟೆಯ ಬಡ ವೈದಿಕ ಕುಟುಂಬದಲ್ಲಿ ಹುಟ್ಟಿ, ಬೆಳೆದ ನಾನು, ಮೊದಲಿನಿಂದಲೂ ಕಠಿಣವಾದ ಹಗಲು–ರಾತ್ರಿಗಳನ್ನು ಉಂಡವ. 'ಸ್ತ್ರೈಣ' ಮನೋಭಾವದ ಮೇಲೆ ಬಂದೊದಗಿದ, ಭಯಾವಹ ಅನುಭವಗಳ ವಿವರ ಚಿತ್ರಣ ಕೊಡಲು ಇಲ್ಲಿ ಅವಕಾಶವಿಲ್ಲ. ಆದರೆ ಇಷ್ಟು ಮಾತ್ರ

ಹೇಳಬಲ್ಲೆ.. ಸಾಮಾನ್ಯವಾಗಿ ಎಲ್ಲರೂ ಪ್ರತಿಭಟಿಸುವಲ್ಲಿ, ನಾನು ಸಹನಶೀಲವಾಗಿ, ಮೌನವಾಗಿ ಸಹಿಸಿಬಿಟ್ಟಿದ್ದೇನೆ. ಇದು ನನ್ನ ಅಹಂಕಾರವಲ್ಲ, ನನಗಿರುವ ಏಕಮೇವ ಮಾರ್ಗವಿದು . ಸಂಬಂಧಿಗಳು, ಅಧಿಕಾರಿಗಳು, ಸ್ನೇಹಿತರು ಎಷ್ಟೊಂದು ಜನ ಬೆನ್ನಿಗೆ ಚೂರಿ ಇರಿದರೆಂಬುದು ಕೂಡ ನನಗೆ ಗೊತ್ತಾದದ್ದು, ಮೊನ್ನೆ- ಒಂದು ವರ್ಷದ ಹಿಂದೆ ಇಪ್ಪತ್ತೆರಡು ವರ್ಷದ ಮಗ (ಅರ್ಥಶಾಸ್ತ್ರದಲ್ಲಿ Ph.d ಮಾಡುತ್ತಿದ್ದವ) ಅಪಘಾತದಲ್ಲಿ ತೀರಿಕೊಂಡ ಸಂಜೆಯಲ್ಲಿ. ನೋವಿನ ಬೆಳಕಿನಲ್ಲಿ ಕಾಣುವ ಜೀವನ ಸತ್ಯಗಳೇ ಅಸಲೀ ಸತ್ಯಗಳೆಂಬುದನ್ನು, ನಮ್ಮ ವೈದಿಕ ಧರ್ಮವೂ ಒಪ್ಪುತ್ತದೆಂದು ಕಾಣುತ್ತದೆ. ಇಹದ 'ನಶ್ವರತೆ'ಯನ್ನು ಪ್ರತಿಪಾದಿಸುವ ನಿಲುವುಗಳೆಲ್ಲಾ ಈ ಬಗೆಯವೇ.

ನನ್ನ ಸುತ್ತ ನಿತ್ಯ ಎದುರಾಗುವ ಸಂಬಂಧಗಳು ಹೀಗೆ ಕ್ರೂರವಾದ ಸಂದರ್ಭದಲ್ಲೇ ನನ್ನ ಸಾಹಿತ್ಯದ ಸ್ನೇಹಿತರಲ್ಲಿ ಕೆಲವರು ನನಗೆ ತುಂಬಾ ನೆರವಾಗಿದ್ದುದನ್ನು ನಾನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಬಿದರಕುಂದಿ, ದೇಶಪಾಂಡೆ ಸುಬ್ಬರಾಯರು, ಎಚ್. ಎಸ್. ಆರ್. , ಮಲ್ಲೇಪುರಂ, ಎಚ್. ಎಸ್. ವೆಂಕಟೇಶ್ ಮೂರ್ತಿ, ಡಿ.ಎಸ್. ರಾಮಸ್ವಾಮಿ, ಜಿ. ಶ್ರೀನಿವಾಸರಾಜು, ಎಲ್. ಅನಿಲ್‌ಕುಮಾರ್, ಬಾಳಾಸಾಹೇಬ್ ಲೋಕಾಪುರ, ರಾಘವೇಂದ್ರ ಪಾಟೀಲ ಇವರೆಲ್ಲ ನನ್ನ ಬದುಕು ಬರಹ ಎರಡೂ ಸಂದರ್ಭಗಳಲ್ಲೂ ನನ್ನನ್ನು ತಮ್ಮ ಪ್ರೀತಿಯಲ್ಲಿ ತೋಯ್ಸಿದ್ದಾರೆ. ಆದರೆ ದುರ್ದೈವವೆಂದರೆ ಇಂಥವರ ಜತೆ ನಿರಂತರ ಸಂಪರ್ಕವೇ ಸಾಧ್ಯವಾಗುವುದಿಲ್ಲ. ಎಲ್ಲೋ ಸಭೆ, ಸಮ್ಮೇಳನ, ಸಂಕೀರ್ಣಗಳಲ್ಲಿ ಕೂಡುತ್ತೇವೆ. ಎಲ್ಲರಿಗೂ ಅವರವರದೇ ಗಡಿಬಿಡಿ ಅವಸರ ತಲ್ಲಣಗಳು. ಇಡಿಯಾಗಿ ಕೂಡುವುದು ಸಾಧ್ಯವೇ ಆಗುವುದಿಲ್ಲ.

ಆದರೆ, ಈ ಸಂದರ್ಭದಲ್ಲಿ ನನ್ನ ನಿಜವಾದ ನೆರವಿಗೆ ಬಂದದ್ದು ಕಾವ್ಯ. ನನ್ನೊಳಗೇ ಕುದಿಯುತ್ತಿದ್ದ ಎಲ್ಲ ಉರ್ವರತೆಯನ್ನು ಉಕ್ಕಿಸಿಕೊಳ್ಳಲು ನನಗಿರುವ ಒಂದೇ ಒಂದು ದಾರಿ ಅದು. ಬದುಕೇ ನನ್ನ ಕಾವ್ಯದ 'ತೀವ್ರತೆ'. ಈ ಬಗೆಯ ಹುಗಿದಿಟ್ಟ ಉತ್ಕಟತೆಯಿಂದ ಚಿಮ್ಮಿದ್ದು. ಜೊತೆಗೆ ನೌಕರಿಯಲ್ಲಿ ಹಳ್ಳಿಗಳ ಅಲೆದಾಟ, ಅಲ್ಲಿನ ಗ್ರಾಮ್ಯತೆಯ ಅನುಭವ, ಓದು-ಬರಹ ಚರ್ಚೆಗಳ ಗದ್ದಲದಿಂದ ತುಂಬಿದ ಮನೆ. ಬಡತನದಂಥ ಮೂರ್ತದುಃಖಗಳ ಸಂಗಸುಖ ಇವೆಲ್ಲವೂ ನನ್ನ ನಮನಶೀಲ ಸ್ವಭಾವದಲ್ಲಿ ರೂಪುಗೊಂಡ ಸೃಜನಶೀಲತೆಯಲ್ಲಿ ಆಕಾರ ಪಡೆದವುಗಳು. ಬದುಕನ್ನು ಬದುಕಲು ಬದುಕನ್ನು ಬರೆಯಲು, ಬರಹದ ಮೂಲಕ ಅರಿಯಲು, ಅರಿವುಗಳ ಮಿತಿಯನ್ನು ಮನಗಾಣಿಸುತ್ತ ಅಹಂಕಾರವ ಮತ್ತೇರದಂತೆ ನಿಯಂತ್ರಿಸಿಕೊಳ್ಳಲು, ಸಾಹಿತ್ಯಕ ಜಗತ್ತಿನ ಎಲ್ಲ ಸ್ಪಂದನಗಳನ್ನು ಆರೋಗ್ಯಪೂರ್ಣವಾಗಿ ಅಲಕ್ಷಿಸಲು , ಮನುಷ್ಯ ಸಂಬಂಧಗಳನ್ನು ಬದುಕಿನ ಅರ್ಥವನ್ನಾಗಿ ಸ್ವೀಕರಿಸಲು, ಎಲ್ಲಕ್ಕಿಂತ ಮುಖ್ಯವಾಗಿ ಭಿಕ್ಷೆ ಬೇಡಿದರೂ ಚಿಂತೆಯಿಲ್ಲ ಅಪ್ರಮಾಣಿಕನಾಗಿ ಜಗತ್ತಿನ ಸೌಂದರ್ಯವನ್ನು ಕೆಡಿಸಬಾರದೆಂಬ ಎಚ್ಚರ ಉಳಿಸಿಕೊಳ್ಳಲು ಕಾವ್ಯ ನನಗೆ ಆಸಕ್ತಿ ಹುಟ್ಟಿಸಿದೆ. ಆ ಶಕ್ತಿಯನ್ನು ಕೊಟ್ಟಿದೆ. ಕೊಡುತ್ತಿದೆ. ನನಗಿರುವ ಪುಟಗಳ ಮಿತಿಯಲ್ಲಿ ಇಷ್ಟನ್ನು ಮಾತ್ರ ಹೇಳಬಲ್ಲೆ. ಮೂರ್ತ ಅನುಭವಗಳ ಸಂದರ್ಭದಲ್ಲಿ ನಾನು ತೆಗೆದುಕೊಂಡ ಹಲವಾರು ಬಗೆಯ ನಿರ್ಣಯಗಳು, ಹೇಗೆ-ನಾನೊಬ್ಬ ಕವಿಯಾದುದರಿಂದಲೇ ಭಿನ್ನವಾಗಿದೆ. ಮಾನವೀಯವಾಗಿವೆ, ಸಹನೆ-ತಾಳ್ಮೆ ಜೀವನ ಪ್ರೀತಿಯನ್ನೊಳಗೊಂಡಿವೆ ಎಂಬುದನ್ನು ಸಂದರ್ಭ ಸಿಕ್ಕರೆ ನಾನು ವಿವರಿಸಬಲ್ಲೆ.

ಕವಿತೆ ಬರೆಯುವ ನಾವೆಲ್ಲರೂ ಅಂಥ ವಿವರಗಳನ್ನು ನಮಗೆ ನಾವೇ ಕೊಟ್ಟುಕೊಳ್ಳಬೇಕು.... ಎನ್ನಿಸುತ್ತದೆ.



ಆನಂದ ಝುಂಜರವಾಡರ ಕವಿತೆಗಳು

ಅಪ್ಪಿಬಿಡುವೆ

ಅಪ್ಪಿಬಿಡುವೆ, ತಪ್ಪಿಬಿಡುವೆ
ಒಪ್ಪಿಬಿಡುವೆ ಒದಗುತ
ಗೊಪ್ಪ ಚಿಗಿವ ತಿಪ್ಪೆಯಲ್ಲಿ
ಮುಪ್ಪಿನಲ್ಲೂ ಹುದುಗುತ ||1||

ಮೊಲೆಯ ಆಶೆ, ಕಲೆಯ ಭಾಷೆ
ಬಲೆಯ ಎಳೆಯ ಬಿಡಿಸುತ
ತೊಲೆಯ ಕೆಳಗೆ ಒಲೆಯ ಬೆಂಕಿ
ಬಾಳೆಲೆಗೆ ಉಕ್ಕಿ ಬಡಿಸುತ ||2||

ಅನ್ನ ಉಣುವೆ, ಕಣ್ಣ ಕುಡಿವೆ
ಬಣ್ಣಬಳಿವ ಬಯಲಿಗೆ
ತನ್ನದೆನುವೆ, ನನ್ನದೆನುವೆ
ತಾರೆ ತೆನೆಯ ಕೊಯಲಿಗೆ ||3||

ಎದುರು ಬರುವೆ, ಬದಿಗೆ ಸರಿವೆ
ತುಂಬಿ ಎಸರು ಪಾತ್ರೆಗೆ
ದುಡಿತ ಕೊಟ್ಟ ಬದುಕ ಪಡೆದು
ಹೆಜ್ಜೆ ಜೀವ– ಜಾತ್ರೆಗೆ ||4||

ಸುಟ್ಟ ಕಣ್ಣು, ಎದೆಯ ಹುಣ್ಣು
ಬನ್ನ ಬರೆಯ ಗಾಯದ
ಆಟಮಟಿಸುವ ತಟಲ್ ಹುಚ್ಚು
ಜೀವ ಲೋಕಮಾದುದ ॥5॥


ಅರ್ಥ ಭ್ರಷ್ಟ ಕಾಮನಷ್ಟ
ಮಲವೇ ಮೂಲ ಸರಕು
ಹಚ್ಚಿ ದೀಪ, ಅಯ್ಯೋ ಪಾಪ
ಸುಟ್ಟುಳಿದ ಕಲೆಯ ಕರಕು ॥6॥

ಸಮಾಜಗಳು ಸಿದ್ಧಾಂತಗಳು
ಆ–ಲಯದ ಗೋಡೆ ಛಪ್ಪರ
ತೆರೆದಷ್ಟೇ ಗಾಳಿ ಬೆಳಕು
ಜೀವ ಒಣಗಿ ಹಪ್ಪಳ ॥7॥

ಹುಳಿತು ಬಿಡುವೆ ಕಳಿತು ಬಿಡುವೆ
ಚುಳಿಸಿ ಹಲ್ಲು ನಾಲಿಗೆ
ಭೂಮಿ ಬಾನ, ಮಾತು ಮೌನ
ಜೀಕಿ ಇಲ್ಲಿಂದಲ್ಲಿಗೆ ॥8॥

ಮೊರೆಯುತಿರುವೆ ಬರೆಯುತಿರುವೆ
ಕರೆಯುತಿರುವೆ ಸ್ವರಗಳ
ಮುಗಿಯದಿರುವ ಬಾಳಿನಲ್ಲಿ
ಮುಗಿವದೆಲ್ಲ ಅಕ್ಷರ ॥9॥

ಯಾವುದೋ ಅತಿಥಿಗಾಗಿ
ಎಂದೋ ಒಂದು ಔತಣ
ನನ್ನ ಸವಿಯ ಬಯಸಿ ಕೊಡುವೆ
ಕವಿತೆಯ ಆಮಂತ್ರಣ ॥10॥



ಅವರು

ಮುತ್ತು ರತ್ನಗಳ ಝಾಲರಿಯ ಮುಗಿಲ ಛತ್ತನ್ನು ಎಲ್ಲಿ ನಿಲ್ಲಿಸಿದರಾರು?
ಕೇಳಿಕೊಳ್ಳುತ್ತಿದ್ದರಂತೆ ನನ್ನ ಪೂರ್ವ ಸೂರಿಗಳು
ಬೇಲಿಗಳ ತತ್ತರತೆಗಳಿಗೆ, ಕೇರಿಗಳ ಛಪ್ಪರಗಳಿಗೆ
ಬೆಂಕಿಇಟ್ಟವರಾರು? ಕೇಳಿಕೊಳ್ಳುತ್ತಿದ್ದೇನೆ ಸುಟ್ಟಾತರಗಾರ ನಾನು
ಸಂಧಿಕಾಲದ ಘಾತಕ್ಕೆ ಸೀಳಿ ಬಂದ ಕೋರೆ ನಖಗಳು ಬಗೆದ
ಕರುಳಗಳನ್ನು, ಅವತಾರಗಳ ಮಾಲೆಗೆ ಪೋಣಿಸುತ್ತಿದ್ದರು ಪ್ರಾಕ್ತನ ಪುರಾಣಿಕರು
ತುಂಬಿದ ಗರ್ಭಗಳಲ್ಲಿ ಬಾಂಬುಗಳ ಹುಗಿದಿಟ್ಟು, ಸಂಸತ್ತುಗಳಲ್ಲಿ
ಕುಳಿತೆ ಗುಂಡಿಯೊತ್ತುವವರ ಗುಂಡಿಗೆಗೆ ಹಾರಬೇಕಾಗಿದೆ ನಾನು
ಸತ್ತಮೇಲೆ ಜೀವ ಏನಾಗುತ್ತದೆ? ದೇಹವನ್ನು ಯಾವುದರಿಂದ ಮಾಡಲಾಗಿದೆ?
ಇವು ಬಹಳ ಮುಖ್ಯ ಪ್ರಶ್ನೆಗಳೆಂದು ತಿಳಿದಿದ್ದರವರು
ಚರಂಡಿಗಳ ಕಪ್ಪು ನೀರಿನಲ್ಲಿ ಎಳೆಗೂಸು –ಬಾಣಂತಿಯರ
ಕುಕ್ಕುತ್ತಿರುವ ಕೊಕ್ಕುಗಳು ಯಾವ ಲೋಹದ ಸಿದ್ಧವಾಗಿದೆ ಎಂದು ತಿಳಿಯಬೇಕಿದೆ ನಾನು
ಜನ್ಮಾಂತರಗಳ ಕೈಲಾಸ ಪಟದಲ್ಲಿ ಕರ್ಮಾಂತರಗಳ ದಾಳ ಉರುಳಿಸುತ್ತಾ
ಜೀವದ ಕಾಯಿಗಳ ಸರಿಸುತ್ತಿದ್ದವರು, ವಿವಿಧ ಪಟ್ಟಗಳ ಪಟ್ಟುಹಿಡಿದವರು
ಉಪಖಜಾನೆಯಲ್ಲಿ ಮೊದಲ–ತಿಂಗಳ ಕುಟುಂಬ–ಪಿಂಚಣಿಗಾಗಿ
ಉರಿಬಿಸಿಲಲಿ ಕಾಯುತ್ತಿರುವ ವಿಧವೆ– ಬಸುರಿಯರ ನಿಟ್ಟುಸಿರಲ್ಲಿ ಬೇಯುತ್ತಿದ್ದೇನೆ ನಾನು
ಇಹದ ಉಪ್ಪಿನಕಾಯಿಗೆ ಹುಳ ಬೀಳದಂತೆ ಪರದ ಹುಟ್ಟಾಡಿಸಿ
ಬಾಡಿಸಿ ಕೊಳ್ಳುತ್ತಿದ್ದರಂತೆ ಭವವ, ಅತೀತದ ಭಾರಿ ಕಲ್ಪನೆಗೆ
ಹೊಲೆ ತೊಳೆದ ಮನೆಯೊಡತಿ ಹಾಕಿದ ಹಳಸಿದನ್ನವ ಕಣ್ಣೀರಿನಲಿ
ಕಲಸಿ, ಚಿಳಿ ಪಿಳಿ ಕಣ್ಣು ಬಿಡುತ್ತಿರುವ ಚಿತ್ತಲೆ ಕೂಸಿಗುಣಿಸುತ್ತಿದ್ದೇನೆ ನಾನು
ಚತುರ್ಯುಗಗಳು ಬ್ರಮ್ಹನ ಒಂದು ವಿಸ್ತಾರ ಹಗಲು, ಕಾಲ ಚಕ್ರ
ಪ್ರಳಯದೆಡೆಗೆ ಉರುಳುತ್ತವೆ, ಪಂಚಾಂಗಗಳ ಮೇಲೆ ಭವಿಷ್ಯ ಕಟ್ಟುತ್ತಿದ್ದರವರು
ಕದ ತೆರೆಯದ ಪದಗಳು, ಹದವಿಲ್ಲದ ಸಹೃದಯರು, ಹೊರಗಿನ
ಧಕ್ಕಡಿಯಲ್ಲಿ ಹರಿದುಳಿಯದೆ, ಒಳಗಿನ ಕತ್ತಲಲ್ಲಿ ದಿನ ತುಂಬಿ ಹಡೆಯದೆ
ವ್ಯರ್ಥ, ಬೇನೆ ತಿನ್ನುತ್ತಿದ್ದೇನೆ ನಾನು

ಜಾಗತೀಕರಣ, ಪ್ರಭುತ್ವ ಮತ್ತು ರಾಜಕಾರಣ

–ಅರವಿಂದ ಚೊಕ್ಕಾಡಿ

ಒಂದು ಕುಟುಂಬಕ್ಕೆ ಒಬ್ಬ ಮುಖ್ಯಸ್ಥ ಬೇಕು. ಹಾಗೆಯೇ ಒಂದು ದೇಶಕ್ಕೂ. ಒಂದು ಪ್ರಭುತ್ವ ಎಲ್ಲವೂ ವ್ಯವಸ್ಥೆಯ ಸುಗಮ ನಿರ್ವಹಣೆಗಾಗಿ.

ಇಂಥಲ್ಲಿ ಜಾಗತೀಕರಣ ಪ್ರತಿಕ್ರಿಯೆ ಏನು ಮಾಡುತ್ತದೆ ? ದೇಶದಲ್ಲಿ ಪರಮಾಧಿಕಾರ ಉಳ್ಳ ಒಂದು ಪ್ರಭುತ್ವವಿರುತ್ತಲೇ ಇನ್ನೊಂದು ವಿದೇಶೀ ಪ್ರಭುತ್ವ ದೇಶವನ್ನು ಪ್ರವೇಶಿಸುತ್ತದೆ. ಅಂದರೆ ಅದು ಪರಮಾಧಿಕಾರ ಉಳ್ಳ ಅಧಿಕೃತ ಪ್ರಭುತ್ವವೆಂದೇನಲ್ಲ. ಆದರೆ ಎಷ್ಟರ ಮಟ್ಟಿಗೆ ದೇಶೀಯ ಪ್ರಭುತ್ವ ಜಾಗತೀಕರಣದ ಒಡಂಬಡಿಕೆಯನ್ನು ಒಪ್ಪಿಕೊಂಡಿರುತ್ತದೋ ಅಷ್ಟರ ಮಟ್ಟಿಗೆ ಅದು ತನ್ನ ಆರ್ಥಿಕ ಪರಮಾಧಿಕಾರವನ್ನು ಪ್ರತ್ಯಕ್ಷವಾಗಿ ಹಾಗೂ ಆ ಆರ್ಥಿಕ ಪರಮಾಧಿಕಾರ ಕುಸಿಯುವುದರೊಂದಿಗೇ ಕಳೆದುಹೋಗುವ ಸೈದ್ಧಾಂತಿಕ, ಸಾಂಸ್ಕೃತಿಕ, ಸಾಮಾಜಿಕ ಪರಮಾಧಿಕಾರವನ್ನು ಪರೋಕ್ಷವಾಗಿ ಬಿಟ್ಟುಕೊಟ್ಟಿರುತ್ತದೆ.

ನಮ್ಮಲ್ಲೀಗ ಪ್ರವೇಶಿಸಿರುವ ವಿದೇಶೀ ಪ್ರಭುತ್ವ ರಾಜಕೀಯ ಸ್ವರೂಪದ್ದಲ್ಲ. ಅದಾದರೆ ಎಷ್ಟೋ ಮೇಲು. ಏಕೆಂದರೆ ರಾಜಕೀಯ ಪ್ರಭುತ್ವ ಒಂದು ಇನ್ನೊಂದು ದೇಶವನ್ನು ಪ್ರವೇಶಿಸಿ ದೀರ್ಘಕಾಲ ಅದನ್ನು ಹಿಡಿದಿಡಲು ಬರುವುದಿಲ್ಲ. ಅದಕ್ಕೆ ಸಾಮ್ರಾಜ್ಯಶಾಹಿಗಳು ಹಿಂದೆ ಆಳ್ವಿಕೆ ನಡೆಸುತ್ತಿದ್ದ ವಸಾಹತುಗಳು ಸ್ವಾತಂತ್ರ್ಯ ಹೋರಾಟ ನಡೆಸಿ ಸ್ವತಂತ್ರವಾದುದೇ ಸಾಕ್ಷಿ. ಹಾಗೆಯೇ ಎರಡನೆ ಮಹಾಯುದ್ಧದ ನಂತರದ ಜಾಗತಿಕ ಸನ್ನಿವೇಶ ಒಂದು ದೇಶದ ಪ್ರಭುತ್ವ ಇನ್ನೊಂದು ದೇಶವನ್ನು ಆಳುವುದರ ವಿರುದ್ಧವಾಗಿದೆ. ಅಂಥಲ್ಲಿ ಎರಡನೆ ಮಹಾಯುದ್ಧವಲ್ಲಿ ಜರ್ಝರಿತಗೊಂಡ ಜಪಾನ್‌ನ ಪುನರ್ನಿರ್ಮಾಣಕ್ಕಾಗಿ ಕೆಲಕಾಲ ಅದರ ಉಸ್ತುವಾರಿ ವಹಿಸಿಕೊಂಡ ಅಮೇರಿಕಾ ಆ ನಂತರ ಅಲ್ಲಿಂದ ಕಾಲ್ತೆಗೆಯಿತು. ಇದೊಂದು ಅನಿವಾರ್ಯ ರಾಜಕೀಯ ಬದ್ಧತೆ.

ಆದರೆ ಇದೀಗ ಆರ್ಥಿಕ ಸ್ವರೂಪದಲ್ಲಿ ನುಗ್ಗಿ ಬಂದಿರುವ ವಿದೇಶಿ ಪ್ರಭುತ್ವ ಹೆಚ್ಚು ಅಪಾಯಕಾರಿ. ಅದಕ್ಕೆ ಈ ದೇಶದ ಜನರಿಗೆ ಉತ್ತರಿಸಬೇಕಾದ ಹೊಣೆ ಇಲ್ಲ. ಆ ಹೊಣೆ ನಮ್ಮ ಪ್ರಭುತ್ವದ್ದು. ಇಂಥಲ್ಲಿ ವಿದೇಶೀ ಆರ್ಥಿಕಪ್ರಭುತ್ವ ಇಲ್ಲಿ ತನ್ನ ಉದ್ಯಮಗಳನ್ನು ಸ್ಥಾಪಿಸಿ ಇಲ್ಲಿನ ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು. ಅದನ್ನು ಸಿದ್ಧವಸ್ತುಗಳಾಗಿ ಪರಿವರ್ತಿಸಿ ಇಲ್ಲಿನ ಜನರಿಗೇ ಮಾರಬಹುದು. ಲಾಭವನ್ನು ಮಾತ್ರ ಇಲ್ಲಿಯೇ ಹೂಡಿಕೆ ಮಾಡಬೇಕಾಗಿಲ್ಲ. ತನ್ನ ದೇಶಕ್ಕೆ ಕೊಂಡೊಯ್ಯಬಹುದು.ಕೂಡಿಟ್ಟುಕೊಳ್ಳಬಹುದು, ಇಲ್ಲ ತನ್ನ ಜಾಲವನ್ನು ವಿಸ್ತರಿಸಿಕೊಳ್ಳಲು ಬಳಸಬಹುದು. ಅದೇ ರೀತಿ ತನ್ನ ದೇಶದ ಉತ್ಪನ್ನಗಳನ್ನು ತಂದು ಇಲ್ಲಿ ಮಾರಬಹುದು. ಇಲ್ಲಿನವುಗಳನ್ನು ಕೊಂಡು ಹೋಗಿ ಅನ್ಯ ದೇಶಗಳಿಗೆ ಮಾರಬಹುದು. ಲಾಭಾಂಶವನ್ನು ಬಳಸಿ ಕೊಳ್ಳುವುದು ಅದರಿಚ್ಛೆ. ಆದರೆ ಯಾವುದಕ್ಕೂ ನಮ್ಮ ಪ್ರಭುತ್ವ ತಡೆ ಒಡ್ಡುವಂತಿಲ್ಲ. ಏಕೆಂದರೆ ಅಷ್ಟರ

ಮಟ್ಟದ ಆರ್ಥಿಕ ಪರಮಾಧಿಕಾರವನ್ನು ಅದು ಕಳೆದುಕೊಂಡಿದೆ. ಆರ್ಥಿಕ ಪರಮಾಧಿಕಾರವನ್ನು ಕಳೆದುಕೊಂಡಂತೆಯೆ, ನಮ್ಮ ಪ್ರಭುತ್ವ ಆರ್ಥಿಕ ಶಕ್ತಿಯನ್ನೂ ಕಳೆದುಕೊಳ್ಳತೊಡಗಿದೆ. ಪ್ರಭುತ್ವದ ಉದ್ಯಮಗಳು ಖಾಸಗಿಯವರ ಪಾಲಾಗುತ್ತಿರುವುದು, ವಿದೇಶೀ ವ್ಯಾಪಾರದಲ್ಲಿ ಪ್ರಭುತ್ವದ ಪಾಲು ಹಿಂದೆ ಬೀಳುತ್ತಿರುವುದು, ಯೋಜನಾ ವೆಚ್ಚದಲ್ಲಿ ಖಾಸಗಿ ಪಾಲುದಾರಿಕೆ ಅಧಿಕವಾಗುತ್ತಿರುವುದೆಲ್ಲ ಇದಕ್ಕೆ ಸಾಕ್ಷಿ. ಸಹಜವಾಗಿಯೆ, ಪ್ರಭುತ್ವದ ಒಡೆತನದಲ್ಲಿರುವ ಘಟಕಗಳು ತಮ್ಮದೇ ಲೋಪ ದೋಷಗಳಿಂದಾಗಿ ಖಾಸಗಿ ಒಡೆತನದೆದುರು ಮೇಲುಗೈ ಸಾಧಿಸಲು ಸಾಧ್ಯವಾಗದಿರುವುದು ಈ ದೇಶದ ಸ್ಥಿತಿ. ಅಂಥಲ್ಲಿ ದೇಶೀಯ ಖಾಸಗಿ ಒಡೆತನವನ್ನು ಎದುರಿಸಿ ಜಯಿಸಬಲ್ಲ ವಿದೇಶೀ ಒಡೆತನದೆದುರು ನಮ್ಮ ಪ್ರಭುತ್ವದ ಘಟಕಗಳು ಮೇಲುಗೈ ಸಾಧಿಸುತ್ತದೆಂದು ಭಾವಿಸಲು ಪ್ರಸ್ತುತ ಕಾಲ ಘಟ್ಟದಲ್ಲಿ ಸಾಧ್ಯವಾಗದು. ಹೀಗೆ ಪ್ರಭುತ್ವ, ಒಂದು ಮೂಲದಿಂದ ಬರುವ ತನ್ನ ಆದಾಯವನ್ನು ಕಳೆದುಕೊಳ್ಳುತ್ತದಾದರೆ ಮುಕ್ತ ಮಾರುಕಟ್ಟೆ ನೀತಿಗನುಗುಣವಾಗಿ ಆಮದು ವಸ್ತುಗಳ ಮೇಲೆ ಹಾಕಲಾಗುವ ಸುಂಕ ಕಳೆದುಕೊಂಡು ಮತ್ತೊಂದು ಆದಾಯದ ಮೂಲವನ್ನು ಬಿಟ್ಟುಕೊಡಬೇಕಾಗುತ್ತದೆ. ದಿನೇ ದಿನೇ ಮಧ್ಯಮ ವರ್ಗದ ಮೇಲೆ ಹೊರಿಸಲಾಗುತ್ತಿರುವ ಅಧಿಕ ತೆರಿಗೆಯ ಭಾರ ಸೂಚಿಸುವುದಾದರೂ ಇದನ್ನೇ. ನಮ್ಮ ಪ್ರಭುತ್ವಕ್ಕೆ ಆದಾಯ ಬೇಕಾಗಿದೆ. ಆದರೆ ಅತ್ಯಂತ ಶ್ರೀಮಂತರಿಂದಾಗಲಿ, ವಿದೇಶೀ ಬಂಡವಾಳಶಾಹಿಗಳಿಂದಾಗಲಿ ಆದಾಯ ಸಂಗ್ರಹಿಸಲು ಅದಕ್ಕೆ ಸಾಧ್ಯವಾಗುತ್ತಿಲ್ಲ.

ಇಂಥಲ್ಲಿ, ಜನ ತಾಂತ್ರಿಕ ವ್ಯವಸ್ಥೆಯೊಂದರಲ್ಲಿ ಜನರ ಬೇಕು–ಬೇಡಗಳಿಗೆ ಉತ್ತರಿಸಬೇಕಾದ ಜವಾಬ್ದಾರಿ ಪ್ರಭುತ್ವಕ್ಕಿದೆ. ಅದನ್ನು ನಿಭಾಯಿಸುವ ಚೈತನ್ಯವಿಲ್ಲ. ಅಂಥಲ್ಲಿ ಆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉಪಾಯಕ್ಕಾಗಿ ಹುಡುಕಾಡಬೇಕಾಗುತ್ತದೆ. ಅಂಥ ಒಂದು ಸೂಚನೆ ಈಗಾಗಲೇ ಸಿಕ್ಕಿದೆ. ಈ ದೇಶದ ರಾಜ್ಯಾಂಗದ ಪ್ರಸ್ತಾವನಾ ಬರಹ ದೇಶವನ್ನು ಸಮಾಜವಾದಿ ಸಮಾಜವನ್ನಾಗಿ ನಿರ್ಮಿಸಲು ಗುರಿ ಹೊಂದಿದೆ. ಅಂದರೆ ಸಂಪತ್ತಿನ ವಿಕೇಂದ್ರೀಕರಣ, ಸಮಾನತೆ, ಸಮಬಾಳು ಎಲ್ಲ ಸಮಾಜವಾದಿ ತತ್ವದಲ್ಲಿ ಸೇರಿಕೊಳ್ಳುತ್ತದೆ. ಅದು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ, ಆಗುತ್ತಲಿದೆ, ಆಗಬಲ್ಲುದು ಎಂಬುದು ಬೇರೆ ಮಾತು. ಆದರೂ ರಾಜ್ಯಾಂಗದ ಉದ್ದೇಶ ಅದೇ. ಆದರೆ ಈ ಲೇಖನ ಬರೆಯುವ ಕೆಲ ಸಮಯಕ್ಕೆ ಮೊದಲು ಈ ದೇಶದ ಗೃಹಮಂತ್ರಿಗಳು ರಾಜ್ಯಾಂಗದ ಸಮಾಜವಾದಿ ಆಶಯವನ್ನು ತೆಗೆದುಹಾಕಲು ಅಪೇಕ್ಷಿಸಿದ್ದರು. ಇದು ಒಬ್ಬ ಮಂತ್ರಿಯ ವೈಯಕ್ತಿಕ ಅಭಿಪ್ರಾಯವೆಂದಾಗಲಿ, ಪ್ರಸ್ತುತ ಮಂತ್ರಿಗಳ ಅಧಿಕಾರಾವಧಿಗೆ ಸೀಮಿತವಾಗುವ ಮಾತೆಂದಾಗಲಿ ತಳ್ಳಿಹಾಕಲಾಗದು. ಇದರ ಹಿಂದೆ ಈ ಕಾಲಮಾನದ ಸನ್ನಿವೇಶ ಪ್ರಭುತ್ವದ ಮೇಲೆ ಬೀರಿರುವ ಪ್ರಭಾವವಿದೆ. ಅದು ಪ್ರಭುತ್ವವನ್ನು ಹೆಚ್ಚು, ಹೆಚ್ಚು, ಶ್ರೀಮಂತರ ಪರವಾಗಿ ಬದಲಿಸುತ್ತಿದೆ.

ಯಾಕೆ ಹೀಗಾಗುತ್ತಿದೆ? ಅದಕ್ಕೆ ಜಾಗತೀಕರಣದ ಒಡಂಬಡಿಕೆ ಸಿದ್ಧವಾದ ಬಗೆಯನ್ನು ನೋಡಬೇಕು. ವಿಶ್ವದ ಅತ್ಯಂತ ಬಡರಾಷ್ಟ್ರಗಳು ಒಂದೆಡೆ ಸೇರಿ ತಮ್ಮ ಆರ್ಥಿಕ ಶಕ್ತಿಯನ್ನು ಬಲಗೊಳಿಸುವುದಕ್ಕಾಗಿ ಜಾಗತೀಕರಣ ಒಡಂಬಡಿಕೆಯನ್ನು ಸಿದ್ಧಪಡಿಸಿದ್ದರೆ ಅದು ಬಡವರ ಪರವಾಗಿ ಇರಬೇಕಾಗಿತ್ತು. ಆಗ ನಮ್ಮ ಪ್ರಭುತ್ವ, ಸಮಾಜವಾದಿ ಸಿದ್ಧಾಂತವನ್ನು ಬಲಗೊಳಿಸಲು ಮುಂದಾಗುತ್ತಿತ್ತೇ ಹೊರತು ತೆಗೆದು ಹಾಕುವುದಕ್ಕಲ್ಲ. ಆದರೆ ಹಾಗಾಗಿಲ್ಲ. ತಮ್ಮ ಅರ್ಥವ್ಯವಸ್ಥೆ ಅತ್ಯುನ್ನತ ಮಟ್ಟದಲ್ಲಿ ಬಲಗೊಂಡು ಇನ್ನು ವಿಸ್ತರಿಸಲು ಅವಕಾಶವೇ ಇಲ್ಲದ ಅಥವಾ ಹಾಗೆ ವಿಸ್ತರಿಸತೊಡಗಿ ತಮ್ಮ ಸಂಪನ್ಮೂಲಗಳನ್ನು ಕಳೆದುಕೊಳ್ಳಲು ಇಚ್ಛಿಸಿದ್ದ ಅತ್ಯಂತ ಶ್ರೀಮಂತ ರಾಷ್ಟ್ರಗಳು ಜಾಗತೀಕರಣ ಒಡಂಬಡಿಕೆಯ ಮೂಲಶಕ್ತಿಗಳು.

ಅಂಥಲ್ಲಿ ಜಾಗತೀಕರಣವೆಂಬುವುದು ಶ್ರೀಮಂತರ ಪರವಾಗಿರುತ್ತದೆ. ಅದನ್ನು ಒಪ್ಪಿಕೊಂಡ ನಮ್ಮ ಪ್ರಭುತ್ವವೂ ಶ್ರೀಮಂತರ ಪರವಾಗಿ ಇರಬೇಕಾಗುತ್ತದೆ. ಆದ್ದರಿಂದಲೇ ರಾಜ್ಯಾಂಗದ ಸಮಾಜವಾದಿ ಆಶಯವನ್ನು ತೆಗೆದುಹಾಕಬೇಕೆಂಬ ಮಾತು ಒಂದು ಸೈದ್ಧಾಂತಿಕ ಕುಸಿತವಾಗಿ ಗೋಚರಿಸುತ್ತದೆ. ಇದು ಜಾಗತೀಕರಣ, ನಮ್ಮ ಪ್ರಭುತ್ವದ ಸೈದ್ದಾಂತಿಕ ನಿಷ್ಠೆಗೆ ಕೊಟ್ಟ ಹೊಡೆತವೆಂದು ಭಾವಿಸಿದರೆ ತಪ್ಪಾಗಲಾರದು.

ಸೈದ್ಧಾಂತಿಕ ನಿಷ್ಠೆ ಕುಸಿಯುತ್ತಾ ಸಾಗಿದಂತೆ ಪ್ರಭುತ್ವ ಯಾವ ರೀತಿಯಲ್ಲಿ ಬದಲಾಗುತ್ತಿದೆ ಎಂಬುದನ್ನು ಗಮನಿಸಬೇಕು. ಔದ್ಯೋಗಿಕ ಕ್ಷೇತ್ರವನ್ನು ತೆಗೆದುಕೊಳ್ಳೋಣ. ದಿನೇ ದಿನೇ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿರುವುದು ಕಂಡು ಬರುತ್ತಿದೆ. ಜನಸಂಖ್ಯೆಯ ಏರಿಕೆ ಅದಕ್ಕೊಂದು ಕಾರಣವಾದರೆ ಉದ್ಯಮಗಳಲ್ಲಿ ಯಂತ್ರಗಳ ಬಳಕೆ, ಪ್ರಭುತ್ವದ ಉದ್ಯೋಗಗಳು ನಶಿಸುತ್ತಿರುವುದು ಇನ್ನಿತರ ಕಾರಣಗಳು. ಸರಿಯೇ, ಒಂದು ದೇಶದ ಎಲ್ಲ ಜನರಿಗೂ ಉದ್ಯೋಗ ಒದಗಿಸಿಕೊಡಲು ಪ್ರಭುತ್ವಕ್ಕೆ ಸಾಧ್ಯವಾಗದು. ಆದರೆ ಜನರು ಉದ್ಯೋಗವನ್ನು ಕಂಡುಕೊಳ್ಳುವುದಕ್ಕೆ ಬೇಕಾದ ಸನ್ನಿವೇಶವನ್ನು ಸೃಷ್ಟಿಸಬಹುದು. ಈವತ್ತು ನಮ್ಮ ಪ್ರಭುತ್ವದ ಬಳಿ ಸ್ವಉದ್ಯೋಗ ಯೋಜನೆಗಳಿವೆ ನಿಜ. ಅದಕ್ಕಾಗಿ ಸಾಲ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಅದು ಸಿದ್ಧವಿದೆ. ಆದರೆ ಸ್ವಉದ್ಯೋಗ ಹಿಡಿದು ಅದರಲ್ಲಿ ಗಟ್ಟಿಯಾಗಿ ನೆಲೆ ಊರಬಹುದಾದ ಸ್ಥಿತಿ ಇಲ್ಲ. ಏಕೆಂದರೆ ಸ್ವ ಉದ್ಯೋಗ ಕಂಡುಕೊಂಡ ವ್ಯಕ್ತಿ ಸಣ್ಣ ಉದ್ಯಮ ಸ್ಥಾಪಿಸಲಿ, ವ್ಯಾಪಾರ ಆರಂಭಿಸಲಿ, ಇನ್ಯಾವುದೇ ಜೀವನೋಪಾಯದ ದಾರಿ ಹಿಡಿಯಲಿ ಅಲ್ಲೆಲ್ಲ ಆತ ಬೃಹತ್ ಬಂಡವಾಳ ಶಾಹಿಯೊಡನೆ ಪೈಪೋಟಿ ನಡೆಸಬೇಕು. ಈ ಪೈಪೋಟಿಯಲ್ಲಿ ಆತ ಗೆದ್ದರೆ ಮಾತ್ರ ಅವನಿಗೆ ಉಳಿವು ಇದೆ. ಇಲ್ಲದೆ ಹೋದರೆ ಉದ್ಯೋಗದಲ್ಲಿ ನಷ್ಟ, ಜೀವನೋಪಾಯದ ಕುಸಿತ, ಜೊತೆಗೆ ಸಾಲವನ್ನು ಮರುಪಾವತಿಸಬೇಕಾದ ಬದ್ಧತೆ–ಮರುಪಾವತಿಸಲಾಗದ ಅನಿವಾರ್ಯತೆಗಳೆಲ್ಲ ಆತನಿಗೆ ಎದುರಾಗುತ್ತವೆ. ಏಕೆಂದರೆ ಈಗ ತಾನೇ ಹೊಸ ಉದ್ಯಮಕ್ಕಿಳಿದ ಒಬ್ಬ ವ್ಯಕ್ತಿಗೆ ಮಾರುಕಟ್ಟೆಯ ಅಭಾವವಿರುತ್ತದೆ. ಉತ್ಪಾದನಾ ವೆಚ್ಚ ಅಧಿಕವಿರುತ್ತದೆ. ಇಂಥಲ್ಲಿ ಗುಣಮಟ್ಟದ ಸರಕುಗಳನ್ನೇ ಆತ ಕೊಡಲು ಸಾಧ್ಯವಾಗುತ್ತದೆಂದು ನಿರೀಕ್ಷಿಸುವುದು ತಪ್ಪು. ಹೀಗಿರುವಾಗ ವ್ಯವಸ್ಥಿತ ಉದ್ಯಮದೊಂದಿಗೆ ಪೈಪೋಟಿ ನಡೆಸಿ ಗೆಲುವು ಸಾಧಿಸಲಾಗದ ವ್ಯಕ್ತಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ. ನಿಜ ಹೇಳಬೇಕೆಂದರೆ ಇವರಾರೂ ಪ್ರಭುತ್ವಕ್ಕಾಗಲಿ, ಸಮಾಜಕ್ಕಾಗಲಿ ಅನ್ಯಾಯ ಮಾಡಿದವರಲ್ಲ. ಆದರೂ ಅವರು ಅನ್ಯಾಯ ಅನುಭವಿಸಬೇಕಾಗುತ್ತದೆ. ಅಂದರೆ ಪ್ರಭುತ್ವ, ಅನಿವಾರ್ಯವಾಗಿ ಈ ಜನತೆಯ ಬಗ್ಗೆ ಕ್ರೂರವಾಗುತ್ತಾ ಸಾಗುತ್ತಿರುವುದರಲ್ಲಿ ಜಾಗತೀಕರಣದ ಪ್ರಭಾವವಿದೆ. ಅಲ್ಲದೆ ಇದರಿಂದಾಗಿ ಪ್ರಭುತ್ವದ ಮೌಲ್ಯಯುತವಾದ ಒಂದು ಸಿದ್ಧಾಂತ ಕೂಡ ನಷ್ಟವಾಗಬೇಕಾಗುತ್ತದೆ. ಅದೆಂದರೆ ಪ್ರಜಾಸತ್ತೆ. ಪ್ರಜಾಸತ್ತೆಯ ಮೂಲ ಆಶಯವೇ ಸಮಗ್ರ ಜನತೆಯಲ್ಲಿ ರಾಜಕೀಯ ಪರಿಜ್ಞಾನವನ್ನು ಬೆಳೆಸಿ ಪ್ರಭುತ್ವಕ್ಕೆ ಸಹಕಾರ ನೀಡುವ, ಪ್ರಭುತ್ವದ ವಿಮರ್ಶೆ ನಡೆಸುವ ಮೂಲಕ ಜನಪರ ಪ್ರಭುತ್ವವೊಂದು ವ್ಯವಸ್ಥಿತವಾಗಿ ದೇಶದ ಅಧಿಕಾರ ಸೂತ್ರ ಹಿಡಿಯುವಂತೆ ಮಾಡುವುದು. ಆದರೆ ಜಾಗತೀಕರಣದ ಈ ಸ್ಥಿತಿಯಲ್ಲಿ ಆರ್ಥಿಕ ಸಾಮರ್ಥ್ಯವನ್ನು ಕಳೆದುಕೊಳ್ಳುವ ಜನತೆ ಎಷ್ಟರ ಮಟ್ಟಿಗೆ ಸುಶಿಕ್ಷಿತರಾಗಿ, ಪ್ರಜ್ಞಾವಂತರಾಗಿ, ವಿಮರ್ಶಾ ಬುದ್ಧಿಯವರಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುತ್ತಾರೆ ಎನ್ನಲು ಬರುವುದಿಲ್ಲ. ಅಂದರೆ ಜಾಗತೀಕರಣ, ಪ್ರಜಾಪ್ರಭುತ್ವದ ಸಮಗ್ರ ಜನತೆಯ ಆಶಯಕ್ಕೆ ಸವಾಲೊಡ್ಡಿದೆ (ಪ್ರಜಾಸತ್ತೆಯಲ್ಲಿ ಬಹುಸಂಖ್ಯಾತರ ಅಭಿಪ್ರಾಯಕ್ಕೆ ಮನ್ನಣೆ ಇರುವುದಾದರೂ ಒಟ್ಟೂ ರಾಜಕೀಯದಲ್ಲಿ ಸಮಗ್ರ ಜನತೆ ಪಾಲ್ಗೊಳ್ಳಬೇಕೆಂಬುದೇ ಅದರ ಆಶಯವೆಂಬುದನ್ನು ಗಮನಿಸಬೇಕು).

ಮುಕ್ತ ಅರ್ಥ ವ್ಯವಸ್ಥೆ ನಮ್ಮದಾಗಿರುವಾಗ ಪೈಪೋಟಿ ಸಹಜ. ಅಂಥಲ್ಲಿ ದೇಶೀಯ ಬಂಡವಾಳ ಶಾಹಿ-ವಿದೇಶೀ ಬಂಡವಾಳಶಾಹಿಯೊಂದಿಗೆ ಪೈಪೋಟಿಗಿಳಿಯುತ್ತದೆ. ಕೆಲವು ದೇಶೀಯ ಬಂಡವಾಳಶಾಹಿಗಳು ಪೈಪೋಟಿಯಲ್ಲಿ ಗೆಲುವನ್ನೂ ಸಂಪಾದಿಸಬಲ್ಲರು. ಇಲ್ಲಿ ಅದಲ್ಲ ಪ್ರಶ್ನೆ. ಆರ್ಥಿಕ ಪೈಪೋಟಿ ಬಿರುಸಾದಾಗ ಸಾಮಾಜಿಕ ಸ್ಥಿತಿ ಏನಾಗುತ್ತದೆಂಬುದು ಮುಖ್ಯ ಪ್ರಶ್ನೆ. ದೇಶೀಯ ಬಂಡವಾಳ ಶಾಹಿಗೆ ಪೈಪೋಟಿ ನಡೆಸುವುದು ಅವಶ್ಯಕತೆಯಾದರೆ ಸಾಮಾನ್ಯ ಜನರಿಗೆ ಅನಿವಾರ್ಯ. ಅಂಥಲ್ಲಿ ಒಟ್ಟು ಜೀವನ ಪಥ ಆರ್ಥಿಕ ದೃಷ್ಟಿಕೋನವಾಗಿ ಬದಲಾಗುತ್ತದೆ. ಆಧುನಿಕ ಜಗತ್ತಿನಲ್ಲಿ ಆರ್ಥಿಕ ಜೀವನ ದೃಷ್ಟಿ ಆರೋಗ್ಯಕರವೂ ಅಪೇಕ್ಷಣೀಯವೂ ಹೌದು. ಆದರೆ ಇಲ್ಲಿ ಅಸ್ತಿತ್ವದ ಉಳಿವಿಗಾಗಿ ನಡೆಯುವ ಜನ ಸಾಮಾನ್ಯರ ನಡುವಿನ ಆರ್ಥಿಕ ಪೈಪೋಟಿ ಹಾಗೂ ಸಿಕ್ಕಿದ ಅವಕಾಶವನ್ನು ಉಪಯೋಗಿಸಿಕೊಂಡು ಅತಿ ಹೆಚ್ಚು ಲಾಭ ಸಂಪಾದಿಸುವ ದೇಶೀಯ ಬಂಡವಾಳಶಾಹಿಯ ಆರ್ಥಿಕ ಪೈಪೋಟಿ. ಇದು ಆರ್ಥಿಕ ಜೀವನ ದೃಷ್ಟಿಯನ್ನು ಅತಿರೇಕದ ಆರ್ಥಿಕ ಜೀವನ ದೃಷ್ಟಿಯಾಗಿ ಬದಲಿಸಬಲ್ಲುದು. ಅಂದರೆ ಆರ್ಥಿಕತೆ ಜೀವನ ದೃಷ್ಟಿಯಲ್ಲ, ಆರ್ಥಿಕತೆಯೊಂದೇ ಜೀವನ ದೃಷ್ಟಿ ಎಂಬಂತಾಗುತ್ತದೆ. ಅದು ಸಹಕಾರ-ಸಹಬಾಳ್ವೆಯಂಥ ತಾತ್ವಿಕ ಅಂಶಗಳನ್ನು ತೊಡೆದು ಹಾಕಬಲ್ಲುದು. ಒಟ್ಟು ದೈನಂದಿನ ವ್ಯವಹಾರಗಳು ಆರ್ಥಿಕ ಉಪಯೋಗದ, ಆರ್ಥಿಕ ಗಳಿಕೆಯ ತರ್ಕದ ಹಿನ್ನೆಲೆಯಲ್ಲಿ ನಡೆಯುವುದು ಈ ಸ್ಥಿತಿಯಲ್ಲಿ. ಅದರಿಂದಾಗಿ ನಾವು ಬಾಳುವ ಬದುಕು ಇಡಿಯಾಗಿರುವುದಿಲ್ಲ. ಬಿಡಿ ಬಿಡಿಯಾಗಿರುತ್ತದೆ. ಆರ್ಥಿಕತಯಿಂದ ಹೊರತಾದ ಇತರ ಅಂಶಗಳು ಅಪ್ರಧಾನವಾಗಿ ಅಲ್ಲಿ ನಮಗೆ ಸಿಕ್ಕಬಹುದಾದ ಶಾಂತಿ, ತೃಪ್ತಿ, ಸಮಾಧಾನ, ಸಂತೋಷಗಳನ್ನು ಕಳೆದುಕೊಳ್ಳಬೇಕಾಗುತ್ತದೆ.

ಹೀಗೆ ಕಳೆದುಕೊಳ್ಳುವುದರೊಂದಿಗೆ ಭಾರತೀಯ ಪರಂಪರೆಯ ತಾತ್ವಿಕ ಅಂಶವೊಂದು ಮರೆಯಾಗಬೇಕಾಗುತ್ತದೆ. ಭಾರತೀಯ ತಾತ್ವಿಕ ಪರಂಪರೆಯಲ್ಲಿ ಬದುಕಿನ ಯಾವುದೋ ಒಂದು ಅಂಶ ಪ್ರಧಾನವಲ್ಲ; ಅದು ಬದುಕಿನ ನಾನಾ ಅಂಶಗಳನ್ನು ಪ್ರತ್ಯೇಕಿಸಿ ನೋಡಿದ್ದಲ್ಲ. ಸಮಗ್ರ ಬದುಕೇ ಭಾರತೀಯ ತತ್ವಜ್ಞಾನದ ಮೂಲ ಆಧಾರ. ಆ ದೃಷ್ಟಿಯಲ್ಲಿ ಆರ್ಥಿಕ ವ್ಯವಸ್ಥೆ, ರಾಜಕೀಯ, ಧರ್ಮ, ಸಂಸ್ಕೃತಿ, ಆಧ್ಯಾತ್ಮ, ವಿಚಾರಶೀಲತೆ ಎಲ್ಲವೂ ಬದುಕಿಗೆ ಪೂರಕವಾಗಿ ನಡೆಯುವಂತಹವೇ ಹೊರತು ಯಾವುದೋ ಒಂದು ಅಂಶ ಮಾತ್ರ ಬದುಕಿಗೆ ಪೂರಕವಲ್ಲ. ಈ ರೀತಿಯ ಒಂದು ತಂತ್ರಜ್ಞಾನ ಸಾಕಷ್ಟು ಪ್ರಮಾಣದಲ್ಲಿ ವಿಕೃತೀಕರಣಕ್ಕೆ ಒಳಗಾದದ್ದಿದೆ. ಆದರೂ ಅದರ ಮೂಲದಲ್ಲಿ ಅದು ಸಮಗ್ರತೆಯನ್ನು ಆಧರಿಸಿರುವಂಥದ್ದು. ಇಂಥಲ್ಲಿ ಜಾಗತೀಕರಣದ ಆರ್ಥಿಕ ಪೈಪೋಟಿ ಈ ಸಮಗ್ರ ಚಿಂತನೆಯನ್ನು ದೂರ ಮಾಡಬಲ್ಲದು. ಅದರ ಕಾರಣವಿರುವುದು ಪಾಶ್ಚಾತ್ಯ ತತ್ವಜ್ಞಾನದಲ್ಲಿ. ಅದು ಬದುಕನ್ನು ಬಿಡಿ ಬಿಡಿಯಾಗಿ ನೋಡಬಲ್ಲುದು. ಸನ್ನಿವೇಶಕ್ಕೆ ಮುಖ್ಯವೆನಿಸಿದ್ದನ್ನು ಪ್ರಧಾನವಾಗಿ ತೆಗೆದುಕೊಳ್ಳಬಲ್ಲುದು. ಈವತ್ತು ಜಾಗತೀಕರಣ ಬಂದಿರುವಂಥದ್ದು ಸಹ ಪಾಶ್ಚಾತ್ಯ ರಾಷ್ಟಗಳಿಂದಲೇ. ಅವಕ್ಕೀಗ ಆರ್ಥಿಕತೆಯೇ ಪ್ರಧಾನ. ಅಂತಲೇ ಜಾಗತೀಕರಣ ಆರ್ಥಿಕ ಜೀವನದ ಅತಿರೇಕದೆಡೆಗೆ ನಮ್ಮನ್ನು ಕೊಂಡೊಯ್ಯುತ್ತಿದೆ. ಅದರಿಂದಾಗಿ ಭಾರತೀಯ ತಾತ್ವಿಕ ಹಿನ್ನೆಲೆಯೊಂದನ್ನ ನಾವು ಕಳೆದುಕೊಳ್ಳ ಬೇಕಾಗುತ್ತದೆ. ಹೀಗೆ ನಮ್ಮ ಪರಂಪರೆಯ ಬಹುಮುಖ್ಯ ಅಂಶವೊಂದು ಕಳೆದು ಹೋಗುತ್ತಿರುವುದನ್ನು ಪ್ರಭುತ್ವ ಅಸಹಾಯಕವಾಗಿ ನೋಡುತ್ತಿರಬೇಕಾಗುತ್ತದೆ.

ದೇಶೀಯ ಭಾಷೆಗಳು ನಮ್ಮ ಸಂಸ್ಕೃತಿಯ ಪ್ರಧಾನ ವಾಹಕಗಳು. ಅವನ್ನು ನಾವಲ್ಲದೆ ಬೇರಾರೂ ಉಳಿಸಲಾರರು. ಆದರೆ ಜಾಗತೀಕರಣ ಪ್ರತಿಕ್ರಿಯೆ ತೀವ್ರವಾಗುತ್ತಿರುವಂತೆ ನಮ್ಮ ಭಾಷೆಗಳು ಕುಸಿಯುತ್ತಿವೆ.

ಇಂಗ್ಲೀಷ್ ಒಂದೇ ಪ್ರಧಾನವಾಗಿ ಬಿಡುತ್ತಿದೆ. ಏಕೆಂದರೆ ಇಂಗ್ಲೀಷ್ ಆರ್ಥಿಕ ಬಲಾಢ್ಯರ ಭಾಷೆ, ಸ್ಥಾನ, ಮಾನವನ್ನು ತಂದು ಕೊಡುವ ಭಾಷೆ ಎನ್ನುವುದು ಒಂದು ಕಾರಣ. ಅದು ಭಾವನೆಗಳಿಗೆ ಸಂಬಂಧಿಸಿದ್ದು. ಇನ್ನೊಂದು ಕಾರಣ ಇಂಗ್ಲೀಷ್ ಜ್ಞಾನ ಕಂಪ್ಯೂಟರ್ ಕಲಿಕೆಗೆ, ಕಂಪ್ಯೂಟರ್ ಉದ್ಯೋಗಕ್ಕೆ, ಆರ್ಥಿಕವಾಗಿ ಬಲಾಢ್ಯರಾಗುವುದಕ್ಕೆ ದಾರಿ ತೋರಬಲ್ಲದು (ಇಲ್ಲಿರುವುದು ಜೀವನ ನಿರ್ವಹಣೆಗಾಗಿನ ಉದ್ಯೋಗವಲ್ಲ. ದಿಢೀರನೆ ಅದ್ಭುತ ಶ್ರೀಮಂತರಾಗುವ, ಶ್ರೀಮಂತರಿಗೆ ಮತ್ತಷ್ಟು ಕೂಡಿ ಹಾಕುವ ಆರ್ಥಿಕ ದಾಹ) ಹೀಗಿರುವಲ್ಲಿ ನಮ್ಮ ಭಾಷೆಯನ್ನು ಕಲಿಯಿರಿ ಎಂದು ಹೇಳಬಹುದು. ಪ್ರಭುತ್ವ, ದೇಶಿಯ ಭಾಷೆಗಳಿಗೆ ಪ್ರೋತ್ಸಾಹ ಕೊಡಬಹುದು. ಆದರೆ ಕಲಿಯುವುದಕ್ಕೆ ಮುಂದೆ ಬರುವವರ ಸಂಖ್ಯೆ ಕಡಿಮೆ. ಯಾಕೆಂದರೆ ಪ್ರಭುತ್ವವೂ ಸೇರಿದಂತೆ ಯಾರೂ ದೇಶೀಯ ಭಾಷೆಯಲ್ಲಿ ಕಲಿತವರಿಗೆ ಉದ್ಯೋಗದ ಭರವಸೆ ಕೊಡಲಾರರು. ವಿದೇಶಿ ಬಂಡವಾಳ ಶಾಹಿಗಳು ಇಂಗ್ಲೀಷ್ ಕಲಿತವರಿಗೆ ಉದ್ಯೋಗದ ಭರವಸೆ ಕೊಡಬಲ್ಲರೇ ಎಂದರೆ ಇಲ್ಲ. ಆದರೆ ವಾಸ್ತವ ಅದನ್ನು ಮಾಡಿ ತೋರಿಸುತ್ತಿದೆ. ಇದರೊಂದಿಗೆ ಇಂಗ್ಲೀಷ್‌ನ ಕುರಿತಾದ ಪಾರಂಪರಿಕ ವ್ಯಾಮೋಹವೂ ಸೇರಿಕೊಂಡು ದೇಶೀಯ ಭಾಷೆಗಳು ಶಿಥಿಲವಾಗುತ್ತಿವೆ. ಇಲ್ಲಿಯೂ ಕೂಡ ಪ್ರಭುತ್ವ ಮೂಕ ಸಾಕ್ಷಿಯಾಗಿ ಕುಳಿತಿರಬೇಕಾಗುತ್ತದೆ.

ಈ ಪರಿಸ್ಥಿತಿಯಲ್ಲಿ ದೇಶದ ರಾಜಕಾರಣ ಹೇಗಿರುತ್ತದೆ ಎಂಬುದಕ್ಕೆ ಪ್ರಸ್ತುತ ರಾಜಕಾರಣವನ್ನು ನೋಡಬೇಕು. ರೈತಪರ ಘೋಷಣೆಗಳಾಗಲಿ, ಉದ್ಯೋಗದ ಭರವಸೆಯಾಗಲಿ, ಸಾಮಾಜಿಕ–ಶೈಕ್ಷಣಿಕ ಸುಧಾರಣೆಗಳಾಗಲಿ, ಸಾಂಸ್ಕೃತಿಕ ಕಾರ್ಯ ಯೋಜನೆಗಳಾಗಲಿ, ಭ್ರಷ್ಟಾಚಾರ–ಲಂಚಗುಳಿತನಗಳ ನಿವಾರಣೆಯಾಗಲಿ, ಆಡಳಿತ ವಿಕೇಂದ್ರೀಕರಣವಾಗಲಿ, ದಲಿತರ–ಮಹಿಳೆಯರ–ಶೋಷಿತರ–ನಿರ್ವಸಿತರ ಉದ್ಧಾರವಾಗಲಿ, ಆರ್ಥಿಕ ಸ್ವಾವಲಂಬನೆ, ಸಮಾಜಕಲ್ಯಾಣ ಕಾರ್ಯಕ್ರಮಗಳಾಗಲಿ ಈಗಿನ ರಾಜಕೀಯದ ಪ್ರಧಾನ ಆದ್ಯತೆಗಳಲ್ಲ. ಇವೆಲ್ಲ ಎರಡನೆಯ, ಮೂರನೆಯದು ಅಥವಾ ಇಲ್ಲವೇ ಇಲ್ಲವೆನ್ನಬಹುದಾದ ವಿಚಾರಗಳು. ಕೆಲವೊಂದು ಎಡ ಪಕ್ಷಗಳನ್ನು ಹೊರತು ಪಡಿಸಿದರೆ ಎಲ್ಲರಿಗೂ ಪ್ರಧಾನ ಆದ್ಯತೆ ಧರ್ಮ.

ಧರ್ಮ ಯಾಕೆ ಪ್ರಧಾನ ಆದ್ಯತೆಯಾಗುತ್ತಿದೆ ಎಂದರೆ ಅನ್ಯ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಜನರ ಮತಗಳನ್ನು ಪಡೆಯಬಲ್ಲೆವು ಎನ್ನುವ ಆರ್ಥಿಕ ಚೈತನ್ಯ ಪ್ರಭುತ್ವಕ್ಕಿಲ್ಲ ಎಂಬ ಅರಿವು ಪಕ್ಷಗಳಿರುವುದರಿಂದ. ಅಂಥಲ್ಲಿ ಭಾವನಾತ್ಮಕವಾದ ಧರ್ಮದ ಒಲವನ್ನು ಮತಗಳಿಕೆಗಾಗಿ ಬಳಸಿಕೊಳ್ಳುವ ಸ್ಥಿತಿ ಈಗಿನ ರಾಜಕೀಯ ಪಕ್ಷಗಳದ್ದು. ಇಲ್ಲಿ ಕೆಲವು ಪಕ್ಷಗಳು ಬಹುಸಂಖ್ಯಾತರ ಪರ. ಇನ್ನು ಕೆಲವು ಪಕ್ಷಗಳು ಜಾತಿ ರಾಜಕಾರಣ, ಅಲ್ಪಸಂಖ್ಯಾತರ ತುಷ್ಟೀಕರಣ ನಡೆಸುತ್ತಲೇ ಜಾತ್ಯಾತೀತ ಎಂಬ ಹಣೆ ಪಟ್ಟಿ ಹೊಂದಿರುವಂಥವು.

ಈವತ್ತು ಅಲ್ಪಸಂಖ್ಯಾತರಿಂದ ಬಹುಸಂಖ್ಯಾತರ ಮಾನ, ಪ್ರಾಣ, ಸಂಸ್ಕೃತಿಗೆ ಅಪಾಯವಿದೆ ಎಂಬ ಭಾವನಾತ್ಮಕ ಭೀತಿಯನ್ನು ಬಹು ಸಂಖ್ಯಾತ ಸಮುದಾಯದಲ್ಲಿ ಹರಡಿ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಕ್ಕೆ ಪ್ರಚೋದಿಸುವ ಕೆಲವು ಪಕ್ಷಗಳು ತಾವು ಬಹುಸಂಖ್ಯಾತರ ರಕ್ಷಕರೆಂಬಂತೆ ವರ್ತಿಸುತ್ತಿವೆ. ಅದರ ಮೂಲ ಉದ್ದೇಶ ಮತಗಳನ್ನು ಬಾಚುವುದಷ್ಟೇ. ಇದಕ್ಕೆ ಪ್ರತಿಯಾಗಿ ಇನ್ನು ಕೆಲವು ಪಕ್ಷಗಳು ಅಲ್ಪಸಂಖ್ಯಾತರ ಮೇಲೆ ನಡೆಯುವ ದೌರ್ಜನ್ಯದಿಂದ ದೇಶದ ಜಾತ್ಯಾತೀತ ಸ್ವರೂಪಕ್ಕೆ ಧಕ್ಕೆ ಬರುತ್ತದೆ; ಅಲ್ಪ ಸಂಖ್ಯಾತರಿಂದ ಬಹುಸಂಖ್ಯಾತರಿಗೆ ತೊಂದರೆಯಾಗಲು ಸಾಧ್ಯವಿಲ್ಲ ಎಂದೆಲ್ಲ ಹೇಳುತ್ತಿವೆ.

ಅದು ನಿಜ. ಅಲ್ಪ ಸಂಖ್ಯಾತರು ಬಹುಸಂಖ್ಯಾತರ ಧರ್ಮ, ಸಂಸ್ಕೃತಿಗೆ ಹಾನಿ ತರಲಾರರು. ಆದರೆ ಹಾಗೆ ಆಗಬಹುದು ಎಂಬ ಭಾವನಾತ್ಮಕ ಭೀತಿಯನ್ನು ಜನಸಮುದಾಯದಲ್ಲಿ ಹರಡಲು ಯೋಗ್ಯವಾದ

ಸನ್ನಿವೇಶ ಸೃಷ್ಟಿಸಿ ಕೊಟ್ಟವರಾರು ? ಇದೇ ಜಾತ್ಯಾತೀತರು ಅಧಿಕಾರದಲ್ಲಿದ್ದಾಗ ಅವರು ತೋರಿದ ನಡವಳಿಕೆಗಳು. ಯಾವುದೇ ಪ್ರಭುತ್ವವಿರಲಿ, ಅನ್ಯಾಯ ಅನಾಚಾರ ಅಪರಾಧಗಳು ನಡೆದಾಗ ತಪ್ಪಿತಸ್ಥರನ್ನು ಹುಡುಕಿ ಶಿಕ್ಷಿಸಬೇಕು. ಅದು ಅದರ ಮೊದಲ ಕೆಲಸ. ಆದರೆ ಇಲ್ಲಾದುದು ಅದಲ್ಲ. ಅಪರಾಧಿ ತಪ್ಪಿತಸ್ಥನೇ ಎಂಬುದಕ್ಕಿಂತ ಮುಖ್ಯವಾಗಿ ಆತ ಯಾವ ಧರ್ಮಕ್ಕೆ ಸೇರಿದವನು ಎಂಬುದನ್ನು ಹುಡುಕುವ ಕೆಲಸ. ಅಲ್ಪ ಸಂಖ್ಯಾತರಿಂದ ಒಟ್ಟಾಗಿ ಬರುವ ಮತಗಳು ಹಿಂದಿನ ಜಾತ್ಯಾತೀತರೆನಿಸಿಕೊಂಡ ಪ್ರಭುತ್ವ ವರ್ಗಕ್ಕೆ ಬೇಕಾಗಿದ್ದವು. ಅಂಥಲ್ಲಿ ಅಲ್ಪಸಂಖ್ಯಾತರ ತಪ್ಪುಗಳನ್ನು ದಂಡಿಸಿದರೆ ಮತ ದಕ್ಕದೆ ಹೋಗಬಹುದಾದ ಅಳುಕು. ಅಂದರೆ ಬಹುಸಂಖ್ಯಾತರ ಮತಗಳು ಈ ಪ್ರಭುತ್ವಗಳಿಗೆ ಬೇಕಾಗಿರಲಿಲ್ಲವೆಂದಲ್ಲ. ಬೇಕಿತ್ತು. ಅದಕ್ಕಾಗಿ ಆರ್ಥಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ರೂಪಿಸಿದವು. ಕನಿಷ್ಠ ಕೂಲಿ ಪದ್ಧತಿ, ಕಾರ್ಮಿಕ ಕಾಯ್ದೆ, ಭೂಮಸೂದೆಗಳನ್ನೆಲ್ಲ ಇದರಲ್ಲಿ ಹೆಸರಿಸಬಹುದು. ಅಂದಿನ ಪ್ರಭುತ್ವಕ್ಕೆ ಈ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಚೈತನ್ಯ ಇತ್ತು. ಆದರೆ ಈಗ ಇಲ್ಲ. ಅದಕ್ಕೇ ಈಗಿನ ಪ್ರಭುತ್ವಕ್ಕೆ ಧರ್ಮ ಒಂದನ್ನುಳಿದು ಬೇರಾವ ಕಾರ್ಯಕ್ರಮಗಳೂ ಕಾಣಿಸುತ್ತಿಲ್ಲ.

ಈ ರೀತಿಯಲ್ಲಿ ಅಲ್ಪ ಸಂಖ್ಯಾತರ ತಪ್ಪುಗಳನ್ನು ಮನ್ನಿಸಿದ್ದರ ಫಲ ಏನು ? ಅಲ್ಪ ಸಂಖ್ಯಾತರೆಂದರೆ ತಪ್ಪುಗಳನ್ನು ಮಾಡಿ ತಪ್ಪಿಸಿಕೊಳ್ಳಬಹುದು ಎಂಬ ನಂಬಿಕೆ ನೆಲೆವೂರಲು ಅವಕಾಶವಾಯಿತು. ಅದು ಬಹಸಂಖ್ಯಾತರಲ್ಲಿ ಅಭದ್ರತೆಯ ವಾತಾವರಣ ಸೃಷ್ಟಿಯಾಗಲೂ ಕಾರಣವಾಯಿತು. ಇದಕ್ಕೆಲ್ಲ ಪ್ರಭುತ್ವ, ಅಲ್ಪಸಂಖ್ಯಾತರಿಗೆ ಭಾವನಾತ್ಮಕ ಭದ್ರತೆ ಒದಗಿಸುವುದು ಎಂದು ನುಣುಚಿಕೊಳ್ಳಲಾಗದು. ಭಾವನಾತ್ಮಕ ಭದ್ರತೆ ಎಂದರೆ ಅಪರಾಧವನ್ನು ಸಮರ್ಥಿಸುವುದಲ್ಲ. ಅಲ್ಲದೆ ಅಲ್ಪಸಂಖ್ಯಾತರಿಗಿರಲಿ, ಬಹು ಸಂಖ್ಯಾತರಿಗಿರಲಿ ಭಾವನಾತ್ಮಕ ಭದ್ರತೆ ಒದಗಿಸುವುದು ಪ್ರಭುತ್ವದ ಕರ್ತವ್ಯವಾಗಿರಬೇಕಾಗಿಲ್ಲ. ರಾಜ್ಯಾಂಗೀಯ ಭದ್ರತೆ ಒದಗಿಸುವುದಷ್ಟೇ ಅದರ ಕರ್ತವ್ಯ. ಭಾವನಾತ್ಮಕ ಭದ್ರತೆ ಏನಿದ್ದರೂ ಅದು ಜನರ ನಡುವೆ ಕಾಣಿಸಿಕೊಳ್ಳಬೇಕಾದ್ದು. ಅದಕ್ಕೆ ಪೂರಕವಾದ ಸನ್ನಿವೇಶವನ್ನು ಪ್ರಭುತ್ವ ನಿರ್ಮಿಸಿಕೊಟ್ಟರೆ ಸಾಕಾಗುತ್ತದೆ.

ಆದರೆ ರಾಜ್ಯಾಂಗೀಯವಾಗಿ ಅಲ್ಪಸಂಖ್ಯಾತರಿಗೆ ಕೊಡಮಾಡಿದ ಸವಲತ್ತುಗಳು ಅವರು ಬಹು ಸಂಖ್ಯಾತರ ಮೇಲೆ ದೌರ್ಜನ್ಯ ಎಸಗದಿರಲಿ ಎಂಬುದಕ್ಕಾಗಿ. ಈವತ್ತಿಗೂ ಸಹ ಅಲ್ಪಸಂಖ್ಯಾತರು ಏನೇ ಮಾಡಲಿ ಅದನ್ನು ಸಮರ್ಥಿಸುವ ಚಾಳಿ ಬಿಟ್ಟಿಲ್ಲ. ಒಬ್ಬ ಬಹುಸಂಖ್ಯಾತ ಕೋಮಿನ ವ್ಯಕ್ತಿ ಅಲ್ಪಸಂಖ್ಯಾತ ಹೆಣ್ಣು ಮಗಳ ಮೇಲೆ ಅತ್ಯಾಚಾರವೆಸಗಿದರೆ ಅದು ದಬ್ಬಾಳಿಕೆ ಎನಿಸುತ್ತದೆ. ಆದರೆ ಅಲ್ಪಸಂಖ್ಯಾತ ಕೋಮಿನ ವ್ಯಕ್ತಿ ಬಹುಸಂಖ್ಯಾತ ಕೋಮಿನ ಹೆಂಗಸಿನ ಮೇಲೆ ಅತ್ಯಾಚಾರವೆಸಗಿದರೆ, "ಬಹು ಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ಗೂಬೆ ಕೂರಿಸುವುದಕ್ಕಾಗಿಯೇ ಮಾಡಿದ ಪಿತೂರಿ" ಎಂಬ ವ್ಯಾಖ್ಯಾನವೂ ಬರುತ್ತದೆ. ಸತ್ಯಾಸತ್ಯತೆಯ ಪರಾಮರ್ಶೆ ನಡೆಯುವ ತನಕ ಈ ರೀತಿಯ ವ್ಯಾಖ್ಯಾನ ಕೊಡುವುದು ಸರಿಯಲ್ಲ. ದುಷ್ಟತನ ಬಹುಸಂಖ್ಯಾತರಿಗೆ ಮಾತ್ರ ಸೀಮಿತವಾದದ್ದಲ್ಲ. ಇಂಥ ಸಂದರ್ಭಗಳಲ್ಲಿ ಅಲ್ಪಸಂಖ್ಯಾತರ ದೃಷ್ಟಿಯಲ್ಲೋ, ಜಾತ್ಯಾತೀತ ದೃಷ್ಟಿಯಲ್ಲೋ, ಘಟನೆಯನ್ನು ವ್ಯಾಖ್ಯಾನಿಸಬೇಕಾದಲ್ಲ. ಮನುಷ್ಯರಾಗಿ ನೋಡಬೇಕು. ಇಂಥ ಘಟನೆಯೊಂದನ್ನು ಯಾರು ಯಾರ ಮೇಲೆಯೇ ನಡೆಸಿರಲಿ, ದೌರ್ಜನ್ಯಕ್ಕೊಳಗಾದ ವ್ಯಕ್ತಿಯ, ಆ ಕುಟುಂಬದನೋವು ಅರಿವಾಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. "ಶಿಕ್ಷೆಯಾದ ಮಾತ್ರಕ್ಕೆ ನಡೆದ ಘಟನೆ ಸರಿಯಾಗುತ್ತದೆಯೇ ?" ಎಂಬ ದಾರ್ಶನಿಕ ವಾದ ಬೇಡ. ಏನಲ್ಲದಿದ್ದರೂ ಅದರಿಂದ, ನೊಂದ ವ್ಯಕ್ತಿಗೆ ತೃಪ್ತಿಸಿಗುತ್ತದೆ. ಈ ನೆಲದ ಕಾನೂನಿನ ಬಗ್ಗೆ ನಂಬಿಕೆ-ಗೌರವ ಮೂಡಿಬರುತ್ತದೆ. ತನಗಾದ ಅನ್ಯಾಯವನ್ನು ಪ್ರತಿಭಟಿಸುವವರಿದ್ದಾರೆ ಎಂಬ ನೈತಿಕ ಶಕ್ತಿ

ಬರುತ್ತದೆ. ದುರದೃಷ್ಟವಶಾತ್ ಈ ದೇಶದಲ್ಲಿ ಬಹುಸಂಖ್ಯಾತರ ಮೇಲೆ ದೌರ್ಜನ್ಯ ನಡೆದಾಗ ಅದನ್ನು ಖಂಡಿಸಿದವರು ಅಲ್ಪ. ಅದರಲ್ಲೂ ಅಂಥದನ್ನು ಖಂಡಿಸಿದ ಅಲ್ಪಸಂಖ್ಯಾತರು ಇನ್ನೂ ಅಲ್ಪ.

ಅಂದರೆ ಇತ್ತೀಚೆಗೆ ಬಹುಸಂಖ್ಯಾತರ ಪರವೆಂದು ಹೇಳಿಕೊಳ್ಳುತ್ತಿರುವವರು ಅಲ್ಪಸಂಖ್ಯಾತರ ಮೇಲೆ ನಡೆಸುವ ಅತ್ಯಾಚಾರ, ಲೂಟಿ, ಕೊಲೆಗಳು ಸಮರ್ಥನೀಯವೆಂದಲ್ಲ. ಅದು ಖಂಡನಾರ್ಹವೇ. ಆದರೆ ಅದಕ್ಕೆಲ್ಲ ಅವರು 'ಬಹುಸಂಖ್ಯಾತರು ಅಭದ್ರರಾಗಿದ್ದಾರೆ' ಎಂದು ಕೊಡುವ ಕಾರಣವೊಂದಿದೆ. ಆ ಕಾರಣವನ್ನು ಬಹುಸಂಖ್ಯಾತ ಸಾಮಾನ್ಯ ಜನತೆ, ನಿಜವೆಂದು ಭ್ರಮಿಸಲು ಕಾರಣವಾದ ಸನ್ನಿವೇಶ ಮಾತ್ರ ಈ ಮೇಲಿನದು. ಅದರಿಂದ ದೇಶ ರಣಭೂಮಿಯಾಗುತ್ತಲಿದೆ. ಒಂದಷ್ಟು ಜನ ಅಧಿಕಾರ ಹಿಡಿಯುತ್ತಾರೆ. ಯಾವ ಪ್ರಗತಿ ಪರ ಕಾರ್ಯಕ್ಕೂ ತೊಡಗದೆ ಧಾರ್ಮಿಕ ಭಾವನೆಯನ್ನು ಕೆರಳಿಸಲು ತಾವು ಸುಖಲೋಲುಪ್ತರಾಗುತ್ತಾರೆ. ಇನ್ನೂ ಒಂದಷ್ಟು ಜನ ಹಣ ಬಾಚಿಕೊಳ್ಳುತ್ತಾರೆ. ಮತ್ತೊಂದಷ್ಟು ವಿದೇಶೀಯರು ದೇಶವನ್ನು ಕೊಳ್ಳೆ ಹೊಡೆಯುತ್ತಾರೆ. ನಾವು ಮಾತ್ರ ಯಾರು ನಮ್ಮವರು, ಯಾರು ಹೊರಗಿನವರು ಎಂಬುದರಲ್ಲೇ ಮಗ್ನರಾಗಿ ನಮಗೆ ನಾವೇ ಕುಸಿದು ಹೋಗುತ್ತೇವೆ. ಮಿಕ್ಕಂತೆ ಈ 'ಧರ್ಮ ರಾಜಕಾರಣ'ದಿಂದ ಹೊರಗುಳಿದಿರುವಂಥವು ಎಡ ಪಕ್ಷಗಳು. ಅವು ಹೇಗೆ ಹೊರಗುಳಿದಿವೆ ಎನ್ನುವುದನ್ನು ಗಮನಿಸಬೇಕು. ಮೊದಲನೆಯದಾಗಿ ಜಾಗತೀಕರಣ, ಪ್ರಭುತ್ವಕ್ಕೆ ತಂದೊಡ್ಡಿದ ಹಲವಾರು ಸಮಸ್ಯೆಗಳನ್ನು ಸಮರ್ಥವಾಗಿ ನಿರ್ವಹಿಸಲಾಗದ ಅಸಹಾಯಕತೆಯಲ್ಲಿ 'ಧರ್ಮರಾಜಕಾರಣ' ಪ್ರಭಾವಶಾಲಿಯಾಗಿರುವಂಥದು ಮತ್ತು 'ಜನ ಸಮುದಾಯದ ಒಳಿತು' ಎಂಬ ಧರ್ಮದ ಮೂಲ ಆಶಯವೇ ಭಿನ್ನವಾಗಿ ವ್ಯಾಖ್ಯಾನಿಸಲ್ಪಟ್ಟು ಜನ ಸಮುದಾಯಕ್ಕೆ ಕೇಡುಕು ಸೃಷ್ಟಿಸುವಂಥದ್ದು ಪ್ರಸ್ತುತ ಸ್ಥಿತಿ. ಜಾಗತೀಕರಣದ ನೆರಳಲ್ಲಿ ನಡೆಯುವ ಈ ಸ್ಥಿತಿಯ ನಿರ್ಮಾಣಕ್ಕೆ ಎಡಪಕ್ಷಗಳು ಕಾರಣವಲ್ಲ. ಅಂದರೆ ಜಾಗತೀಕರಣ ಒಡಂಬಡಿಕೆಯನ್ನು ಒಪ್ಪಿಕೊಂಡುದರಲ್ಲಾಗಲಿ, ಅದನ್ನು ಮುನ್ನಡೆಸುತ್ತಿರುವು ದರಲ್ಲಾಗಲಿ ಅವು ಪಾತ್ರವಹಿಸಿಲ್ಲ. ಮೊದಲಿನಿಂದಲೇ ಜಾಗತೀಕರಣವನ್ನು ವಿರೋಧಿಸುತ್ತಿದ್ದ ಎಡ ಪಕ್ಷಗಳು ಈಗಲೂ ವಿರೋಧಿಸುತ್ತಿವೆ. ಇದು ಅವಕ್ಕಿರುವ ನೈತಿಕ ಶಕ್ತಿ.

ಎರಡನೆಯದಾಗಿ ಧರ್ಮವನ್ನು ರಾಜಕೀಯಕ್ಕೆ ಬೆರೆಸುವುದು ಎಡ ಪಕ್ಷಗಳಿಗೆ ಸೈದ್ಧಾಂತಿಕವಾಗಿ ನಿಷೇಧಿಸಲ್ಪಟ್ಟ ವಿಚಾರ. ಮತ್ತು ಅವು ಮಿಕ್ಕೆಲ್ಲ ಪಕ್ಷಗಳಿಗಿಂತ ಹೆಚ್ಚು ಸೈದ್ಧಾಂತಿಕ ನಿಷ್ಠೆ ಉಳ್ಳವುಗಳು. ಇಂಥಲ್ಲಿ ಎಡ ಪಕ್ಷಗಳ ಸೈದ್ಧಾಂತಿಕ ಧೋರಣೆಗಳಲ್ಲಿ ಹುಳುಕುಗಳನ್ನು ಹುಡುಕಬಹುದೇ ಹೊರತು ಹುಳುಕುಗಳೇ ಅವುಗಳ ಸಿದ್ಧಾಂತವೆನ್ನಲು ಸಾಧ್ಯವಿಲ್ಲ. ಅವುಗಳ ಸಿದ್ಧಾಂತ ಹುಟ್ಟಿಕೊಂಡದ್ದೇ ಜೀವ ಪರ ದೃಷ್ಟಿಯಲ್ಲಿ. ಅಂದರೆ ಬಲ ಪಂಥೀಯ ಚಿಂತನೆಗಳು ಜೀವ ಪರವಲ್ಲವೆಂದಲ್ಲ. ಎಲ್ಲ ಚಿಂತನೆಗಳಲ್ಲಿಯೂ ಮೂಲದಲ್ಲಿ ಜೀವ ಪರ ದೃಷ್ಟಿ ಇರುತ್ತದೆ. ಆದರೆ ಬಲಪಂಥ ಅಲೌಕಿಕ ನೆಲೆಯ ಅಸ್ಪಷ್ಟ ಹಿನ್ನೆಲೆಯನ್ನೂ ಒಳಗೊಂಡಿದ್ದು ಅಲ್ಲಿ ವಿಕೃತೀಕರಣಕ್ಕೆ ಹೆಚ್ಚು ಅವಕಾಶವಿದೆ. ಆದರೆ ಎಡ ಪಂಥೀಯ ಸಿದ್ಧಾಂತ ಅಲೌಕಿಕ ವ್ಯಾಪ್ತಿಯ ಬಗ್ಗೆ ಆಸಕ್ತವಾಗಿರದೆ ಹೆಚ್ಚು ಖಚಿತ, ನಿರ್ದಿಷ್ಟ ವ್ಯಾಖ್ಯಾನಕ್ಕೆ ಸಿಲುಕುವಂಥದ್ದು. ಆದಕಾರಣ ಅದು ಬಲಪಂಥದಷ್ಟು ಪ್ರಮಾಣದಲ್ಲಿ ವಿಕೃತೀಕರಣಕ್ಕೆ ಒಳಗಾಗದು. ಅಂಥಲ್ಲಿ ಅದು ವಿಕೃತೀಕರಣಕ್ಕೆ ಒಳಗಾಗುವ ಸಾಧ್ಯತೆ ಇರುವುದು ಎಡಪಂಥಕ್ಕೆ ಸರ್ವಾಧಿಕಾರ ಲಭ್ಯವಾದಾಗ ಮಾತ್ರ. ಅದೂ ದಬ್ಬಾಳಿಕೆಯ ಆಡಳಿತದಲ್ಲಿ. ಅದೃಷ್ಟವಶಾತ್ ಭಾರತದಲ್ಲಿ ಜನತಾಂತ್ರಿಕ ವ್ಯವಸ್ಥೆ ಇದೆ. ಆದ್ದರಿಂದ ಎಡಪಂಥ ಜನಪರ ಕಾರ್ಯಕ್ರಮಗಳ ಬಗ್ಗೆ, ಲೌಕಿಕ ವ್ಯಾಪ್ತಿಯ ಯೋಜನೆಗಳ ಬಗ್ಗೆ ಹೆಚ್ಚು ಆಸಕ್ತವಾಗಿರಬೇಕಾಗುತ್ತದೆ.

ಮೂರನೆಯದಾಗಿ ಎಡಪಕ್ಷಗಳ ಸಿದ್ಧಾಂತದಲ್ಲಿ ಸೇರಿ ಹೋಗಿರುವ ವರ್ಗ ರಹಿತ ಸಮಾಜ ನಿರ್ಮಾಣದ ಆಶಯ. ಹಿಂದಿನ ಸೋವಿಯತ್ ರಷ್ಯಾದ ಕಮ್ಯುನಿಸ್ಟ್ ಆಡಳಿತದ ದಬ್ಬಾಳಿಕೆಯ ಆಡಳಿತ, ನಿಷ್ಠುರ ಮನೋಭಾವಗಳನ್ನೆಲ್ಲ ಖಂಡಿಸುವಾಗಲೂ ಅದರ ಸಮಾನತೆಯ ಆಶಯವನ್ನು ಪುರಸ್ಕರಿಸಬೇಕಾಗುತ್ತದೆ. ಬಂಡವಾಳಶಾಹಿ ಅಮೇರಿಕಾದ ವಿರುದ್ಧ ಸಟೆದು ನಿಂತಿದ್ದ ಸೋವಿಯತ್ ರಷ್ಯಾ ಅಮೇರಿಕಾದ ವಿರುದ್ಧ ಕಾರ್ಯಾಚರಣೆ ನಡೆಸಿದ್ದು, ಅನ್ಯರಾಷ್ಟ್ರಗಳನ್ನು ಎತ್ತಿಕಟ್ಟಿದ್ದು, ತನ್ನ ತತ್ವವನ್ನು ಪ್ರಚುರಪಡಿಸಿದ್ದು ಎಲ್ಲವೂ ನಿಜ. ಆದರೆ ಅದು ತನ್ನ ಸಮಾನ ಬಲವುಳ್ಳ ರಾಷ್ಟ್ರದೊಡನೆ ಸೈದ್ಧಾಂತಿಕ ಹೋರಾಟ ನಡೆಸಿತ್ತೇ ವಿನಃ ದುರ್ಬಲ ರಾಷ್ಟವನ್ನು ಲೂಟಿ ಹೊಡೆಯಲಿಲ್ಲ. ಭಾರತದೊಡನೆ ದೀರ್ಘ ಕಾಲದ ಸ್ನೇಹವಿದ್ದಾಗ್ಯೂ. ಭಾರತದ ನಾನಾ ಅಭಿವೃದ್ಧಿ ಕಾರ್ಯಗಳಿಗೆ ದೊಡ್ಡ ಪ್ರಮಾಣದ ನೆರವನ್ನೇ ನೀಡಿದ್ದಾಗ್ಯೂ ಅದೆಂದೂ ಕಮ್ಯುನಿಸಂ ನ ಒತ್ತಡವನ್ನು ಭಾರತದ ಮೇಲೆ ಹೇರಿದ್ದಿಲ್ಲ. (ಈವತ್ತು ಅಮೇರಿಕಾ ಮತ್ತದರ ಮಿತ್ರಕೂಟ ಜಾಗತೀಕರಣವನ್ನು ಒಪ್ಪಿಕೊಳ್ಳುವಂತೆ ದುರ್ಬಲ ರಾಷ್ಟಗಳಿಗೆ ಎಂಥ ಒತ್ತಡ ತರುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ವಿಚಾರ). ಆದ್ದರಿಂದಲೇ ಎಡ ಪಕ್ಷಗಳಲ್ಲಿ ಈಗಲೂ ಒಂದು ರೀತಿಯ ಸಮಾನತೆಯ ಸಮಾಜ ನಿರ್ಮಾಣದ ಆಶಯವಿದೆ. ಅದಕ್ಕಾಗಿ ಅವು ಧರ್ಮರಾಜಕಾರಣದ ನಡುವೆಯೂ ಜನಪರ ಕಾರ್ಯಕ್ರಮಗಳ ಬಗ್ಗೆ ಕೆಲವು ಮಾತುಗಳನ್ನು ಆಡುತ್ತಿವೆ.

ಹೀಗಿರುವಲ್ಲಿ ನಾವು ಏನು ಮಾಡಬಹುದು ?





ಆಶಾ ನನ್ನ ಆಶಾ

– ಬೇಳೂರು ಸುದರ್ಶನ

ಎಲ್ಲಿರಬಹುದು ಈ ಆಶಾ ಎಟ್ ಯಾಹೂ ಡಾಟ್ ಕಾಮ್
ಎಂಬ ಹುಡುಗಿ/ಹುಡುಗ/ಮುದುಕ/ಮುದುಕಿ/ಪೋರ?
ಯಾವ ಕಂಪ್ಯೂಟರಿನಲ್ಲಿ ಟಕಟಕಾಯಿಸುತ್ತಿರಬಹುದು ಯಾವ
ಪ್ರಾಸೆಸರಿನಲ್ಲಿ ಎಷ್ಟು ರಭಸವಾಗಿ ಧುಮ್ಮಿಕ್ಕಬಹುದು ಊಹಿಸಿದ್ದೀರ?

ಎಲ್ಲಿಂದಲೋ ಬರೆಯುತ್ತಾಳೆ ಭ್ರಮಾಧೀನ ವಿಶ್ವದೊಳಗೆ
ಬೆಳಕಿನಂತೇ ತೂರಿ ನನ್ನ ಮೇಜಿನ ಮೇಲೆ ಬಿದ್ದಿದೆ ಅವಳ ಮೇಲು.
ಏನೋ? ನೀನು ಯಾರೋ? ಬೇಕಾ ನನ್ನ ಸ್ನೇಹ?
ಬರೀತೀಯಾ ಕಾಗದ? ಕೇಳಿದ್ದಾಳೆ ಸ್ಫುಟವಾಗಿ
ಎರಡೇ ವಾಕ್ಯಗಳಲ್ಲಿ ಆಶಾಭಾವನೆಯಿಂದ ಇದ್ದೀತೆ
ಒಳಗೊಳಗೆ ಹತಾಶೆಯ ದನಿ ಹುಡುಕಿದರೆ ಸಿಕ್ಕೀತೇನೋ
ಅಪ್ಪ-ಅಮ್ಮ ಬಿಟ್ಟುಹೋಗಿರುವ ಸೌಕರ್ಯಗಳು
ಚೆಲ್ಲಾಪಿಲ್ಲಿಯಾಗಿ ಫ್ರಿಜ್ಜಿನಲ್ಲಿ . ಆಶಾ ನನ್ನ ಆಶಾ

ಎಂದು ಕರೆಯಲೆ? ನಿನ್ನ ಹುಡುಕಲೇಬೇಕು
ಮಾತುಕತೆ ಕೋಣೆಯಲ್ಲಾದರೂ ಮುತ್ತಿಡುವ
ಗೆಳತಿಯರನ್ನು ಅಂದುಕೊಂಡೇ ತಾಸುಗಳ
ಕಳೆಯುತ್ತ ಬಂದ ಹೊತ್ತೇ ಆಶಾ ಬರೆದ
ಪತ್ರ. ಕೊನೆಗೂ ಸಿಕ್ಕಿದಳಲ್ಲ ಅಂದರೂನೂ
ಒಳಗೆ ಮಲಗಿದ್ದಾಳೆ ಇವಳು ವಾಸ್ತವದಲ್ಲಿ ಮನೆಗೆಲಸ
ಮುಗಿಸಿ ಹೈರಾಣಾಗಿ ಕೇಬಲ್ ಸಿನಿಮಾ ಕೂಡ ಅರ್ಥವಾಗದೆ.
ನಾಳೆಗಳ ನಡುವೆ ಸಿಗಬಹುದು ಕೊಂಚ ಬ್ರೇಕ್ ಎಂದೆನಿಸಿ
ಮಗಳೂ ಒರಗಿದ್ದಾಳೆ ಸೋಫಾದಲ್ಲಿ ಹೋಮ್‌ವರ್ಕ್ ಮುಗಿಸದೆ.


ಬದುಕಿನ ತಿರುವುಗಳಲ್ಲಿ ಇಣುಕೋ ಹಾಗೆ ಬಾಗಿ ಕೈ ಚಾಚಿ
ಮಾನಿಟರಿನ ಪರದೆಯಾಚೆಗೂ ಆವರಿಸಿದ್ದಾಳೆ ಎಂಬ
ವಾಸ್ತವ ಭ್ರಮೆಯಲ್ಲಿ ನಾನು ತೇಲಿದ್ದೇನೆ ಇಲ್ಲಿ
ಇದೇ ನಿಜವೆಂದು ಮಳೆ ಬಿದ್ದ ನೆಲದ ವಾಸನೆ ಕಿಟಕಿ ತೂರುತ್ತ
ಆಶಾ ನನ್ನ ಆಶಾ ಎಂಬ ಪರದೆಹುಡುಗಿಯ ತುಟಿ
ಮೇಲೆ ಧೂಳು ಒರೆಸಬಹುದು ಬಿಡಿ ಒಳಗೆ ಮುದುಡಿರೋ
ಯಾವುದೋ ಯಾತನೆಯ ಪಕಳೆಗಳ ಅರಳಿಸಬಹುದೆ
ಹೇಳಿ ಭ್ರಮೆಯಲ್ಲಿ ಬದುಕಿಯೂ ಅಳಬಹುದೆ ಇವಳು?

ಎಷ್ಟೆಂದರೂ ಆಶಾ ನೀನು ದೇಹವಿಲ್ಲದ ಹುಡುಗಿ
ನಾನೋ ಇಲ್ಲಿ ಭೌತಿಕ ದೇಹ ಹೊತ್ತಿರುವೆ ಗೊತ್ತೇನೆ
ಇರಬಹುದು ನಾನೂ ನಿನಗೆ ಪ್ರೀತಿಯಿಲ್ಲದ ಆತ್ಮ
ಆಗಿರಬಹುದು ನೀನೇ ಮೋಹಕ ಗುಣಗಳ ರಾಣಿ
ಬದುಕೇ ನೀರ ಮೇಲಿನ ಗುಳ್ಳೆ
ಎಂದಮೇಲೆ ಇವೆಲ್ಲ ಸರಿಯೇ
ಇರಬಹುದು ಬಿಡು ಕೊನೆಗೆ
ಉಳಿಯೋದಿಷ್ಟೆ
ಮಾತುಕತೆ ವಿದಾಯದ ಹೊತ್ತು
ಆಶಾ ನೀನು ಯಾರೆ?

ಎರಡು ಕವಿತೆಗಳು

– ಜಿ.ಪಿ.ಬಸವರಾಜು

ಎಲ್ಲಿಹೋದವು ಹಕ್ಕಿ



ಹಸಿರು ರೆಕ್ಕೆಯ ಹಕ್ಕಿ
ಹಾರುತ್ತ ಬಂದುದ ಕಂಡೆ

ಆ ಹಕ್ಕಿ
ಹಾರುತ್ತ ಹಾರುತ್ತ
ಹಸಿರು ಮರವನು ಹೊಕ್ಕದ್ದು ಕಂಡೆ

ಒಂದೊಂದು ದಿಕ್ಕಿನಿಂದ ಒಂದೊಂದು ಹಕ್ಕಿ
ಹಾರುತ್ತ ಬಂದು
ಜಂಗಮ ಸ್ಥಾವರದಲ್ಲಿ ಲೀನವಾದುದ ಕಂಡೆ

ಕೊಂಬೆ ರೆಂಬೆಯ ಹಾಡು
ಎಲೆ ಎಲೆಯಲಿ ತೇಲಿ
ಗಾಳಿತೊಟ್ಟಿಲು ತೂಗುವುದ ಕಂಡೆ

ದ್ವೈತ ಅದ್ವೈತಗಳನೆಲ್ಲ ಮೀರಿ
ಹಕ್ಕಿ ಮರ ಒಂದಾದ
ಸಹಜ ಪ್ರೀತಿಯ ಉದಯ ಕಂಡೆ

2

ಹೂವೋ ಚಿಗುರೋ
ಎಲೆಯೋ ಹಸಿರೋ
ಒಗರೋ ಸಿಹಿಯೋ
ಮರಮರದ ನರನಾಡಿ
ಬಿಗಿಗೊಂಡು ಶೃತಿಯಾಗಿ
ಮೂಡಿಬಂತು ಹಾಡು
ಮರಮರವೆ ಮೈದುಂಬಿ
ಎಲ್ಲೆಲ್ಲು ತುಂಬಿ ತುಳುಕಿತು ಹಾಡು

3

ಈಗೆಲ್ಲಿ ಹೋದವು ಹಕ್ಕಿ
ಮರದ ಕೊರಳನು ಮಿಡಿದು
ಕೇಳುತ್ತಿದೆ ಶೋಕ ಗೀತೆ ಹಗಲು ಇರುಳು !

ಜೀವ ನದಿ

ಇದು ಹೀಗೆಯೇ :
ಬಿಸಿಲು ಕಾದರೆ
ಮಳೆ ಹೊಯ್ಯುತ್ತದೆ :
ಉತ್ತ ಭೂಮಿ
ಬಾಯಿ ಬಾಯಿ ಬಿಟ್ಟರೆ
ಮಳೆ ಹೊಯ್ಯುತ್ತದೆ :
ನೆಲದ ಮಕ್ಕಳು
ಮುಗಿಲಿಗೆ ಕಣ್ಣು ನೆಟ್ಟರೆ
ಮಳೆ ಹೊಯ್ಯುತ್ತದೆ .

2

ಉರಿ ಉರಿ ಬಿಸಿಲಲ್ಲಿ
ಲಂಟಾನ ಕಾಯುತ್ತದೆ
ಲಂಟಾನ ಹೂವು ನಳನಳಿಸುತ್ತದೆ
ಲಂಟಾನ ಛತ್ರಿಯ ಅಡಿಯಲ್ಲಿ
ಸಿಂಬೆ ಸುತ್ತಿದ ಉಬ್ಬಸದ ಹಾವು ಕಾಯುತ್ತದೆ :
ಜಡೆ ಕೆದರಿ ನಿಂತ
ಕಬ್ಬಿನ ಗದ್ದೆ ಕಾಯುತ್ತದೆ
ಹೊಂಬಣ್ಣದ ತೆನೆ ಹೊತ್ತ ಭತ್ತ ಕಾಯುತ್ತದೆ
ಅಂಗೈಯಗಲ ನೆರಳಲ್ಲಿ ಹಕ್ಕಿ ಕಾಯುತ್ತದೆ.



3


ಉರಿ ಬಿಸಿಲು ಬಿರಿದ ಭೂಮಿ
ಬರಿಗಾಲಲ್ಲಿ ಬುಟ್ಟಿಹೊತ್ತು
ಹೊಟ್ಟೆಗೇ ಕಣ್ಣು ನೆಟ್ಟು
ಸಾಗುವ ಮಂದಿ
ನಿತ್ಯ ಕಾಯುತ್ತಾರೆ
ಮೋಡ ಗೂಡುಗಟ್ಟಬಹುದೆಂದು
ಮಳೆ ಧಾರೆ ಧಾರೆ ಸುರಿಯಬಹುದೆಂದು.

4

ಪಾತ್ರದಲ್ಲಿ
ಪಾದ ಊರುವಷ್ಟೆ ನೀರು
ನದಿ ನಡೆದಷ್ಟೆ ಪಥ.

ದೂರದ ಮೋಡದ ಮೇಲೆ
ನಂಬಿಕೆ ಇಟ್ಟು ಸಾಗಿದೆ
ಕಾಲಾನುಕಾಲದ ಜೀವನದಿ.

ಕಿ.ರಂ. ಜೊತೆಗೊಂದು ಹರಟೆ



ನಡೆದಾಡುವ ಕಾವ್ಯ ಕೋಶ ಎಂದೇ ಹೆಸರಾದ ಕಿ.ರಂ. ನಾಗರಾಜ ಅವರು ಒಬ್ಬ ಅಪರೂಪದ ಕನ್ನಡ ಅಧ್ಯಾಪಕರು. ತಮ್ಮ ಉತ್ಕಟವಾದ ಕಾವ್ಯ ಪ್ರೀತಿ ಮತ್ತು ಆಳವಾದ ಅಧ್ಯಯನದಿಂದ ಕಿ.ರಂ ನಮ್ಮ ಹೆಮ್ಮೆಯ ಮೇಷ್ಟ್ರು. ಬರೆಯುವ ಪ್ರತಿಯೊಂದು ಆಲೋಚನೆಗಳನ್ನು ತಮ್ಮ ಸ್ವಂತ ಆಸ್ತಿ ಎಂದು ಪರಿಗಣಿಸುವ ಪಂಡಿತರ ನಡುವೆ ಕಿ.ರಂ ಇಂಥಾ ಯಾವ ಲೌಕಿಕ ಹೆಚ್ಚುಗಾರಿಕೆ ಬೆನ್ನತ್ತಿದವರಲ್ಲ. ಅವರ ಹಳೆಯ ಗೆಳೆಯ ಡಾ॥ ಕೆ.ವಿ. ನಾರಾಯಣ ಅವರು "ಸಾಂಸ್ಕೃತಿಕ ಕರ್ನಾಟಕವನ್ನು ಭೌತಿಕವಾಗಿ ಅನುಭವಿಸಿದವರಲ್ಲಿ ಶಿವರಾಮ ಕಾರಂತರ ನಂತರ ಕಿ.ರಂ ಒಬ್ಬರೇ' ಹೊರ ತೋರಿಕೆಯ ಅವರ ಅಸ್ತವ್ಯಸ್ತತೆಯ ಹಿನ್ನಲೆಯಲ್ಲಿ ಅವರ ಅತ್ಯುತ್ತಮ ಅಭಿರುಚಿ ಇದೆ" ಎಂದು ಗುರುತಿಸಿದ್ದಾರೆ. ಕಾವ್ಯ ಜಂಗಮ ಕಿ.ರಂ ಗೆ ನಿಂತಲ್ಲಿ ಕುಳಿತಲ್ಲಿ ಕಾವ್ಯಧ್ಯಾನ. ಬರೆದದ್ದೆ ಹಿರಿದೆನ್ನುವ ಶುಷ್ಕ ವಿದ್ವಾಂಸರ ಮಧ್ಯೆ ಬರೆಯದ ಮಾತಿನ ಬಲದಲ್ಲೇ ಅನೌಪಚಾರಿಕ ಸಾಹಿತ್ಯದ ಹರಟೆಗಳನ್ನೊಂದು ಅಪೂರ್ವ ಅನುಭವವನ್ನಾಗಿಸುತ್ತಾರೆ. ಅವರ ಮಾತಿನ ಬೆಳಕಿನಲ್ಲಿ ಕನ್ನಡದ ಕಾವ್ಯಪರಂಪರೆ ಬೆಳಗತೊಡಗುತ್ತಿದೆ. ಹೊಸ ಅರ್ಥಗಳು ಹೊಳೆಯತೊಡಗುತ್ತವೆ.

ಕಿ.ರಂ ಜೊತೆಗೆ ಕೆಲವು ಗೆಳೆಯರು ಸೇರಿ ನಡೆಸಿದ ಸಾಹಿತ್ಯಕ ಹರಟೆಯೊಂದರ ತುಣುಕುಗಳು ಇಲ್ಲಿವೆ. ಮಾತು ಕಾಗದಕ್ಕಿಳಿದಾಗ ಅದರ ಸತ್ವ ಕುಂದುವುದು ಸಹಜ. ಮಾತುಗಳ ಜಲಪಾತದಿಂದ ಹಿಡಿದ ಬೊಗಸೆ ನೀರಷ್ಟೆ ಇದು.

ಇವತ್ತು ಕಾವ್ಯದ ಪರಿಸ್ಥಿತಿ –ಪ್ರಾಮುಖ್ಯತೆ ಕುರಿತು : ಎಲ್ಲಾ ರೀತಿಯಿಂದ ಆಲೋಚಿಸಿದರೆ ಇಪ್ಪತ್ತನೇ ಶತಮಾನ ಕಾವ್ಯದ ನಿಜವಾದ ಕಾಲ. ನಮ್ಮಲ್ಲಾಗಲೀ ಪಶ್ಚಿಮದಲ್ಲಾಗಲಿ ಈ ಶತಮಾನವನ್ನು ಗಮನಿಸಿದರೆ, ಬಹಳ ಮುಖ್ಯವಾದ ತಿರುವುಗಳು ಕವಿಗಳಿಂದಲೇ ಪಡೆದಿರುವಂಥದ್ದು. ಎಲಿಯೆಟ್, ಯೇಟ್ಸ್, ಮಯ್ಕೋವಸ್ಕಿ, ಕನ್ನಡದಲ್ಲಿ ಕುವೆಂಪು, ಬೇಂದ್ರೆ, ಅಡಿಗ, ಕುಂಬಾರ, ಈ ಥರಹದ ಕವಿಗಳು, ಪೊಯೆಟ್ರಿ ಅನ್ನೋದೆ ಆಯಾ ಕಾಲದ ನಿಜವಾದ ವಿಮರ್ಶೆ. ಕಾವ್ಯ ಇವತ್ತು ಶುದ್ಧವಾದ ಪ್ರಕಾರವಾಗಿ ಉಳಿದಿಲ್ಲ. ರೆಟರಿಕ್ ಕ್ರಿಟಿಸಿಸಮ್ ಅಂತ ವ್ಯಾಲೆಟ್ ಸ್ಟೀವನ್ ಸನ್ ಕರೆಯುತ್ತಾನೆ. ನೀವು ಅಡಿಗರ ಕಾವ್ಯವನ್ನು ಕಾವ್ಯೇಕ ದೃಷ್ಟಿಯಿಂದ ನೋಡಲಿಕ್ಕಾಗುವುದಿಲ್ಲ. ಪಕ್ಕಾ ಸಾಮಾಜಿಕ ವಿಮರ್ಶೆ ಅದರೊಳಗಡೆ ಇರುತ್ತೆ. ನಮ್ಮ ಡೆಮಾಕ್ರಸಿಯ ಕ್ರಿಟಿಕ್ ಅಡಿಗ, ಅಥವಾ ಕಂಬಾರರು ತಮ್ಮ ಕಾವ್ಯದಲ್ಲಿ ವಸಹಾತುಶಾಹಿಯ ವಿಮರ್ಶೆಯನ್ನು ಮಾಡ್ತಾ ಇದ್ದಾರೆ.


ಕವಿತೆ ಅನ್ನೋಂಥಾದ್ದು ಹಿಂದೆ ಇದ್ದಂತಹ ಯಾವುದೋ ಬಹಳ ಸೂಕ್ಷ್ಮವಾದ ನವುರಾದ ಚಂದದ ಪ್ರಾಸಾನುಪ್ರಾಸಗಳ ಕುಣಿತವುಳ್ಳ ರಚನೆ. ಅನ್ನುವುದು ಹೊರಟು ಹೋಗಿದೆ.

ಅದಕ್ಕೆ ಬೇರೆಯದೇ ರೀತಿಯಾದಂಥ ಒಂದು ಉದ್ದೇಶ ಪ್ರಾಪ್ತವಾಗಿ, ಭಿನ್ನವಾಗಿ ಅದು ತನ್ನನ್ನ ತಾನು ತೋರಿಸಿಕೊಳ್ತಾ ಇದೆ. ಯಾವುದೇ ದೇಶ, ಭಾಷೆಗಳನ್ನ ಗಮನಿಸಿ ಈ ಮಾತು ಹೇಳಬಹುದು.

ಮೇಲು ನೋಟಕ್ಕೆ ಕಾವ್ಯ ತನ್ನ ಮಹತ್ವವನ್ನು ಕಳೆದು ಕೊಂಡಿರುವಂತೆ ಕಾಣಬಹುದು.

20ನೇ ಶತಮಾನದಲ್ಲಿ ತುಂಬಾ ಮಹತ್ವದ ಸಾಹಿತ್ಯಕ ಸಾಧನೆ ಸಾಧ್ಯವಾಗಿರುವಂಥದ್ದು ಪೊಯೆಟ್ರಿಯ ಮುಖಾಂತರವೇ. ಒಬ್ಬ ಬೊದಿಲೇರ್ ತನ್ನ ಕಾವ್ಯದಲ್ಲಿ ನಿಜವಾದ ಭಯಾನಕ ಜಗತ್ತನ್ನು ತೋರಿಸುತ್ತಾನೆ. ಕೆಲವು ಸಲ ಕೆಲವು ಪ್ರಕಾರಗಳು ಮುಂಚೂಣಿಯಲ್ಲಿ ಕಾಣುತ್ತವೆ. ಉದಾಹರಣೆಗೆ ಎಪ್ಪತ್ತರ ದಶಕದಲ್ಲಿ ನಾಟಕಕ್ಕೆ ಒಂದು ಒಳ್ಳೆಯ ಖದರ್ ಬಂದಿತ್ತು. ತುಗಲಖ್ , ಹಯವದನ, ಸಂಕ್ರಾಂತಿ, ಬಿರುಕು, ತೆರೆಗಳು, ಕಂಬಾರರ ನಾಟಕಗಳು ಒಂದು ಬೇರೆ ರೀತಿಯ ತೆರೆ ಹೊರಟಿತು.

ಕವಿಯ ತಯಾರಿ: ಎಜ್ರಪೌಂಡ್ ಹೇಳುತ್ತಾನೆ ಒಟ್ಟು ಸಮಾನ್ಯ ಪಿಯಾನೋ ಅಧ್ಯಾಪಕನಿಗಿರುವಷ್ಟಾದರೂ ತಯಾರಿ ಒಬ್ಬ ಕವಿಗೆ ಇರಬೇಕಾಗತ್ತೆ. ನಮ್ಮಲ್ಲಿ ಪದ್ಯ ಬರೆಯೋದಾಗಲಿ ಕತೆ ಬರೆಯೋದಾಗಲಿ, ಬಹಳ ಮುಖ್ಯವಾದ ಅಭ್ಯಾಸ ಅಂತ ತಿಳಿದಿಲ್ಲ. ಕವಿತೆ ಬರೆಯೋಕೆ ಅಭ್ಯಾಸ ಅನ್ನೋದು ಬೇಕಿಲ್ಲ ಅನ್ನುವ ತಿಳುವಳಿಕೆಯೇ ಬಲವಾಗಿದೆ. ನೀವು ಡ್ರಾಯಿಂಗ್ ರೂಮಿನ ಕವಿತೆ ಹಾಗೆ ಬರೆಯಬಹುದು. ಭಾಷೆಯ ಬಳಕೆ ವ್ಯಾಕರಣದ ಪರಿಜ್ಞಾನ ಯಾವ ಪದದ ಜೊತೆ ಯಾವ ಪದ ಹೋಗಬೇಕು. ಒಂದು Metaphorನ ನಿರಂತರವಾಗಿ ಬೆಳೆಸೋದು ಹ್ಯಾಗೆ, ಒಂದು ಪ್ರತಿಮೆಯನ್ನು ಮನಃ ಪುನಃ ಬಳಸೋದು ಹ್ಯಾಗೆ, ಬೆಳಸೋದು ಹ್ಯಾಗೆ? ಪದ್ಯದ ಆರಂಭ ಮತ್ತು ಮುಕ್ತಾಯ ಹೇಗೆ? ನಮಗೆ ಹೊರಕ್ಕೆ ಕಾಣೋದು ಕಾವ್ಯದ Finished Product ಆದರೆ ಅದರ ಹಿಂದೆ ಕವಿಯ Home Work ಇರುತ್ತೆ.



ಪದ್ಯ ಬೇರೆ, ಕಾವ್ಯ ಬೇರೆ. ನಮ್ಮಲ್ಲಿ ಕೇಶಿರಾಜ ವ್ಯಾಕರಣ ಕುರಿತು ಪದ್ಯರೂಪದಲ್ಲಿ ಬರೀತಾನೆ. ಕಾಮಶಾಸ್ತ್ರ ಆಯುರ್ವೇದಗಳು ಪದ್ಯರೂಪದಲ್ಲಿವೆ. ಪದ್ಯರೂಪವೇ ಕಾವ್ಯವಲ್ಲ. ಅದಕ್ಕೆ ಒಂದು ಬೇರೆಯದೇ ಆದ ಜೀವಗುಣ ಇರುತ್ತೆ ಒಬ್ಬ ಚಿತ್ರಕಾರನಿಗೆ, ಡಾನ್ಸರಿಗೆ ಅವರದೇ ಆದ ಒಂದು Practice ಇರುತ್ತೆ. ಇಲ್ಲದಿದ್ದರೆ ಅವರು ಗುರುತಿಸಲ್ಪಡೋಲ್ಲ. ಇದೊಂದು ಬಹಳ ಗಂಭೀರವಾದ ಚಟುವಟಿಕೆ ಅಂತ ತಿಳಿದವರು ತಮ್ಮ ಶ್ರಮದಿಂದ ಬೇರೆಯ ರೀತಿಯಲ್ಲಿ ಕಾವ್ಯ ಬರೆಯುತ್ತಾರೆ. ಆಗ ಅವರಿಗೆ ಪಂಪ ಬಸವಣ್ಣ ಬೇಂದ್ರೆ, ಇವರುಗಳಿಂದ ಏನನ್ನ ಪಡೆಯಬೇಕು ಅದನ್ನ ಹ್ಯಾಗೆ ರೂಪಾಂತರಗೊಳಿಸಿಕೊಳ್ಳಬೇಕು ಅನ್ನೋದು ಗೊತ್ತಿರತ್ತೆ.


ತಾಂತ್ರಿಕವಾಗಿ ಒಬ್ಬ ಎಲ್ಲವನ್ನೂ ಕಲಿಯಬಹುದು. ಆದರೆ ಪ್ರತಿಭಾ ಶಕ್ತಿಯನ್ನು ಅವನು ರೂಪಿಸಿಕೊಳ್ಳಬೇಕಾಗುತ್ತೆ. ಒಬ್ಬ ಕವಿ ಪರಂಪರೆಯಿಂದ ಪಡೆದುಕೊಂಡೂ ತನ್ನ ಪ್ರತಿಭೆಯಿಂದಲೂ ರೂಪಿಸಿಕೊಳ್ಳಬೇಕು ತನ್ನ ಕಾವ್ಯವನ್ನು

ಬರವಣಿಗೆ ಅಧಿಕೃತ ಮಾಧ್ಯಮವಾಗಿ ಕಾವ್ಯದ ಇತರ ಸಂವಹನ ಮಾಧ್ಯಮಗಳು: ನಮ್ಮಲ್ಲಿ ಇದೊಂದು ಲಾಭ ಮತ್ತು ತೊಂದರೆ ಎರಡೂ ಆಗಿದೆ. ಬೇರೆ ಬೇರೆ ಉಪಭಾಷೆಗಳು ಇವೆ. ಒಮ್ಮೆ ಅಡಿಗರು ಹೇಳಿದ್ರು. ನಾವೆಲ್ಲಾ ಯಾವಾಗ ಮುಖ್ಯರಾಗ್ತೀವಿ ಅಂದರೆ ವಿದ್ಯಾಭ್ಯಾಸ ಹೆಚ್ಚಾದಾಗ. ಆಗ ನಾವು ಹೆಚ್ಚು ಪ್ರಚಲಿತರಾಗುತ್ತೇವೆ ಅಂತ. ಕಾರಂತ ,ಕುವೆಂಪು ಇವರುಗಳನ್ನು ಅಕ್ಷರ ಬಲ್ಲವರು

ಓದುತ್ತಾರೆ. ಆದರೆ ನಾಟಕದಂಥಾ ಪ್ರಕಾರ ಪರವಾಗಿಲ್ಲ. ಆದರೆ ಕಾದಂಬರಿಗೆ ಅದು ಸಿನೆಮಾ ನಾಟಕ ಮುಂತಾದ ರೂಪದಲ್ಲೇ ಆಗಬೇಕು.

ನಮ್ಮಂಥಾ ದೇಶದಲ್ಲಿ ವಿದ್ಯಾಭ್ಯಾಸ ಅನ್ನೋದು ಸ್ವಾತಂತ್ರ್ಯ ಪಡೆದು ಇಷ್ಟು ವರ್ಷಗಳ ನಂತರವೂ ಸಮರ್ಪಕವಾಗಿಲ್ಲ. ಒಂದು ಹಂತದ ಶಿಕ್ಷಣ ಪಡೆದೋನು ಓದುವ ಶಕ್ತಿಯುವನನಾಗಿರ್ತಾನ? ಓದುವುದು ಒಂದು ಸ್ಕಿಲ್. ಒಂದು ತತ್ವ. ಅದು, Art of Reading. ಎಲ್ಲಾ ಅಕ್ಷರಸ್ಥರು ಹಾಗಿದ್ದ ಪಕ್ಷದಲ್ಲಿ ಓದುಗರಾಗಬೇಕಿತ್ತು. ಆಗ ಪರಿಸ್ಥಿತಿ ಬೇರೆಯದೇ ಇರ್ತಿತ್ತು. ಇತರೆ ದೇಶಗಳಲೆಲ್ಲಾ ಇದೇ ಸಮಸ್ಯೇ ಇದೆ. ಆದರೆ ಅದಕ್ಕೆ ಒಂದು ಬೆರೆ ವ್ಯಾಪ್ತಿ ಇದೆ. ಆರಂಭದಲ್ಲೆ ಅಲ್ಲಿ ತಮ್ಮ ಕ್ಲಾಸಿಕ್ಸ್ ಬಗೆಗೆ ಒಂದು ಅಭಿರುಚಿ ಬೆಳೆಸ್ತಾರೆ. ಅದೇ ಕಾರಣಕ್ಕೆ ಡಿಕನ್ಸ್ ಹಾರ್ಡಿ ಮತ್ತೆ ಮತ್ತೆ ಮುದ್ರಣ ಆಗ್ತಲೇ ಇರ್ತವೆ.

ನಮ್ಮಲ್ಲಿ Specialisation ಅಂದ್ರೆ ತಾನು ಓದೋ Subject ವಿಷಯ ಮಾತ್ರಾ ಅಂದುಕೊಂಡು ಬಿಡ್ತಾರೆ. ಆದರೆ ಸಾಹಿತ್ಯ ಹಾಗಲ್ಲ. ಉದಾಹರಣೆಗೆ ಹೆಗ್ಗೋಡಿನಲ್ಲಿ ನಾಟಕಕಗಳನ್ನು ನೋಡುವ ಅಭಿರುಚಿ ಬೆಳೆದಿದೆ. ಯಾವುದೇ ಭಾಷೆಯದ್ದಿರಲಿ ಅದರ ಅನುವಾದವಲ್ಲಾದರೂ ನೋಡ್ತಾರೆ. ಇಂಥದೊಂದು ಸಂಸ್ಕೃತಿ ಬೆಳೆಯುತ್ತೆ.




ಇದೇ ಕನ್ನಡ ಸಾಹಿತ್ಯ ಇಪ್ಪತ್ತನೇ ಶತಮಾನದ ತನಕ ನಡೆದು ಬಂದಿರೋದು ಈ ಕೇಳುಗ ಸಂಸ್ಕೃತಿಯಿಂದ. ಪಂಪ- ಕುಮಾರವ್ಯಾಸ-ಬಸವಣ್ಣ ಇವರುಗಳನ್ನು ಅನೇಕ ಶತಮಾನಗಳಿಂದ ತಲೆಮಾರುಗಳಿಂದ ಓದಿಕೊಂಡು ಬಂದಿರುವುದರಿಂದ ನಾವು ಇವನ್ನೇ ನಮ್ಮ ಮುಂದಿನ ತಲೆಮಾರಿಗೂ ದಾಟಿಸುತ್ತೇವೆ. ಗಮಕ ವಾಚನ, ಹರಿಕಥೆ, ತಾಳಮದ್ದಲೆ ಮುಂತಾದವುಗಳು ತಲೆಮಾರಿನಿಂದ ಮತ್ತೊಂದಕ್ಕೆ ದಾಟಿ ಬಂದಿವೆ. ಈಗ ಬರೀ ಸಾಹಿತ್ಯದ ತರಗತಿಗಳಲ್ಲಿ ಪದ್ಯಗಳನ್ನ ಓದಲು ಮುಜುಗರ ಪಟ್ಟುಕೊಂಡು ಓದಲಾಗುತ್ತಿದೆ. ಈಗ ಕಣ್ಣಿಗ್ನೋದು ಬಂದು ಕಿವಿಯ ಕೆಲಸ ಹೊರಟು ಹೋಗಿದೆ ಅಂತ ಬೇಂದ್ರೆಯವರು ಹೇಳೋರು. ಕಿವಿ ಟೀವಿಗೆ ಮಾತ್ರ ಮೀಸಲಾಗಿದೆ.

ಸಾಹಿತ್ಯ ಪತ್ರಿಕೆಗಳು–ಕವಿಗಳು : ಅನೇಕ ಜನ ಹೊಸಾ ಕವಿಗಳು ಚೆನ್ನಾಗಿ ಕಾವ್ಯ ಬರೆಯುವ ಪ್ರಯತ್ನದಲ್ಲಿದ್ದಾರೆ. ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಇದ್ದಾರೆ. ಅವರ ಪ್ರಮಾಣ ಜಾಸ್ತಿ ಇಲ್ಲದಿರಬಹುದು. ಆದರೆ ಅವರು ಆ ದಾರಿಯಲ್ಲಿದ್ದಾರೆ. ಕನ್ನಡ ಕಾವ್ಯದಲ್ಲಿ ಹೊಸತು ಗಂಭೀರವಾದ ಕವಿಗಳಿಲ್ಲ. ಶಿವಪ್ರಕಾಶರ ನಂತರ ಕನ್ನಡದಲ್ಲಿ ಕವಿಗಳಿಲ್ಲ. ಅನ್ನೋದೆಲ್ಲಾ ಹಳೇ ವರಸೆಗಳು. ಅದನ್ನು ನಾನು ಒಪ್ಪುವುದಿಲ್ಲ. ಈಗ ಬರೆಯುತ್ತಿರುವ ಅನೇಕರು ಮುಂದೆ ದೊಡ್ಡಕವಿಗಳಾಗಿ Emerge ಆಗ್ತಾರೋ ಇಲ್ಲವೋ ಅನ್ನೋದು ಅವರು ಕಾವ್ಯ ರಚನೆಯನ್ನ ಯಾವ ರೀತಿಯಲ್ಲಿ ಗಂಭೀರವಾಗಿ ಸ್ವೀಕರಿಸಿದ್ದಾರೆ ಅನ್ನೋದರ ಮೇಲೆ ನಿಂತಿದೆ. ಇಂಥಲ್ಲೇ Little Magazineಗಳ ಕೆಲಸ ಇರೋದು. ಇಂಥಾ ಪ್ರತಿಭೆಗಳನ್ನು ಗುರುತಿಸಿ ಹೊರತರಬೇಕು. ಸಾಕ್ಷಿ, ಪ್ರಬುದ್ಧ ಕರ್ನಾಟಕ, ಜಯಂತಿ, ಜಯಕರ್ನಾಟಕ ಮುಂತಾದವುಗಳು ಆಯಾ ಕಾಲಕ್ಕೆ ತಮ್ಮ ಕೆಲಸ ಮಾಡಿದೆ. ಲಹರಿ ಸಂಕ್ರಮಣ ಮುಂತಾದ ಪತ್ರಿಕೆಗಳು ಯಾವಾಗ ಬರುತ್ತೇ ಅಂತ ಕಾಯುತ್ತಿದ್ದೆವು. ಆಗ ಸಾಹಿತ್ಯ ಪತ್ರಿಕೆಗೆ ಅಥವಾ ಒಂದು Value ಇತ್ತು.

ವಾಗ್ವಾದಗಳು ಅದರಲ್ಲಿರೋದು ಈಗ ಅಂಥಾ Contraverseyಗಳು ಇರೋಲ್ಲ. ವಾಗ್ವಾದ ಬೆಳೆಸೋದು ಒಂದು ಅರೋಗ್ಯಕರ ಸ್ಥಿತಿ. ಸಾಹಿತ್ಯದಲ್ಲಿ ಜಗಳಗಳು ಆರೋಗ್ಯಕರವಾಗಿರಬೇಕು. ಲಂಕೇಶ್ ಬದುಕಿರೋ ತನಕ ಪತ್ರಿಕೆಯಲ್ಲಿ ಅಂಥಾದ್ದೊಂದು ಸ್ಥಿತಿ ಇತ್ತು. ಅದರಲ್ಲಿನ Contentನಿಂದ ಒಂದು ಪತ್ರಿಕೆ ಆಗಬೇಕು. ಆಗ ಮುಂದಿನ ಸಂಚಿಕೆಗೆ ಕಾಯುವಂತೆ ಆಗುತ್ತವೆ. ವಾದ ವಿವಾದ ಚರ್ಚೆಗಳು ಸಣ್ಣ ಪತ್ರಿಕೆಗಳು ಮಾಡದೆ ದಿನಪತ್ರಿಕೆಗಳು ಮಾಡ್ತಾವೇನ್ರಿ? ನಮ್ಮ ವಿಚಾರಗಳ outcome ಪತ್ರಿಕೆ ಅನ್ನೋದು.

ಈಗಿನ ಪರಿಸ್ಥಿತಿಯಲ್ಲಿ ಅಂಥಾದ್ದೊಂದು Team Work ಇಲ್ಲ. ಆದಾಯವೂ ಇಲ್ಲ. Mailing list ಬೆಳೆಯೋಲ್ಲ Renew ಮಾಡಿಸೋಲ್ಲ. ಸಣ್ಣ ಪತ್ರಿಕೆಗಳು ಸಾಹಿತ್ಯ ಚಿಂತಕರ ಮುಖ್ಯ ಭಾವಡಿ ಅದು.



ಕಾಲ–ಮತ್ತು ಚಳುವಳಿಯ ಪ್ರಸ್ತುತತೆ: ಎಲ್ಲಾ ಕವಿಗಳನ್ನೂ ಕಾಲದಿಂದ ಹೊರಗಿಟ್ಟೇ ನೋಡಬೇಕು. ಪಂಪಯುಗದಿಂದ ಈಚೆಗೆ ತೆಗೆದ್ರೇ ಪಂಪ ಗೊತ್ತಾಗೋದು ಹನ್ನೆರಡನೆಯ ಶತಮಾನದಿಂದ ಹೊರಗಿಟ್ಟಾಗಲೇ ಬಸವಣ್ಣ ಗೋಚರಿಸೋದು. ಸುಮ್ಮನೇ ಕಾಲ describing term ಅನ್ನೋದು. ಸಾಹಿತ್ಯದಲ್ಲಿ ನವ್ಯ– ನವೋದಯ ನವ್ಯೋತ್ತರ ಅಂತೆಲ್ಲಾ ಇಲ್ಲ. ಇವತ್ತು ಪ್ರಪಂಚದಾದ್ಯಂತ ಅಂಥವು ಹೊರಟು ಹೋಗಿದೆ. ಸಾಹಿತ್ಯ ಚಳುವಳಿಗಳು ಇವತ್ತು Functional ಅಲ್ಲವೇ ಅಲ್ಲ. ಉಳಿದ ಸಾಮಾಜಿಕ ಚಳುವಳಿಗಳಾದ ದಲಿತ ಚಳುವಳಿ ಮಹಿಳಾ ಚಳುವಳಿಗಳು Functional ಅವು ಒಂದು Political ಆದ, ನಮ್ಮ ನೆಲದ ಮುಖ್ಯ ಪ್ರಶ್ನೆ ಹೊತ್ತ ಜೊತೆಗೆ ಒಂದು ಸಮಾನತೆಯ ಕುರಿತ ಬೇರೆ ರೀತಿಯ ಹೋರಾಟ ಅದು. ಅದರ ಭಾಗವಾಗಿ ಸಾಹಿತ್ಯ ಬರುತ್ತೆ.

ಆದ್ರೆ ಬಂಡಾಯ ಚಳುವಳಿ ಹಾಗಲ್ಲ. ಅದಕ್ಕೆ ಮೊದಲಿಗೆ ಮಾರ್ಕ್ಸವಾದದ ಭಿತ್ತಿ ಇತ್ತು. ಈಗ ಅದಿಲ್ಲ. ಮಾರ್ಕ್ಸ್ ವಾದ ಮಾವೋವಾದ ನಕ್ಸಲೈಟರು ಯಾರೂ ಇಲ್ಲ. ಯಾವುದೇ ರೀತಿಯ ತಾತ್ವಿಕತೆ ಇವತ್ತು ಬಂಡಾಯ ಚಳುವಳಿಗೆ ಇಲ್ಲ. ಇವತ್ತು ಸಾಹಿತ್ಯ ಚಳುವಳಿಗಳೇ ಅಪ್ರಸ್ತುತ. ಎಪ್ಪತ್ತರ ದಶಕದಲ್ಲಿ ಲೋಹಿಯಾವಾದ ಮಾರ್ಕ್ಸವಾದ ಅವು ಎಲ್ಲ ಸ್ವಲ್ಪ ಇದ್ದವು. ಜೊತೆಗೆ ಕಾಂಗ್ರೆಸ್ ವಿರೋಧಿ ಅಲೆ ಜೆಪಿ ಚಳುವಳಿ ಮುಂತಾದವು ಜೀವಂತವಿತ್ತು. ಬರ್‍ತಾ ಬರ್‍ತ ಎಲ್ಲವೂ ಕರಗಿಹೋಯ್ತು. ಎಲ್ಲವನ್ನೂ ಇವತ್ತು Black & White ಆಗಿ ನೋಡಕೆ ಬರೋಲ್ಲ. ಹಾಗೆ ನೋಡ ಹೊರಟರೆ ಇವತ್ತು ತಮಾಷೆಯಾಗಿ ಕಾಣುತ್ತೆ.

ಓದುವ ಕ್ರಮ: ನೀವು ಒಂದು ಸಾಹಿತ್ಯ ಕೃತಿಯನ್ನು ಅದರ Meaning Oriented ಆಗಿ ಓದಬಾರದು. ಅಲ್ಲಿ ಯಾವ ಅರ್ಥವೂ ಇಲ್ಲ. ಅಂತ ತಿಳಿಕೊಂಡು ಒಂದು ಕೃತಿಯ ಅರ್ಥವನ್ನು ಕೊಡ್ತಾ ಇರೋನು ನಾನುಅಂದುಕೊಂಡು ಓದಬೇಕು.


ಅದು ನಿಮಗೇನೋ ಕೊಡ್ತಾಇದೆ ಅಂತ ತಿಳಿಕೊಂಡು ಓದಿದ್ರೆ ನೀವು ಅಧೀನ ಆಗ್ತೀರಿ. ಒಂದು ಕೃತಿಯಲ್ಲಿ Gaps ಇದೆ. ಅದರ Significance ಅವರ ಶಬ್ದಗಳಲ್ಲಿಲ್ಲ. ಆ ಕೃತಿಯಲ್ಲಿರುವ ಮೌನದಲ್ಲಿದೆ. ನಾವು ಅರ್ಥಾನ್ವಿತವಾಗಿ ಓದಿ

ಅಭ್ಯಾಸ ಮಾಡಿ ಕೊಂಡಿರೋದರಿಂದ ಕೃತಿಗೆ ಅರ್ಥ ಹಚ್ಚುತ್ತಾ ಇರ್ತೇವೆ. ಅರ್ಥವನ್ನು ಸೃಷ್ಟಿಸುತ್ತಾ ಇರ್ತೀನಿ ಅಂದುಕೊಂಡು ಓದೋದು ನಿಜವಾದ ಓದಿನ ಕ್ರಮ.

ಒಂದು ಕೃತಿಯನ್ನು ಮುಕ್ತವಾಗಿ ಓದೋದು ಅನ್ನೋ ಕ್ರಮ ನಾನು ಒಪ್ಪೋಲ್ಲ. ನೀವು ಶೂನ್ಯ ಅಲ್ಲ. ನೀವು ಏಷ್ಟೋ ಓದಿದ್ದೀರಿ ಅದರ ಹಿನ್ನಲೆ ಇದೆ.

ಈ ಕ್ರಮದಲ್ಲಿ ಓದೋದು ಹೆಚ್ಚು ಇದೆ. ಒಬ್ಬನೇ ಕವಿಯನ್ನು ಉದಾ : ಪಂಪನನ್ನ ಬೇರೆ ಬೇರೆ ಥರದಲ್ಲಿ ನಾನು ಓದಿ ತೋರಿಸಬಲ್ಲೆ. ಬೇಂದ್ರೆಯ ಬೆಳಗು ಪದ್ಯವನ್ನು ಒಂದು ಸೆಕ್ಸ್ ಕವಿತೆಯ ಹಾಗೂ ಓದಬಹುದು.ಲೇಖಕನಿಗೆ ಒಂದು ಪ್ರತಿಭೆ ಇದ್ದ ಹಾಗೆ ಓದುಗನಿಗೂ ಒಂದು ಪ್ರತಿಭೆ ಸಲಕರಣೆ ಇರಬೇಕು ಅರ್ಥಪೂರ್ಣತೆ ಅನ್ನೋದನ್ನು ನೀವು ರೂಪಿಸಿಕೊಳ್ತಾ ಇರ್ತೀರಿ Text & Context ಅಂತಾರೆ. ನೀವು ಹತ್ತನೇ ಶತಮಾನದೋರ ಥರ ಖಂಡಿತಾ ಪಂಪನನ್ನ ಓದೋಲ್ಲ. ಬೇರೆ ಕ್ರಮಗಳು ಸಂದರ್ಭಗಳು ರೂಪುಗೊಂಡಿವೆ.

ಕೀ.ರಂ. ಓದುವ ಕ್ರಮ : ಕೊಟ್ಟ ಕುದುರೆಯ ಏರದೆ ಮತ್ತೊಂದು ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ. ಎಲ್ಲಾದಕ್ಕೂ ಈ ಮಾತು ಅನ್ವಯಿಸುತ್ತೆ. ನಮಗೆ ಆ ಪದ್ಯ ಕೊಡಬೇಕೇ ಹೊರತು ವಿಮರ್ಶಕ ಏನನ್ನು ತಾನೇ ಕೊಡಬಲ್ಲ.



ನಾನು ಪ್ರತಿ ಓದಿನಲ್ಲೂ ಒಂದು ಸ್ವಲ್ಪ Improve ಮಾಡ್ತೀನಿ. ನಾನು ಈ ಹಿಂದೆ ಏನು ಹೇಳಿದ್ದೀನಿ ಅನ್ನೋದನ್ನಾ ಮತ್ತಷ್ಟು ವಿಸ್ತರಿಸೋದ್ರಿಂದ ಮತ್ತಷ್ಟು ಹೊಳಹುಗಳು ಸಿಗುತ್ತವೆ. ಒಂದೊಂದು ಕೃತಿಗೂ ಬೇರೆ ಬೇರೆಯ ಓದುವ ತಳ ತಂತ್ರಗಳನ್ನು ಹೂಡಬೇಕು. ಪ್ರತಿಯೊಂದು ಕೃತಿಗೂ ಒಂದೊಂದು ಮೀಮಾಂಸೆ. ನಿಮ್ಮ ಕಾವ್ಯ ಮೀಮಾಂಸೆಗಳನ್ನು ಮೀರಿ ಆ ಕೃತಿ ಸೃಜಿಸಲ್ಪಟ್ಟಿರುತ್ತದೆ. ಮೀಮಾಂಸೆ ಅನ್ನೋದು ಹೋಮರ್, ಶೇಕ್ ಸ್ಪಿಯರ್, ಡಾಂಟೆ, ಕುವೆಂಪು ಬೇಂದ್ರೆ, ಇವರೆಲ್ಲಾ ಕೃತಿಗಳಿಂದ ಸಿದ್ದವಾಗಿರೋ ಎನರ್ಜಿ, ಅದು ವ್ಯಾಕರಣ ಅಲ್ಲ. ಸಿದ್ಧಗೊಂಡಿದ್ದಲ್ಲ ಹೊಸ ಕೃತಿ ಮೀಮಾಂಸೆಯ ಚೌಕಟ್ಟನ್ನ ವಿಸ್ತರಿಸುತ್ತದೆ. ಹ್ಯಾಗೆ ಕುಸುಮಬಾಲೆ ಮೀಮಾಂಸೆ ವಿಸ್ತರಿಸ್ತು, ಹೊಸತು ಬಂದಾಗ ಅದು ವಿಸ್ತಾರಗೊಳ್ತೆ. ಅದೇ ಹಳೇ ರಸ ಸಿದ್ಧಾಂತದಲ್ಲಿ ನೀವು ವಚನಗಳನ್ನು ಓದೋದು ಸಾಧ್ಯವಾ? ನರುಡ ಬಂದಾಗ ಅವನಿಂದ ಒಂದು ಹೊಸಾ ಮೀಮಾಂಸೆ ಸೃಷ್ಟಿಯಾಯ್ತು. ಎಡ್ವರ್ಡ್ ಸಹಿದ್ ಅದನ್ನ Travelling theoryಅಂತಾನೆ ವಿಜ್ಞಾನದ ಥಿಯರಿಗಳೂ ಹಾಗೇನೇ. ಮೀಮಾಂಸೆಯನ್ನ ಹಾಗೆ Restricted ಆಗಿ ನೋಡೋದು ತಪ್ಪು. ಒಂದೇ ಪರಿಕಲ್ಪನೆಯನ್ನ ಬೇರೆ ಬೇರೆ ರೀತಿಯಲ್ಲಿ ವಿವರಿಸ್ತಾರೆ, ಉದಾಹರಣೆಗೆ ನಮ್ಮ ಸಂಸ್ಕೃತ ಕೃತಿಗಳ ಕುರಿತ ಭಾಷ್ಯಗಳಿವೆಯಲ್ಲ.

(ಹರಟೆಯಲ್ಲಿದ್ದವರು : ಶ್ರೀನಿವಾಸ ಉಡುಪ, ಎಲ್.ಜಿ.ಮೀರಾ, ಹರೀಶ್ ಜಿ.ಬಿ., ರಾಮಲಿಂಗಪ್ಪ ಟಿ ಬೇಗೂರು, ಡಿ.ವಿ.ಪ್ರಹ್ಲಾದ್)

ಪುಸ್ತಕ ಪರಿಶೀಲನೆ



ವಿಧುರನ ಒಸಗೆ – ಕರಟೆಗಳು

ಲೇಖಕ : ಹಾಲಾಡಿ ಮಾರುತಿ ರಾವ್

ಬೆಲೆ: 40/-

ಪ್ರಕಾಶನ : ಹಾಲಾಡಿ ಪ್ರಕಾಶನ

ಹಾಲಾಡಿ ಮಾರುತಿ ರಾವ್ ಅವರು ವಿಧುರನ ಒಸಗೆ ಎಂಬಲ್ಲಿ 21 ಪ್ರಬಂಧಗಳನ್ನು ನೀಡಿದ್ದಾರೆ. ಈ ಬರಹಗಳಿಗೆ ಏನೆಂದು ಕರೆಯಬೇಕೆಂದು ತಿಳಿಯದೆ ಕೊನೆಗೆ ಕರಟೆಗಳು ಎಂಬ ಹೆಸರಿನಲ್ಲಿ ನೀಡಿದ್ದಾರೆ.

ಮಾರುತಿ ರಾವ್ ಅವರು ಯಾವ ರೀತಿಯ ಕಟ್ಟು ಪಾಡುಗಳಿಗೂ ಒಳಗಾಗದೆಯೇ ಮುಕ್ತವಾದ ರೀತಿಯಲ್ಲಿ ಸರಳವಾಗಿ ರಚನೆಯನ್ನು ಮಾಡಿದ್ದಾರೆ.

ತೆಳುವಾದ ಆವರಣದಲ್ಲಿ ಬಿಚ್ಚಿಕೊಂಡ ವಿಚಾರಗಳು ಅನಂತರ ಸುಂದರವಾಗಿ ಚಿತ್ರಿತವಾಗಿದೆ.

ವಿಧುರನ ಒಸಗೆ, ಶಿಶು ಪಾಲಿನಿ ಎಂಬಂತಹ ಪ್ರಬಂಧಗಳಲ್ಲಿ ಜೀವನದಲ್ಲಿ ಆಳವಡಿಸಿಕೊಳ್ಳಬಹುದಾದ ವ್ಯಕ್ತಿತ್ವಗಳ ಪರಿಚಯವನ್ನು ಮಾಡಿಸಿದ್ದಾರೆ. ಇವರು ಪ್ರಬಂಧಗಳಲ್ಲಿ ಕೆಲವು ಗಾದೆಗಳನ್ನು ಬಳಸಿ ಕೊಂಡಿದ್ದಾರೆ. ಪ್ರಬಂಧದ ಕೊನೆಯಲ್ಲಿ ಕೆಲವು ಮಹತ್ವ ಪೂರ್ಣವಾದ ವಿಷಯಗಳನ್ನು ತಿಳಿಸುತ್ತಾರೆ. ತಮ್ಮ ಸ್ವಂತ ಅನುಭವದ ರೀತಿಯಲ್ಲಿ ಕಟ್ಟಿಕೊಂಡಿರುವ ವ್ಯಕ್ತಿ ಕೇಂದ್ರಿತವಾದ ಪ್ರಬಂಧಗಳು ವಿಚಾರ ಕೇಂದ್ರಿತವಾದ ಪ್ರಬಂಧಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಶಿಶುಪಾಲಿನಿಯಲ್ಲಿ ಬರುವ ವಾತ್ಸಲ್ಯಮಯಿ ತಾಯಿಯ ಚಿತ್ರಣ ಅತ್ಯಂತ ಮಹತ್ವದ್ದಾಗಿದೆ. ಪ್ರಸ್ತುತದಲ್ಲಿ ತಮ್ಮ ಸ್ವಂತ ಮಕ್ಕಳನ್ನು ಸಾಕುವುದಕ್ಕೆ ಬೇಸರಿಸುವುದೇ ಹೆಚ್ಚು. ಆದರೆ ಈ ಪ್ರಬಂಧದಲ್ಲಿನ ತಾಯಿ ಹೃದಯ ಸೇವಾಮನೋಭಾವ ಶ್ಲಾಘನೀಯವಾಗಿದೆ.

ವಿಧುರನ ಒಸಗೆಯಲ್ಲಿ ಬರುವ ವಿಷಯಗಳೂ ತುಂಬ ಸೊಗಸಾಗಿ ಮೂಡಿವೆ. ಕೊನೆಯಲ್ಲಿ ಮಾರುತಿರಾವ್ ಈ ರೀತಿ ಹೇಳಿದ್ದಾರೆ. "ಹಚ್ಚಿಕೊಳ್ಳಿ, ಕಚ್ಚಿಕೊಳ್ಳ ಬೇಡಿ. ಕೊಚ್ಚಿ ಕೊಳಬೇಡಿ." ಇದೇ ವಿಧುರನ ಒಸಗೆ ಎನ್ನುತ್ತಾರೆ. ಏಕಾಂಗಿ ಬದುಕಿನ ಬಗ್ಗೆ ಹೇಳುತ್ತಿದ್ದರೂ ಕೂಡ ಮಹತ್ವದ ವಿಚಾರಗಳನ್ನು ತಿಳಿಸುತ್ತಿವೆ.

'ತೌರುಮನೆ' ಲೇಖನದಲ್ಲಿ ಹಾಸ್ಯಾತ್ಮಕವಾಗಿ ವಿಚಾರ ಮಾಡುತ್ತ ಲೇಖಕರು ದಾಂಪತ್ಯ ಜೀವನ ಹಾಗೂ ಬರಬಹುದಾದಂತಹ ಸಮಸ್ಯೆಗಳ ಬಗ್ಗೆಯೂ ಚಿಂತಿಸುತ್ತಾರೆ. ಹೆಂಡತಿಗೆ ಕೋಪ ಬಂದು ತೌರಿಗೆ ಹೊರಡುತ್ತೇನೆ ಎಂದಾಗ ಜೊತೆಗೆ ನಾನೂ ಬರುತ್ತೇನೆ ಎಂದು ಗಂಡ ಅಂದಾಗ ಸಮಸ್ಯೆಗಳೇ ಆಗುವುದಿಲ್ಲ. ಬಾಳಿನಲ್ಲಿ ಹೊಂದಾಣಿಕೆ ಅವಶ್ಯವಾದದ್ದು ಎಂಬಂತಹ ಅಂಶವನ್ನು ತಿಳಿಸುತ್ತಾರೆ.

ಅಜ್ಜಿಯ ಚಿಂತೆ, ಪತ್ರಗಳ ಮೌಲ್ಯಾಪಹರಣ ಎಂಬ ಪ್ರಬಂಧಗಳಲ್ಲಿ ನಮ್ಮ ಸಂಸ್ಕೃತಿ ಆಚಾರ ವಿಚಾರಗಳು ಕಳೆದು ಹೋಗುತ್ತಿರುವುದರ ಬಗ್ಗೆ ಆಧುನಿಕತೆ ಹಾಗೂ ಅದರಿಂದ ಉದ್ಭವಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ. ಹೆಂಡತಿಯೋ–ಹೆಣ್ತಿಯೋ ? ಎಂಬ ಪ್ರಬಂಧದಲ್ಲಿ ಹಲವು ಮಹತ್ವದ ವಿಚಾರದ ಬಗ್ಗೆ ಪುರುಷ ಪ್ರಧಾನವಾದ ಸಮಾಜ , ಹೆಣ್ಣಿನ ಸ್ಥಾನ ಇವುಗಳ ಬಗ್ಗೆ ಕೂಡ ಚಿಂತಿಸಿದ್ದಾರೆ. ಭಾರದ ಪ್ರಶ್ನೆ, ಕೋಟೆಯಲ್ಲಿ ಸಿಕ್ಕಿಬಿದ್ದ ಅಭಿಮನ್ಯು ಲಭ್ಯ, ಎಂಬ ಪ್ರಬಂಧಗಳೂ ಕೂಡ ಬಹಳ ಸುಂದರವಾಗಿ ಮೂಡಿಬಂದಿವೆ.

ಮಾರುತಿ ರಾವ್ ಅವರು ಎಲ್ಲಾ ರೀತಿಯ ವಿಚಾರಗಳನ್ನು ವಸ್ತುವನ್ನಾಗಿ ಬಳಸಿಕೊಂಡಿದ್ದಾರೆ. ಹಾಸ್ಯಾತ್ಮಕತೆಯಲ್ಲಿಯೇ ಎಷ್ಟೊಂದು ಮಹತ್ವಪೂರ್ಣ ವಿಚಾರಗಳ ಬಗ್ಗೆ ಗಂಭೀರವಾಗಿ ಚಿಂತಿಸಿದ್ದಾರೆ ಎನಿಸುತ್ತದೆ. ಪಾಯಖಾನೆಯ ಕ್ರಾಂತಿ, ಬೈಗುಳ, ಹಾಸಿಗೆಯ ರೂಪ–ರಂಗು ಎಂಬ ಕೆಲವು ಪ್ರಬಂಧಗಳನ್ನು ಬಿಟ್ಟರೆ ಉಳಿದಂತಹ ಎಲ್ಲ ಪ್ರಬಂಧಗಳು ವಿಭಿನ್ನವಾಗಿದೆ. ಗಂಭೀರವಾದ ಸಮಸ್ಯೆಗಳಿಗೂ ಹಾಸ್ಯ ಅನ್ನುವುದನ್ನು ಮದ್ದಾಗಿ ಬಳಸುವ ಪ್ರಯತ್ನ ಮಾರುತಿರಾವ್ ಮಾಡಿದ್ದಾರೆ.

–ಸುಧಾ ಬಿ.ಆರ್. ದ್ವಿತೀಯ ಎಂ.ಎ



ಓದುವ ದಾರಿಗಳು
ಸಂಪಾದಕರು : ಗಿರಡ್ಡಿ ಗೋವಿಂದ ರಾಜ
ಬೆಲೆ : 55/–
ಪ್ರಕಾಶನ : ಕರ್ನಾಟಕ ಸಾಹಿತ್ಯ ಅಕಾಡಮಿ

ಓದುವ ದಾರಿಗಳು ಒಂದು ವಿಶಿಷ್ಟಬಗೆಯ ವಿಮರ್ಶಾಸಂಕಲನ. ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಮಂಗಳೂರು ವಿಶ್ವವಿದ್ಯಾಲಯ , ಸೇಂಟ್ ಎಲೋಷಿಯಸ್ ಕಾಲೇಜ್ ಮತ್ತಿತರ ಸಂಘಗಳ ಸಹಯೋಗದೊಂದಿಗೆ ಮಂಗಳೂರಿನಲ್ಲಿ ನಡೆಸಿದ ಅನ್ವಯಿಕ ವಿಚಾರ ಸಂಕಿರಣದ ಪ್ರಬಂಧಗಳನ್ನು ಒಳಗೊಂಡಿದೆ. ಈ ಸಂಕಿರಣದ ಸ್ವರೂಪವೇ ವಿಭಿನ್ನವಾದದ್ದು. ಓದುವ ದಾರಿಗಳು ಎಂಬ ಶೀರ್ಷಿಕೆಯ ಈ ಸಂಕಿರಣ ಆಧುನಿಕ ವಿಮರ್ಶಾ ಸಿದ್ಧಾಂತಗಳನ್ನು ಕೃತಿಗಳ ಅಭ್ಯಾಸದಲ್ಲಿ ಹೇಗೆ ಅನ್ವಯಿಸಬೇಕು ಎಂಬುದನ್ನು ಕುರಿತದ್ದು. ಈ ಸಂಕಲನದ ಸಂಪಾದಕರು ಗಿರಡ್ಡಿ ಗೋವಿಂದರಾಜ.


ಕನ್ನಡದಲ್ಲಿ ವಿಮರ್ಶಾ ಸಿದ್ಧಾಂತಗಳನ್ನು ಕುರಿತಾದ ಪುಸ್ತಕಗಳಿವೆ. (ವಿಮರ್ಶೆಯ ಪರಿಭಾಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪಾರಿಭಾಷಿಕ ಮಾಲೆಯ ಪ್ರಕಟಣೆಗಳು ಇತ್ಯಾದಿ) ಆದರೆ ವಿಮರ್ಶೆ ಸಿದ್ಧಾಂತವನ್ನು ಕೃತಿಯೊಂದಕ್ಕೆ ಅನ್ವಯಿಸುವ ಬಗೆಯನ್ನು ವಿವರಿಸುವ ಲೇಖನಗಳ ಈ ಬಗೆಯ ಸಂಕಲನ ಇದೇ ಮೊದಲನೆಯದು. ಈ ಸಂಕಲನದಲ್ಲಿ ಒಂಭತ್ತು ಲೇಖನಗಳಿವೆ. ಮೊದಲನೆಯ ಲೇಖನ ಸಂಕಿರಣದ ಆಶಯ ಭಾಷಣ. ಉಳಿದವು ರೂಪನಿಷ್ಠ, ರಚನಾವಾದ, ಮಾರ್ಕ್ಸವಾದ, ಸ್ತ್ರೀವಾದ, ವಾಚನಿಷ್ಠೆ, ನಿರಚನಾವಾದ, ಕಥನಶಾಸ್ತ್ರ, ದೇಶಿವಾದ ಇವುಗಳನ್ನು ಒಳಗೊಂಡಿದೆ. ಈ ಲೇಖನಗಳಲ್ಲಿ ಲೇಖಕರು ಮೊದಲಿಗೆ ಸಿದ್ಧಾಂತದ ಪರಿಚಯ ಮಾಡಿಕೊಡುತ್ತಾರೆ. ನಂತರ ಕುಸುಮಬಾಲೆ ಅಥವಾ ಕಿರಗೂರಿನ ಗಯ್ಯಾಳಿಗಳು ಕೃತಿಯನ್ನು ಈ ಸಿದ್ಧಾಂತದ ನೆರವಿನಿಂದ ಓದುವುದು ಹೇಗೆ ಎಂಬುದನ್ನು ಸ್ಥೂಲವಾಗಿ ಪರಿಚಯಿಸುತ್ತಾರೆ.

ಸಂಪಾದಕರು ಸಂಪಾದಕೀಯದಲ್ಲಿ ಹೇಳಿರುವಂತೆ ಲೇಖಕರು ಸಿದ್ಧಾಂತಗಳನ್ನು ಕೃತಿಗೆ ಅನ್ವಯಿಸುವಾಗ ಆಯಾ ಸಿದ್ಧಾಂತಗಳು ಅನಾವರಣಗೊಳಿಸುವ ಕೃತಿಯ ವಿಶಿಷ್ಟ ಆಯಾಮಗಳನ್ನು ಗುರುತಿಸುವಲ್ಲಿ ಅಷ್ಟಾಗಿ ಆಸಕ್ತಿವಹಿಸಿಲ್ಲ. ಸಿದ್ಧಾಂತಗಳ ಅನ್ವಯದಲ್ಲಿ ಲೇಖಕರು ಆಯಾ ಸಿದ್ಧಾಂತಕ್ಕೆ ಮಾತ್ರ ಸೀಮಿತರಾಗದೇ ಉಳಿದವುಗಳನ್ನು ಗಮನಿಸಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಈ ಲೇಖನಗಳನ್ನು ಓದಿದಾಗ ಗಮನಕ್ಕೆ ಬರುವ ಕುತೂಹಲಕಾರಿಯದ ಸಂಗತಿಯೆಂದರೆ ದಾರಿ ಯಾವುದೇ

ಇರಲಿ ಸೇರುವ ಗುರಿ ಮಾತ್ರ ಒಂದೇ. ಅಂದರೆ ಕುಸುಮಬಾಲೆ ಅಥವಾ ಕಿರಗೂರಿನ ಗಯ್ಯಾಳಿಗಳು ಕೃತಿಯನ್ನು ಯಾವುದೆ ಸಿದ್ಧಾಂತದ ನೆರವಿನಿಂದ ಓದಿದರೂ ಕೂಡ ಅವು ಹೊಳೆಯಿಸುವ ಕೆಲವು ಒಳನೋಟಗಳು ಒಂದೇ ಆಗಿವೆ.

ಒಟ್ಟಿಗೆ ಇದು ಸಾಹಿತ್ಯದ ವಿದ್ಯಾರ್ಥಿಗಳಿಗೆ ಮತ್ತು ತರುಣ ವಿಮರ್ಶಕರಿಗೆ ನೆರವಾಗಬಲ್ಲಂತಹ ಪುಸ್ತಕ.

– **ಹೇಮಾ ಎಸ್.**



ಗುಣ –ಗೌರವ

ಲೇಖಕ : ಜಿ.ಎಚ್ ನಾಯಕ

ಬೆಲೆ: 75/–

ಪ್ರಕಾಶನ : ಲೋಹಿಯಾ ಪ್ರಕಾಶನ ಬಳ್ಳಾರಿ

ಜಿ.ಎಚ್. ನಾಯಕ ಅವರ ಗುಣ –ಗೌರವ. ಅವರು ಸನಿಹದಿಂದ ಕಂಡ ವ್ಯಕ್ತಿಗಳ ಸಂಸ್ಥೆಗಳ ಕುರಿತಂತೆ ಇದೆ. ಬಹಳಷ್ಟು ಲೇಖನಗಳು ಅವರ ಬಾಲ್ಯದ ನೆನಪುಗಳನ್ನು ಆಧರಿಸಿರುವುದರಿಂದ ಆತ್ಮೀಯವಾಗುತ್ತದೆ. ಲೇಖಕರೇ ಈ ಪುಸ್ತಕದ ಬಗ್ಗೆ ಮೊದಲ ಮಾತುವಿನಲ್ಲಿ ಹೇಳಿದಂತೆ ಗುಣ ಗೌರವದಲ್ಲಿ ಅನುಬಂಧದಲ್ಲಿರುವ ಎರಡು ಬರಹಗಳು ಸೇರಿದಂತೆ ವ್ಯಕ್ತಿಗಳನ್ನು ಕುರಿತ ಹದಿನೇಳು ಲೇಖನಗಳಿವೆ. ಸಂಸ್ಥೆಗಳನ್ನು ಕುರಿತವು ಎರಡು. ಜೊತೆಗೆ ಯಕ್ಷಗಾನ ಆಟ ಕುರಿತ ಒಂದು ನೆನಪಿನ ಬರಹ–ಹೀಗೆ ಒಟ್ಟೂ ಇಪ್ಪತ್ತು ಲೇಖನಗಳಿವೆ. ಎರಡನೆಯ ಭಾಗದಲ್ಲಿರುವ ಎಲ್ಲಾ ಲೇಖನಗಳು, ಮೂರನೆಯ ಭಾಗದಲ್ಲಿರುವ ಒಂದು ಲೇಖನ ಇವುಗಳು ನಾನು ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ನಾಟಕದ ಸಂಪಾದಕೀಯ ಬರಹಗಳಾಗಿ ಬರೆದವು."

ಮೊದಲನೇ ಭಾಗದಲ್ಲಿ ಅಷ್ಟೇನೂ ಪ್ರಸಿದ್ಧರಲ್ಲದ ಮಂಜಮ್ಮ (ವಿಚಾರವಾದಿ ಕೆ. ರಾಮದಾಸ್ ಅವರ ತಾಯಿ) ಅಗ್ಗರಗೋಣದ ರಾಮಾಚಂದ್ರ ಮಾಸ್ತರ, ಇವರ ಜೊತೆಗೆ ಚದುರಂಗ, ಬಿ.ಜಿ.ಎಲ್. ಸ್ವಾಮಿ, ಶಿವರಾಮ ಕಾರಂತರಂತಹ ಪ್ರಸಿದ್ಧರ ಕುರಿತಂತೆ ನಾಯಕರು ಆರ್ದ್ರರಾಗಿ ಬರೆದಿದ್ದಾರೆ. ಅವರ ಆರ್ದ ಮತ್ತು ಭಾವಾವೇಶದ ಬರವಣಿಗೆ ವ್ಯಕ್ತಿಗಳ ಮೂಲವ್ಯಕ್ತಿತ್ವವನ್ನು ಮುಸುಕುಗೊಳಿಸುವಂತಿದೆ ಅಥವಾ ಹೀಗೂ ಹೇಳಬಹುದಾದರೆ ಅವರ ಬರಹದ ತನ್ಮಯತೆ ವ್ಯಕ್ತಿಗಳ ಕುರಿತ ಗೌರವ, ವ್ಯಕ್ತಿತ್ವಗಳನ್ನು ಸೃಷ್ಟಿಗೊಳಿಸುವವಲ್ಲಿ ವಿಫಲವಾಗಿದೆ. ಬರಹದಲ್ಲಿ ಈ ವ್ಯಕ್ತಿಗಳ ವ್ಯಕ್ತಿತ್ವದೊಂದಿಗೆ ಒಂದಿಷ್ಟು ದೂರ, ಅಥವಾ ಅಂತರವನ್ನು ಇಟ್ಟುಕೊಂಡಿದ್ದರೆ, ಅ ವ್ಯಕ್ತಿಗಳು ಇನ್ನಷ್ಟು ಸ್ಪಷ್ಟಗೊಳ್ಳುತ್ತಿದ್ದವೇನೊ. ನಾಯಕರ ಭಾವನಾತ್ಮಕ ತೀವ್ರತೆಯೇ ಈ ಭಾಗದ ಲೇಖನಗಳಿಗೆ ಮಿತಿಯನ್ನು ಒಡ್ಡಿದೆ. ಇದು ನಾಯಕರ ಭಾವನಾತ್ಮಕ ಗ್ರಹಿಕೆಗೆ ಸಂವೇದನೆಗೆ ಸಂಬಂಧಿಸಿದ್ದಾದುದರಿಂದ ಬರಹಗಳಲ್ಲಿ ವ್ಯಕ್ತಿತ್ವಗಳ ವಸ್ತು ನಿಷ್ಠತೆಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಆದರೂ ಈ ಅನುಮಾನಗಳೊಂದಿಗೇ ನಾಯಕರ ಭಾವಕೋಶದ ಭಾಗಗಳಾಗಿರುವ ಇಲ್ಲಿನ ಬರಹಗಳು ಓದಬಲ್ಲ ಬರಹಗಳಾಗಿವೆ.

ಎರಡನೇ ಭಾಗದ ಲೇಖನಗಳು ಕನ್ನಡದ ಲೇಖಕರಿಗೆ ಪ್ರಶಸ್ತಿ ಬಂದಾಗ ಮತ್ತು ಲೇಖಕರು ತೀರಿಕೊಂಡಾಗ ಪ್ರಬುದ್ಧ ಕರ್ನಾಟಕಕ್ಕಾಗಿ ಬರೆದ ಸಂಪಾದಕೀಯಗಳಾಗಿವೆ. ಇಲ್ಲಿನ ಲೇಖನಗಳು ಲೇಖಕರ ಸಾಧನೆ, ಪುಸ್ತಕ, ಸಾಮಾನ್ಯ ಮಾಹಿತಿಗಳನ್ನು ಮೀರಿ ಒಂದು ತಾಕುವ ಅನುಭವವಾಗಿ ಬೆಳೆಯುವುದಿಲ್ಲ. ಪತ್ರಿಕೆಯ ಚೌಕಟ್ಟು ಇದಕ್ಕೆ ಕಾರಣವಾಗಿರಬಹುದಾದರೂ, ಒಂದು ರೀತಿಯಲ್ಲಿ ಇವು ದಿನ ಪತ್ರಿಕೆಗಳಲ್ಲಿ ಬರುವ ಮಾಹಿತಿ ಲೇಖನಗಳ ಮಟ್ಟದವುಗಳಾಗಿವೆ.

ಲಂಕೇಶರ ಲೇಖಕರ ಕುರಿತ ಸಂಪಾದಕೀಯ ಬರಹಗಳಿಗೆ ಹೋಲಿಸಿದರೆ ಇಲ್ಲಿನ ಸಂಪಾದಕೀಯಗಳು ಸಾಮಾನ್ಯ ಅದು ಓದುಗರಿಗೆ ಅನಿಸಿದರೆ ಆಶ್ಚರ್ಯವಿಲ್ಲ. (ಓದುಗರು ಲಂಕೇಶ್‌ರ ಟೀಕೆ-ಟಿಪ್ಪಣಿಯಲ್ಲಿನ 'ನಮ್ಮ ಕೃಷ್ಣ' ಸಂಪಾದಕೀಯವನ್ನು ನಾಯಕರ ಈ ಪುಸ್ತಕದಲ್ಲಿನ 'ಜಲ್ವಂತ ಅಂತರಂಗದ ಆಲನಹಳ್ಳಿ' ಎಂಬ ಆಲನಹಳ್ಳಿ ಕೃಷ್ಣರ ಬಗೆಗಿನ ಲೇಖನಗಳನ್ನು ಜೊತೆಗಿಟ್ಟು ನೋಡಿದರೆ ನಾಯಕರ ಈ ಲೇಖನದ ಒಣ ವಿವರಣಾತ್ಮಕತೆ ಎದ್ದುಕಾಣುತ್ತದೆ. ಗಮನಿಸಬೇಕಾದ ಸಂಗತಿ ಎಂದರೆ ಎರಡೂ ಲೇಖನಗಳು ಆಲನಹಳ್ಳಿ ಕೃಷ್ಣರು ತೀರಿಕೊಂಡಾಗ ಸಂದರ್ಭದಲ್ಲೇ ಬರೆದ ಲೇಖನಗಳು).

ನಾಯಕರನ್ನು ಲಂಕೇಶ್‌ರೊಂದಿಗೆ ಹೋಲಿಸುವುದು ಇಲ್ಲಿನ ಉದ್ದೇಶವಲ್ಲ. ಬರಹದ ಜೀವಂತಿಕೆಯನ್ನು ಎತ್ತಿತೋರಿಸುವುದು ಇಲ್ಲಿನ ಉದ್ದೇಶವಾಗಿದೆ.

ಮೇಲಿನ ಮಾತುಗಳನ್ನು ಮೂರನೇ ಭಾಗದ ಎರಡು ಲೇಖನಗಳಿಗೂ ಅನ್ವಯಿಸಬಹುದು. ಆದರೆ ಈ ಭಾಗದಲ್ಲಿನ ಲೇಖನ ನೆನಪಿನಲ್ಲಿ ಉಳಿದ ಶಶಿಪ್ರಭಾ ಪರಿಣಯ. ನಾಯಕರ ಬಾಲ್ಯದ ನೆನಪನ್ನು ಜೊತೆಗೆ ಅಂಕೋಲೆಯ ಸಾಂಸ್ಕೃತಿಕ ನೆನಪನ್ನು ಹಿಡಿದಿಡುವ ಬರಹವಾಗಿದೆ ಮತ್ತು ಹೆಚ್ಚು ಜೀವಂತವಾಗಿದೆ. ಈ ಲೇಖನ ಅವರ ಯಕ್ಷಗಾನ ಲೋಕದ ಸಂಬಂಧದ ಒಂದು ಪ್ರಸಂಗವನ್ನೂ ಹೇಳುವಂತಿದೆ.

ಜಿ.ಎಚ್. ನಾಯಕರ ವಿಮರ್ಶೆಗಳನ್ನು ಓದಿ ಮುಖ ಗಂಟುಹಾಕಿಕೊಂಡವರು ಗಂಟು ಸಡಿಲಿಸಿ ಈ ಪುಸ್ತಕವನ್ನು ಪ್ರೀತಿಯಿಂದಲೇ ಓದಲು ಎತ್ತಿಕೊಳ್ಳಬಹುದಾಗಿದೆ.



ಸೂರ್ಯ ಗಂಧೀಧರಣಿ

ಲೇಖಕಿ : ಪಿ. ಚಂದ್ರಿಕಾ

ಬೆಲೆ : 70/-

ಪ್ರಕಾಶನ : ಅಕ್ಷರಪ್ರಕಾಶನ, ಸಾಗರ

ಈಗಾಗಲೇ ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ ಎಂಬ ಕವನ ಸಂಕಲನವನ್ನು ಪ್ರಕಟಿಸಿರುವ ಪಿ. ಚಂದ್ರಿಕಾ, ತಮ್ಮ ಎರಡನೇ ಸಂಕಲನ 'ಸೂರ್ಯಗಂಧೀಧರಣಿ' ಯನ್ನು ಪ್ರಕಟಿಸಿದ್ದಾರೆ.

ಮೊದಲು ಸಂಕಲನದ ಮುನ್ನುಡಿಯನ್ನು ಗಮನಿಸಿ ಆಮೇಲೆ ಸಂಕಲನದ ಕವಿತೆಗಳ ಕಡೆ ಹೋಗಬಹುದು. ಸಂಕಲನ ಪ್ರತೀಕ ವಿಸಂಗತಿ ಕಥನೀಕರಿಸುವುದು. ಚಾರಿತ್ರಿಕ ಕಾಲಘಟ್ಟದ ಭಾಷೆಯಲ್ಲಿ ಮುನ್ನುಡಿ ಬರೆದಿರುವ ಬಿ.ಯು. ಸುಮಾ ನವ್ಯೋತ್ತರ ಸಂವೇದನೆಯಲ್ಲಿ ಇಲ್ಲಿನ ಕವಿತೆಗಳನ್ನು

ಗುರುತಿಸಿದ್ದಾರೆ. 'ನವ್ಯೋತ್ತರ ಸಂವೇದ'ನೆ ಎಂಬುದು ಕನ್ನಡ ಕಾವ್ಯದಲ್ಲಿ ಇದೆಯೆಂಬುದು ಇಲ್ಲಿನ ಕವಿತೆಗಳನ್ನು ಓದಿದ ಮೇಲೆ ಸ್ಪಷ್ಟವಾಗುವುದಿಲ್ಲ. 'ಭೂಮಿ ತತ್ವದ' ಹಿನ್ನಲೆಯಲ್ಲಿ ಚಂದ್ರಿಕಾರ ಕವನಗಳನ್ನು ವಿಶ್ಲೇಸುವ ಸುಮಾ, ಜೊತೆಗೆ ಚರಿತ್ರೆಯನ್ನು ಕವನಗಳಿಗೆ ಅನ್ವಯಿಸಿದ್ದಾರೆ. ಇವನ್ನೆಲ್ಲ ಕವಿತೆಗಳಲ್ಲಿ ಹುಡುಕ ಹೋದರೆ ಅಂಥದ್ದೇನೂ ಓದುಗರಿಗೆ ಸಿಗುವುದಿಲ್ಲ. ಈಗಾಗಲೇ ಕನ್ನಡ ಚಿಂತನೆಯಲ್ಲಿ ಸಾಕಷ್ಟು ಎಳೆದಾಡಿರುವ, ಗೊಂದಲ ಹೆಚ್ಚಿಸಿರುವ ಸಂಸ್ಕೃತಿ, ನವ್ಯ, ನವ್ಯೋತ್ತರ ವಿಸಂಗತಿ, ಕಥನೀಕರಿಸುವುದು ಇಂಥ ಮಾತುಗಳನ್ನು ಬಳಸಿ ತಾವೂ ವರ್ಗದ ಕೋಣೆಯ ವಿಮರ್ಶಕರೆಂಬುದನ್ನು ಸಾಬೀತು ಮಾಡಿದ್ದಾರೆ. ಇಂಥ ಶಬ್ದಗಳು ಚಿಂತನೆಯನ್ನು ನಮ್ಮ ಒಳ ನೋಟಗಳನ್ನು ಒಂದು ಮಿತಿಗೆ ಒಳಪಡಿಸುವ ಎಂಬುದು ನಾವಿಗ ತಿಳಿಯದ ಸಂಗತಿಯೇನಲ್ಲ. ಕವಿತೆಗಳೊಂದಿಗೆ ನೇರ ಸಂವಾದ ಏರ್ಪಡಿಸದ ಇಂಥ ಮುನ್ನುಡಿಗಳು ಕವಿತೆಗಳೆಂದರೆ ಮಾರು ದೂರ ಓಡುವ ಓದುಗರನ್ನು ಇನ್ನೂ ಒಂದು ಮಾರು ದೂರವಿಡುತ್ತದೆ. ಹಾಗಾಗಿ ಕಾವ್ಯವನ್ನು ಪರಿಚಯಿಸುವ ಇಂಥ ಬರಹಗಳು ಸರಳವಾಗಿರಬೇಕಾದುದು ತೀರ ಅಗತ್ಯ. ಹೀಗೆ ಬರೆದ ಅನೇಕ ವಿಮರ್ಶಕರು ಈಗ (ತುಕ್ಕು) ಜಂಗು ಹಿಡಿದಿರುವುದಕ್ಕೆ ಉದಾಹರಣೆ ಕೊಡಬೇಕಿಲ್ಲ.

ಇಲ್ಲಿನ ಕವಿತೆಗಳಿಗೆ ಮುನ್ನುಡಿ ತಕ್ಕುದಾಗಿಯೂ ಇದೆ. ಚಂದ್ರಿಕಾರ ಕವಿತೆಗಳಲ್ಲಿ ಮಾತು ಸುಲಭವಾಗಿದೆ. ಬರಹ ಸಲೀಸಾಗಿದೆ. ಹೀಗಿದ್ದಾಗ ಕವಿತೆಗಳಿಗೆ ಪ್ರಾಣ ಇರುವುದಿಲ್ಲ. ಕಾವ್ಯದ ರೂಪುಗಳನ್ನು ಬರೆಯಬೇಕಾದ ಮಾತೇ ಇಲ್ಲಿ ತೊಡಕಿನದಾಗಿದೆ. ಆದರೆ ಮಾತಿಲ್ಲದೇ ಕಾವ್ಯವಿಲ್ಲ. ಮಾತನಾಡುತ್ತಲೇ ಇರುವ ಅತೀ ಮಾತುಗಾರನ ಮಾತುಗಳು ನಮ್ಮ ಮನಸಿನೊಳಗೆ ಇಳಿಯುವುದಿಲ್ಲ. ಇಲ್ಲಿನ ಕವಿತೆಗಳು ಒಡ್ಡುವ ಮತ್ತೊಂದು ತೊಂದರೆ ಎಂದರೆ ಕವಿತೆಯಲ್ಲಿನ ಒಂದು ಚಿತ್ರಕ್ಕೂ ಮತ್ತೊಂದು ಚಿತ್ರಕ್ಕೂ ಸಂಬಂಧ ಏರ್ಪಡದಿರುವುದು:

ತೊನ್ನು ಹಿಡಿದಿದೆ ಮಣ್ಣು
ಮೈ ಪೂರಾ ಕಣ್ಣು
ಅಳೆದು ಬಿಟ್ಟರು ಯಾರೋ
ಈ ಭೂಮಿಯ ಇಂಚು ಇಂಚು
ಅಗಣಿತ ಸುಳ್ಳುಗಳ ನಡುವೆ
ಚಕ್ಕಳದ ಬೊಂಬೆಯಾಟ
ಮುಕ್ಕುವ ರಾತ್ರಿಗಳು
ಹೊಕ್ಕು ಮನೆಯಲ್ಲೆಲ್ಲಾ
ದಶ ದಿಕ್ಕಿಗೆ ಹೊರಳಿಸಿದ ಗಾಳಿ
ಜೀವ ಅಂಗೈಲಿ

(ಪುಟ 35, ತೊನ್ನು ಹಿಡಿದಿದೆ.)

ನೀರು ಗಾಳಿ, ಮಣ್ಣು, ಬೆಂಕಿ, ಆಕಾಶ
ಹೆಸರಿಟ್ಟವರು ಯಾರೋ
ನಾ ಹೀಗೆ ಕರೆದಾಗ
ದಂಗಾಗಿದ್ದೇನೆ

ಸಯಾಮಿಸ್ ಅವಳಿಗಳಂತೆ
ಆ ಕಡೆ ಈ ಕಡೆ ತಲೆ
ಕೈ ಕಾಲುಗಳ ಚೆಲ್ಲಿ ಅಚ್ಚರಿ ಹುಟ್ಟಿಸುತ್ತದೆ.

(ಪುಟ 31, ಒಂದು ಪುಟ್ಟ ಗೆರೆ)

ಇಂತಹ ಅಸ್ಪಷ್ಟ ಚಿತ್ರಗಳು ಬಹುಪಾಲು ಕವಿತೆಗಳಲ್ಲಿ ಮಾತಿನ ಅಬ್ಬರ ಇದ್ದಾಗ ಚೂರು ಚೂರಾದ ಈ ಬಗೆಯ ಚಿತ್ರಗಳು ಕಾಣಿಸಿಕೊಳ್ಳುತ್ತವೆ. ಕವಿ ಕಾವ್ಯದ ಮೌನವನ್ನು ಕೇಳಿಸಿಕೊಂಡಿಲ್ಲ ಎಂದೆನಿಸುವುದು ಇಂಥ ಕವಿತೆಗಳಲ್ಲಿ.

ರಮ್ಯವಾಗಿ ಬರೆಯಲು ಯತ್ನಿಸುವ ಕವಿ ಒಂದು ಹಂತದಲ್ಲಿ ಸ್ಥಗಿತಗೊಳ್ಳುತ್ತಾನೆ. ಒಂದು ತಾಕುವ ಅನುಭವವಾಗಲಿ, ಕಾವ್ಯದ ವಿಸ್ಮಯವಾಗಲಿ, ಬೆರಗನ್ನಾಗಲಿ ಇಂಥ ಕವಿತೆಗಳಲ್ಲಿ ನಾವು ನಿರೀಕ್ಷಿಸುವಂತಿಲ್ಲ. ಈ ಸಂಕಲನದ ಮಳೆ (ಪುಟ 30) ಈ ಬಗೆಯದು. ಒಂದು ಮನ ಮುಟ್ಟುವ ಚಿತ್ರವಾಗಿ ಇರಬಹುದಾದ ಈ ಸಂಕಲನದ ಅನೇಕ ಕವಿತೆಗಳು ಕವಿಯ ಚಂದವಾಗಿ ಬರೆಯಬೇಕೆನ್ನುವ ಹಂಬಲದಿಂದಾಗಿಯೇ ವಿಫಲವಾಗಿದೆ. ಆ ಸಾಲುಗಳು ನಮ್ಮ ಸಂವೇದನೆಗೆ ಬಂದು ಕೂಡಿಕೊಳ್ಳುವ ಸಾಲುಗಳಲ್ಲ. ಹಾಗಾಗಿ ಅವು ಕವಿತೆಗಳಿಂದ ಬೇರೆಯಾಗಿ ನಿಲ್ಲುತ್ತವೆ. ಒಂದು ಸಂಗತಿಯನ್ನು ನಿರೂಪಿಸುವ ಈ ದಾರಿ ಎಲ್ಲಿಗೆ ಕವಿತೆ ಒಂದು ಭಾವ ಕೇಂದ್ರದಲ್ಲಿ ತನ್ನ ವಿವರಗಳಲ್ಲಿ ಬೆಳೆಯುವ ಕವಿತೆಯಾಗಿದೆ. ಈ ಕವಿತೆಯ ದಾರಿ ನಮ್ಮ ಹಿರಿಯರು ಬರೆದು ತೋರೆದ ದಾರಿ. ಚಂದ್ರಿಕಾರ ಕಾವ್ಯದ ಕಣ್ಣಿಗೆ ಜಗತ್ತನ್ನು ಅರಿಯುವ ಕುತೂಹಲವಾಗಲಿ, ಇದ್ದ ಸವೆದಾರಿಯನ್ನು ಬಿಟ್ಟು ಕಾಲು ದಾರಿಯನ್ನು ಹುಡುಕುವ ಮಹತ್ವಾಕಾಂಕ್ಷೆಯಾಗಲಿ ಇದೆಯೆಂದು ಅವರ ಈ ಸಂಕಲನದ ಕವಿತೆಗಳನ್ನು ಓದಿದಾಗ ಅನ್ನಿಸುವುದಿಲ್ಲ.

'ನಾಳೆ ಬಾ' ಭಯ ತಲ್ಲಣಗಳನ್ನು ಅಭಿವ್ಯಕ್ತಿಗೊಳಿಸಿದ, ಮಿಂಚುಹುಳ, ಬಾಲ್ಯದ ಅನುಭವವನ್ನು, ಮುಗ್ಧತೆಯನ್ನು ತೋರುವ, ದಸರೆಯ ಬೊಂಬೆ, 'ಮಾರ್ಕೆಟ್ಟಿಗೆ ಬಂದಿದೆ ಮಾವಿನಕಾಯಿ', ಗೂಡು ಇದ್ದುದರಲ್ಲಿ ಸಂಕಲನದ ಸಫಲ ಕವಿತೆಗಳು ಮತ್ತು ಅವರು ಇನ್ನು ಮುಂದೆ ಹಿಡಿಯ ಬಹುದಾದ ಕಾವ್ಯದ ಕ್ಷಣಗಳು, ಇಂಥವು ಆಗಬಹುದೆಂದು ತೋರುತ್ತದೆ.

– ಸಂದೀಪ ನಾಯಕ್




ಗ್ಯಾಲರಿ




'Stop thinking'

ರವಿಕಾಶಿಯವರ ಕಲಾಕೃತಿ



MAG PRB DECL 309 / 94-95



ಎಂ.ಎಫ್.ಹುಸೇನ್ Splash Front Page

SANCHAYA
Edited, Printed & Published by D.V. Prahlad
100, II Main, VIth Block, IIIrd Stage, IIIrd phase
Banashankari, Bangalore - 560 085. Ph : 080-6791 925